ಕನ್ನಡ ವಿಶ್ವವಿದ್ಯಾನಿಲಯ, ಹಂಪಿ

೨೦೦೧-೦೨ನೇ ಸಾಲಿನ ಎಂ.ಫಿಲ್. ಪದವಿ ಪರೀಕ್ಷೆಗೆ ಸಂಬಂಧಿಸಿದಂತೆ ಕನ್ನಡ
ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಲಾಗುತ್ತಿರುವ ಸಂಶೋಧನಾ ನಿಬಂಧ

"ದೇವನೂರು ಮಹಾದೇವ ಮತ್ತು ಸಿದ್ಧಲಿಂಗಯ್ಯನವರ ಸಾಹಿತ್ಯದಲ್ಲಿ ದಲಿತ ಪ್ರಜ್ಞೆ"

ಮಾರ್ಗದರ್ಶಕರು

ಡಾ. ಪಿ.ಕೆ. ರಾಜಶೇಖರ್

ನಿವೃತ್ತ ಕನ್ನಡ ಪ್ರಾಧ್ಯಾಪಕರು
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸ ಗಂಗೋತ್ರಿ
ಮೈಸೂರು.

ನಿಬಂಧಕಾರರು

ಎ.ಎನ್. ಗಜೇಂದ್ರ
ಎಂ.ಫಿಲ್ ವಿದ್ಯಾರ್ಥಿ

ಶ್ರೀ ಕುವೆಂಪು ವಿದ್ಯಾವರ್ಧಕ ಟ್ರಸ್ಟ್
ಜಯಲಕ್ಷ್ಮಿಪುರಂ
ಮೈಸೂರು.

೨೦೦೧-೦೨

ಕನ್ನಡ ವಿಶ್ವವಿದ್ಯಾನಿಲಯ, ಹಂಪಿ

೨೦೦೩-೦೪ನೇ ಸಾಲಿನ ಎಂ.ಫಿಲ್. ಪದವಿ ಪರೀಕ್ಷೆಗೆ ಸಂಬಂಧಿಸಿದಂತೆ ಕನ್ನಡ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಲಾಗುತ್ತಿರುವ ಸಂಶೋಧನಾ ನಿಬಂಧ

"ದೇವನೂರು ಮಹಾದೇವ ಮತ್ತು ಸಿದ್ಧಲಿಂಗಯ್ಯನವರ ಸಾಹಿತ್ಯದಲ್ಲಿ ದಲಿತ ಪ್ರಜ್ಞೆ"

ಮಾರ್ಗದರ್ಶಕರು

ಡಾ. ಪಿ.ಕೆ. ರಾಜಶೇಖರ್

ನಿವೃತ್ತ ಕನ್ನಡ ಪ್ರಾಧ್ಯಾಪಕರು
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸ ಗಂಗೋತ್ರಿ
ಮೈಸೂರು.

ನಿಬಂಧಕಾರರು

ಎ.ಎನ್. ಗಜೇಂದ್ರ

ಎಂ.ಫಿಲ್ ವಿದ್ಯಾರ್ಥಿ

ಶ್ರೀ ಕುವೆಂಪು ವಿದ್ಯಾವರ್ಧಕ ಟ್ರಸ್ಟ್

ಜಯಲಕ್ಷ್ಮಿಪುರಂ

ಮೈಸೂರು.

೨೦೦೩-೦೪

ಘೋಷಣಾ ಪತ್ರ

ಕನ್ನಡ ವಿಶ್ವವಿದ್ಯಾನಿಲಯದಲ್ಲಿ ಎಂ.ಫಿಲ್. ಪದವಿ ವಿದ್ಯಾರ್ಥಿಯಾಗಿ ಅಧ್ಯಯನ ಮಾಡುತ್ತಿರುವ ನಾನು **ಡಾ. ಪಿ.ಕೆ. ರಾಜಶೇಖರ್** ಅವರ ಮಾರ್ಗದರ್ಶನದಲ್ಲಿ ಎಂ.ಫಿಲ್ ಪದವಿಯ ಒಂದು ಭಾಗವಾದ ನಿಬಂಧ ರಚನೆಗೆ ಸಂಬಂಧಿಸಿದಂತೆ ***"ದೇವನೂರು ಮಹಾದೇವ ಮತ್ತು ಸಿದ್ಧಲಿಂಗಯ್ಯನವರ ಸಾಹಿತ್ಯದಲ್ಲಿ ದಲಿತ ಪ್ರಜ್ಞೆ"*** ಎಂಬ ಈ ವಿಷಯವನ್ನು ಆಯ್ಕೆ ಮಾಡಿಕೊಂಡು ಸಂಶೋಧನಾ ನಿಬಂಧವನ್ನು ಸಿದ್ಧಪಡಿಸಿರುತ್ತೇನೆ.

ಈ ಸಂಶೋಧನಾ ನಿಬಂಧವನ್ನು ಈ ಮೊದಲು ಭಾಗಶಃವಾಗಲಿ, ಪೂರ್ಣವಾಗಿಯಾಗಲಿ, ಬೇರಾವುದೇ ಪದವಿ ಅಥವಾ ಡಿಪ್ಲೊಮಾಗಳಿಗಾಗಲಿ ಯಾವುದೇ ವಿಶ್ವವಿದ್ಯಾನಿಲಯಕ್ಕೂ ಒಪ್ಪಿಸಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಸ್ಥಳ : ಮೈಸೂರು
ದಿನಾಂಕ : ೧೨-೦೮-೨೦೦೨.

ನಿಂಬಂಧಕಾರರು
ಗಜೇಂದ್ರ ಎ.ಎನ್.
(ಎ.ಎನ್. ಗಜೇಂದ್ರ)

ಮಾರ್ಗದರ್ಶಕರ ಪ್ರಮಾಣ ಪತ್ರ

ಕನ್ನಡ ವಿಶ್ವವಿದ್ಯಾನಿಲಯದಲ್ಲಿ ಎಂ.ಫಿಲ್. ಪದವಿ ವಿದ್ಯಾರ್ಥಿಯಾಗಿ ಅಧ್ಯಯನ ಮಾಡುತ್ತಿರುವ ಎ.ಎನ್.ಗಜೇಂದ್ರ ಅವರು ನನ್ನ ಮಾರ್ಗದರ್ಶನದಲ್ಲಿ ಎಂ.ಫಿಲ್ ಪದವಿಯ ಒಂದು ಭಾಗವಾದ ನಿಬಂಧ ರಚನೆಗೆ ಸಂಬಂಧಿಸಿದಂತೆ ***"ದೇವನೂರು ಮಹಾದೇವ ಮತ್ತು ಸಿದ್ಧಲಿಂಗಯ್ಯನವರ ಸಾಹಿತ್ಯದಲ್ಲಿ ದಲಿತ ಪ್ರಜ್ಞೆ"*** ಎಂಬ ಈ ವಿಷಯವನ್ನು ಆಯ್ಕೆ ಮಾಡಿಕೊಂಡು ಸಂಶೋಧನಾ ನಿಬಂಧವನ್ನು ಸಿದ್ಧಪಡಿಸಿರುತ್ತಾರೆ.

ಈ ಸಂಶೋಧನಾ ನಿಬಂಧವನ್ನು ಈ ಮೊದಲು ಭಾಗಶಃವಾಗಲಿ, ಪೂರ್ಣವಾಗಿಯಾಗಲಿ, ಬೇರಾವುದೇ ಪದವಿ ಅಥವಾ ಡಿಪ್ಲೊಮಾಗಳಿಗಾಗಲಿ ಯಾವುದೇ ವಿಶ್ವವಿದ್ಯಾನಿಲಯಕ್ಕೂ ಒಪ್ಪಿಸಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಸ್ಥಳ : ಮೈಸೂರು
ದಿನಾಂಕ : ೧೨.೦೮.೨೦೦೭

ಮಾರ್ಗದರ್ಶಕರು

(ಡಾ.ಪಿ.ಕೆ. ರಾಜಶೇಖರ್)

ಡಾ. ಪಿ. ಕೆ. ರಾಜಶೇಖರ್
ಕನ್ನಡ ಪ್ರಾಧ್ಯಾಪಕರು
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ
ಮೈಸೂರು-೫೭೦೦೦೬

ಕೃತಜ್ಞತೆಗಳು

"ದೇವನೂರು ಮಹಾದೇವ ಮತ್ತು ಸಿದ್ಧಲಿಂಗಯ್ಯನವರ ಸಾಹಿತ್ಯದಲ್ಲಿ ದಲಿತ ಪ್ರಜ್ಞೆ" ಎಂಬ ಈ ನಿಬಂಧವನ್ನು ರಚಿಸಲು ನನಗೆ ಸೂಕ್ತ ಮಾರ್ಗದರ್ಶನ ಹಾಗೂ ಸಲಹೆಗಳನ್ನು ನೀಡಿದ ಪೂಜ್ಯ ಗುರುಗಳಾದ **ಡಾ. ಪಿ.ಕೆ. ರಾಜಶೇಖರ್** ಅವರಿಗೆ ಹೃದಯಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಈ ಅಧ್ಯಯನದ ಸಂದರ್ಭದಲ್ಲಿ ಮಾರ್ಗದರ್ಶನ ಮತ್ತು ಸಹಾಯ ಮಾಡಿದ ನನ್ನ ತಾಯಿ ಶ್ರೀಮತಿ ನಾಗಮ್ಮ ಮತ್ತು ತಂದೆ ಶ್ರೀ ನಾಗಬಸವಯ್ಯ ಅವರಿಗೆ ನಾನು ಋಣಿಯಾಗಿದ್ದೇನೆ.

ಅಧ್ಯಯನದ ಮಾಹಿತಿ ಸಂಗ್ರಹ ಹಾಗೂ ನನ್ನ ಬರವಣಿಗೆಯ ಹಂತದಲ್ಲಿ ಸಹಕರಿಸಿದ ನನ್ನ ಸ್ನೇಹಿತೆ ಎಲ್. ಸವಿತ, ಶ್ರೀಮತಿ ಸ್ಮಿತಾ ಹಾಗೂ ಸ್ನೇಹಿತರಾದ ಕೆಂಪರಾಜು ಅವರಿಗೂ ಮತ್ತು ಸಕಾಲಕ್ಕೆ ನಮಗೆ ಈ ಸಂಪ್ರಬಂಧವನ್ನು ಮುದ್ರಿಸಿಕೊಟ್ಟ 'ಎ' ಪಾಯಿಂಟ್ ಡಿ.ಟಿ.ಪಿ. ಸೆಂಟರ್, ಬೋಗಾದಿ ಅವರಿಗೂ ಸಹ ಕೃತಜ್ಞನಾಗಿರುತ್ತೇನೆ.

ಸ್ಥಳ : ಮೈಸೂರು

ದಿನಾಂಕ : 12-08-2002

ನಿಬಂಧಕಾರರು

ಗಜೇಂದ್ರ ಎ.ಎನ್

(ಎ.ಎನ್. ಗಜೇಂದ್ರ)

ಪರಿವಿಡಿ

ಅಧ್ಯಾಯ – ೧

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ದೇವನೂರ ಮಹಾದೇವ ಮತ್ತು ಸಿದ್ದಲಿಂಗಯ್ಯ ದಲಿತ ಸಾಹಿತ್ಯದಲ್ಲಿ ಪ್ರಖ್ಯಾತನಾಮಗಳು. ದಲಿತ ಸಾಹಿತ್ಯದ ಆರಂಭ ಕಾಲದಲ್ಲಿ ಮುಂಚೂಣಿಯಲ್ಲಿದ್ದ ಇವರು ಕನ್ನಡ ದಲಿತ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಅಪಾರ ಕೊಡುಗೆಯನ್ನಿತ್ತಿದ್ದಾರೆ. ಇವರು ತಮ್ಮ ಸಾಹಿತ್ಯದಲ್ಲಿ ಎಷ್ಟರ ಮಟ್ಟಿಗೆ ದಲಿತ ಪ್ರಜ್ಞೆಯ ಛಾಪುಮೂಡಿಸಿದ್ದಾರೆ ಎಂಬುದನ್ನು ತಿಳಿದುಕೊಳ್ಳುವ ಪ್ರಯತ್ನದಲ್ಲಿ ಇವರ ಸಾಹಿತ್ಯವನ್ನು ಅಧ್ಯಯನ ಮಾಡುವ ಉದ್ದೇಶ ನನ್ನದಾಗಿದೆ.

ದೇವನೂರ ಮಹದೇವ ಮತ್ತು ಸಿದ್ಧಲಿಂಗಯ್ಯ ಅವರು ಸಾಹಿತ್ಯದ ಮೂಲಕ ಗ್ರಾಮೀಣ ಜನರ, ಅದರಲ್ಲೂ ದಲಿತರ ಬದುಕನ್ನು ಯಾವ ರೀತಿ ಚಿತ್ರಿಸಿದ್ದಾರೆ, ಅವರ ಸಂಸ್ಕೃತಿ, ಸಂಪ್ರದಾಯ, ನಂಬಿಕೆಗಳನ್ನು ಹೇಗೆ ಪಡಿಮೂಡಿಸಿದ್ದಾರೆ, ನಗರ ದಲಿತ ಜನರ ಜೀವನ ಮತ್ತು ಗ್ರಾಮೀಣ ದಲಿತ ಜನರ ಜೀವನ ಯಾವ ರೀತಿ ಇದೆ ಎಂಬುದನ್ನು ತಿಳಿದುಕೊಳ್ಳುವ ಪ್ರಯತ್ನ ಈ ಅಧ್ಯಯನದಲ್ಲಿ ನಡೆದಿದೆ. ಭಾರತದಂತಹ ಜಾತಿ ವ್ಯವಸ್ಥೆ, ವರ್ಗವ್ಯವಸ್ಥೆ ಪ್ರಧಾನ ರಾಷ್ಟ್ರದಲ್ಲಿ ದಲಿತ ಜನರ ಸಮಸ್ಯೆಗಳೇನು? ಸಮಾಜದ ಇಂಥ ವ್ಯವಸ್ಥೆಯಲ್ಲಿ ದಲಿತರು ಹೇಗೆ ಶೋಷಣೆಗೊಳಗಾಗಿದ್ದಾರೆ. ದಲಿತರ ಬದುಕಿನಲ್ಲಿ ಬಡತನ ಹೇಗೆ ಕಾಡುತ್ತದೆ ಮತ್ತು ದುರಂತಮಯವಾಗುತ್ತದೆ, ಒಟ್ಟಾರೆಯಾಗಿ ಬಡತನದ ಪರಿಸ್ಥಿತಿ ಜನರನ್ನು ಯಾವ ಮಟ್ಟಕ್ಕೆ ಕೊಂಡೊಯ್ಯುತ್ತದೆ ಎಂಬ ಅಂಶಗಳ ಬಗ್ಗೆ ಈ ನಿಬಂಧದಲ್ಲಿ ಅಧ್ಯಯನ ಮಾಡಲಾಗಿದೆ. ಇಷ್ಟೇ ಅಲ್ಲದೆ ಈ ಸಮಾಜದ ರಾಜಕೀಯ, ಆರ್ಥಿಕ, ಸಾಮಾಜಿಕ ವ್ಯವಸ್ಥೆಗಳು ದಲಿತರ ಮೇಲೆ ಯಾವ ರೀತಿಯ ಪ್ರಭಾವ ಬೀರುತ್ತವೆ ಎಂಬುದನ್ನು ಈ ಅಧ್ಯಯನದ ಹಿನ್ನೆಲೆಯಲ್ಲಿ ಇವರಿಬ್ಬರ ಸಾಹಿತ್ಯವನ್ನು ಮುಖ್ಯವಾಗಿಟ್ಟುಕೊಂಡು ಮೇಲಿನ ಅಂಶಗಳ ಈ ನಿಬಂಧದಲ್ಲಿ ತಿಳಿಸುವ ಪ್ರಯತ್ನ ಮಾಡಲಾಗಿದೆ.

ಈ ನಿಬಂಧದಲ್ಲಿ ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ದೇವನೂರರ ಕಥಾ ಸಾಹಿತ್ಯ ಮತ್ತು 'ಒಡಲಾಳ', 'ಕುಸುಮಬಾಲೆ' ಕಾದಂಬರಿಗಳನ್ನು ಈ ಅಧ್ಯಯನದ ವ್ಯಾಪ್ತಿಗೆ ಸೇರಿಸಿಕೊಳ್ಳಲಾಗಿದೆ. ಇಲ್ಲಿ ಮಹಾದೇವ ಅವರು ವ್ಯಕ್ತಪಡಿಸಿರುವ ದಲಿತ ಪ್ರಜ್ಞೆಯನ್ನು ಅವರ ಸಾಹಿತ್ಯದ ಹಿನ್ನೆಲೆಯಲ್ಲಿ ತಿಳಿದುಕೊಳ್ಳುವ ಪ್ರಯತ್ನ ನಡೆದಿದೆ. ಅದೇ ರೀತಿ ಸಿದ್ಧಲಿಂಗಯ್ಯನವರ 'ಹೊಲೆಮಾದಿಗರ ಹಾಡು', 'ಸಾವಿರಾರು ನದಿಗಳು' ಮತ್ತು 'ಕಪ್ಪುಕಾಡಿನ ಹಾಡು' ಕವನ ಸಂಕಲನಗಳು ಮತ್ತು 'ಏಕಲವ್ಯ' 'ಪಂಚಮ ಮತ್ತು ನೆಲಸಮ' ನಾಟಕಗಳನ್ನು ಈ ಅಧ್ಯಯನದ ವ್ಯಾಪ್ತಿಯಲ್ಲಿ ಒಂದೊಂದೇ ಕೃತಿಗಳನ್ನು ಮುಖ್ಯವಾಗಿಟ್ಟುಕೊಂಡು ಇವರ ಸಾಹಿತ್ಯದಲ್ಲಿರುವ ದಲಿತ ಪ್ರಜ್ಞೆಯನ್ನು ತಿಳಿದಷ್ಟು ಮಟ್ಟಿಗೆ ಹೊರಹಾಕುವ ಪ್ರಯತ್ನ ಮಾಡಲಾಗಿದೆ.

ಅಧ್ಯಾಯ – ೨

ದಲಿತ ಸಾಹಿತ್ಯ ಹಿನ್ನೆಲೆ, ಪ್ರಭಾವ ಮತ್ತು ಪ್ರೇರಣೆಗಳು

ಹೊಸಗನ್ನಡ ಸಾಹಿತ್ಯಘಟ್ಟದಲ್ಲಿ ದಲಿತ ಸಾಹಿತ್ಯ ಘಟ್ಟವು ಪ್ರಮುಖವಾದುದಾಗಿದೆ. ದಲಿತರು, ದಲಿತೇತರರು ಮತ್ತು ಪ್ರಗತಿಶೀಲರು ದಲಿತಪ್ರಜ್ಞೆಯಿಂದ ದಲಿತರನ್ನು ಕುರಿತು ರಚಿಸಿದ ಸಾಹಿತ್ಯವೇ ದಲಿತ ಸಾಹಿತ್ಯ. ಈ ದಲಿತ ಸಾಹಿತ್ಯ ೬೦ರ ದಶಕದ ಅಂತ್ಯ ಮತ್ತು ೭೦ರ ದಶಕದ ಆರಂಭದ ಕಾಲ ಸಾಂಸ್ಕೃತಿಕವಾಗಿ ತಲ್ಲಣಗೊಂಡಂತ ಕಾಲ. ಇಂಥ ಕಾಲದಲ್ಲಿ ದಲಿತ ಸಾಹಿತ್ಯ ಚಿಗುರೊಡೆಯತೊಡಗಿತು. ಯಾವುದೇ ನಿಶ್ಚಿತ ನೆಲೆಯಿಲ್ಲದೆ ಕ್ಷಣದಿಂದ ಕ್ಷಣಕ್ಕೆ ನೀರ ಮೇಲಿನ ಗುಳ್ಳೆಯಂತೆ ಮೂಡುವ, ಮುಳುಗುವ ವೈಚಾರಿಕ ಸಂಘರ್ಷಕ್ಕೆ ನಾಂದಿ ಹಾಡಿದ ಕಾಲ ಇದಾಗಿದೆ. ಈ ಸಂದರ್ಭದಲ್ಲಿ ದಲಿತ ಎಂಬ ಪದ ಕಾಣಿಸಿಕೊಂಡಿತು. ಈ ದಲಿತ ಪದ ಮಹಾರಾಷ್ಟ್ರದಿಂದ ವಲಸೆ ಬಂದಂತಿದೆ. ಕನ್ನಡ ಸಾಹಿತ್ಯದಲ್ಲಿ ಈ ಪದವನ್ನು ೧೯೭೨ ರಿಂದ ಬಳಸಲಾಯಿತು.

೧೯೭೯ರಲ್ಲಿ 'ಹಾವನೂರ ಆಯೋಗದ ವರದಿ'ಯನ್ನು ಜಾರಿಗೆ ತರಬೇಕೆಂದು ಹಿರಿಯ ದಲಿತ ರಾಜಕೀಯ ನಾಯಕರು, ಚಿಂತಕರು ಹೋರಾಟ ಆರಂಭಿಸಿದರು. ಈ ಸಂದರ್ಭದಲ್ಲಿ ಹೋರಾಟದ ನೇತೃತ್ವವನ್ನು ಬಿ. ಬಸಲಿಂಗಪ್ಪನವರು ವಹಿಸಿದ್ದರು. ೧೯೭೩ರಲ್ಲಿ ಮಲ ಹೊರುವ ಪದ್ಧತಿಯನ್ನು ಕುರಿತು ಚಿಂತನೆ ನಡೆಯಿತು. ಇಂತಹ ಪ್ರಸಂಗಗಳು ದಲಿತರಲ್ಲಿ ದಲಿತ ಪ್ರಜ್ಞೆ ಮತ್ತು ಜಾಗೃತಿಯನ್ನು ಮೂಡಿಸಿದವು. ಇದೇ ವೇಳೆಯಲ್ಲಿ ದಲಿತ ಸಾಹಿತ್ಯಕ್ಕೆ ತುರ್ತುಪರಿಸ್ಥಿತಿಯು ಅಪ್ರತ್ಯಕ್ಷವಾಗಿ ಪ್ರೇರಣೆಯೊದಗಿಸಿತು.

೧೯೭೪ರ 'ಬೂಸಾ ಪ್ರಕರಣ'ವು ದಲಿತ ಸಾಹಿತ್ಯಕ್ಕೆ ಪ್ರೇರಣೆ ಒದಗಿಸಿತು. ಈ ಬೂಸಾ ಪ್ರಕರಣದ ಘಟನೆ ದಲಿತರಲ್ಲಿ ಸಾಮಾಜಿಕವಾಗಿ ಒಗ್ಗೂಡಿ ಹೋರಾಡುವ ಮನೋಭಾವವನ್ನು ಹುಟ್ಟುಹಾಕಿತು. ಈ ಸಂದರ್ಭದಲ್ಲಿ ಬ್ರಾಹ್ಮಣ ಪ್ರಜ್ಞೆ, ಶೂದ್ರಪ್ರಜ್ಞೆ, ದಲಿತ ಪ್ರಜ್ಞೆ ಎಂಬ ಸಾಮಾಜಿಕ ಹೊಯ್ದಾಟಗಳು ಕಾಣಿಸಿಕೊಂಡವು. ಶೋಷಣೆಗೆ ಒಳಗಾಗುತ್ತಿರುವವರು ಯಾರು? ಯಾರು ಯಾರನ್ನು ಶೋಷಣೆ ಮಾಡುತ್ತಿದ್ದಾರೆ? ಎಂಬುದನ್ನು ಕುರಿತು ಚಿಂತನೆ ನಡೆಯಿತು.

೧೯೭೫ರಲ್ಲಿ ದಲಿತ ಬರಹಗಾರರ ಯುವಸಂಘಟನೆ ಬೆಳಕಿಗೆ ಬಂತು ಇದು ೧೯೭೬ರಲ್ಲಿ ಭದ್ರಾವತಿಯಲ್ಲಿ ಸಮ್ಮೇಳನವೊಂದನ್ನು ಮಾಡಿತು. ಈ ಸಮಾರಂಭದಲ್ಲಿ ಪ್ರಜ್ಞಾವಂತ ದಲಿತ ಬರಹಗಾರರ ಸಂಖ್ಯೆ ಎಣಿಸುವಷ್ಟು ಇತ್ತು. ಪ್ರಗತಿಪರ ದಲಿತೇತರರು ದಲಿತರ ಸಮಸ್ಯೆಗಳನ್ನು ಮುಖ್ಯವಾಗಿಟ್ಟುಕೊಂಡು ಜನಸಮುದಾಯದೆಡೆಗೆ ಹೆಜ್ಜೆಹಾಕಿದರು. ಪ್ರಗತಿಶೀಲ ಆಶಯಗಳನ್ನು ಪುನರುಜ್ಜೀವಿಸುವ ಆಶಯದಿಂದ ಪ್ರಾರಂಭವಾದ ಪ್ರಗತಿಪಂಥ ೧೯೭೬ರಲ್ಲಿ ತನ್ನ ಮೊದಲ ಸಾಹಿತ್ಯ ಸಮ್ಮೇಳನ ನಡೆಸಿತು. ಇದೇ ವೇಳೆಯಲ್ಲಿ ದಲಿತರು ದಲಿತಪಂಥ ಎಂಬ ಹೆಸರಿನೊಂದಿಗೆ ಕಾಣಿಸಿಕೊಂಡರು. ಇವರಲ್ಲಿ ಹೆಚ್ಚಿನವರೆಲ್ಲಾ ಮಾರ್ಕ್ಸ್ ವಾದಿಗಳೇ ಆಗಿದ್ದರು. ಈ ಮಾರ್ಕ್ಸ್‌ವಾದವು ದಲಿತ ಸಾಹಿತ್ಯಕ್ಕೆ ಪ್ರೇರಣೆಯಾಗಿದೆ.

೧೯೭೯ರ ಮಾರ್ಚಿನಲ್ಲಿ ೫೧ನೇ ಕನ್ನಡ ಸಾಹಿತ್ಯ ಸಮ್ಮೇಳನದ ಸಿದ್ಧತೆ ನಡೆಯುವಾಗ ದಲಿತ ಬರಹಗಾರರು ಸಮ್ಮೇಳನದಲ್ಲಿ ದಲಿತಗೋಷ್ಠಿಯನ್ನಿಡಲು ಕೋರಿದರು. ಆದರೆ ಸಮ್ಮೇಳನದ ಅಧ್ಯಕ್ಷರು ಇವರ ಬೇಡಿಕೆಯನ್ನು ತಿರಸ್ಕರಿಸಿದಾಗ ದಲಿತರು–ದಲಿತೇತರರು ಒಂದು ಕಡೆ ಸೇರಿ ಬಂಡಾಯ ವೇದಿಕೆ ರಚಿಸಿಕೊಂಡರು. ಇವರಲ್ಲಿ ಭಿನ್ನಾಭಿಪ್ರಾಯಗಳು ಬಂದು ಮುಂದೆ ದಲಿತಬಂಡಾಯವೇದಿಕೆ ಏರ್ಪಟ್ಟಿತು. ದಲಿತರು ಪ್ರತ್ಯೇಕವಾಗಿ ದಲಿತ ಸಮಾವೇಶಗಳನ್ನು, ವಿಚಾರಸಂಕೀರ್ಣಗಳನ್ನು ಆರಂಭಿಸಿದರು. ೧೯೮೩ರಲ್ಲಿ ಈ ಪ್ರತ್ಯೇಕತೆಯನ್ನು ಗುರುತಿಸಿಕೊಳ್ಳಲು ದಲಿತ ಲೇಖಕರ ಕಲಾವಿದರ ಬಳಗವನ್ನು ರಚಿಸಿಕೊಂಡರು. ಇದರ ಸಂಚಾಲಕರ ಸಮಿತಿಯಲ್ಲಿ ಸಿದ್ಧಲಿಂಗಯ್ಯ, ಇಂದೂಧರ ಹೊನ್ನಾಪುರ, ವಿ. ಮುನಿವೆಂಕಟಪ್ಪ ಮುಂತಾದವರಿದ್ದರು. ಇವರು ಈ ಸಂಘಟನೆಯ ಮೂಲಕ ತಮ್ಮದೇ ಆದ ಕಾರ್ಯಕ್ರಮಗಳ ರೂಪಿಸಿಕೊಂಡರು. ಸಮಾಜದಲ್ಲಿರುವ ವರ್ಗ ಸಂಘರ್ಷದಿಂದಾಗಿ ಇಲ್ಲಿನ ಬಹುಸಂಖ್ಯಾತರ ತುಳಿತಕ್ಕೆ ಒಳಗಾಗಿದ್ದಾರೆ. ಜಾತಿ, ಭೇದ, ನೀತಿ ಭಾರತದಂತಹ ದೇಶದಲ್ಲಿ ಅನೇಕ ಶತಮಾನಗಳಿಂದ ಬೇರುಬಿಟ್ಟಿದೆ. ಮನುಷ್ಯ ಮನುಷ್ಯನ ನಡುವೆ ಅಸಮಾನತೆಯನ್ನು ಬಿತ್ತುವ ಈ ವ್ಯವಸ್ಥೆ ಸಹಜವಾಗಿ ದಲಿತ ಬರಹಗಾರರ ಕ್ರೋಧಕ್ಕೆ ತುತ್ತಾಗಿದೆ ಎನ್ನಬಹುದು. ಇವರಿಗೆ ಅಂಬೇಡ್ಕರ್ ಮತ್ತು ಲೋಹಿಯ ಪ್ರೇರಣೆಯಾಗಿದ್ದಾರೆ. ಜಾತಿವ್ಯವಸ್ಥೆಯ ವಿರುದ್ಧ ಹೋರಾಡಿದ ಬುದ್ಧ ಬಸವಣ್ಣರಂತಹ ಅನೇಕರು ಇತಿಹಾಸದಲ್ಲಿ ಕಂಡುಬರುತ್ತಾರಾದರೂ ಅವರ ಪ್ರಯತ್ನ ಶಾಶ್ವತ ಫಲವನ್ನು ಪಡೆದಿಲ್ಲ. ಹುಟ್ಟಿನಿಂದ ದಲಿತರಾಗಿ ಈ ವ್ಯವಸ್ಥೆಯ ಕಹಿಯುಂಡ ಅಂಬೇಡ್ಕರ್ ಈ ಹೋರಾಟವನ್ನು ಅಜೀವ ಹೋರಾಟವನ್ನಾಗಿ ಮಾಡಿಕೊಂಡಿದ್ದರಲ್ಲಿ ಆಶ್ಚರ್ಯವೇನಿಲ್ಲಾ.

ದಲಿತರ ಹಕ್ಕುಗಳಿಗಾಗಿ ಅವರಿಗೆ ದೊರೆಯಬೇಕಿದ್ದ ನ್ಯಾಯಕ್ಕಾಗಿ ಹೋರಾಡುವವರಿಗೆ ಅವರು ಸ್ಫೂರ್ತಿಯಾಗಿದ್ದಾರೆ. ಕಳೆದ ದಶಕದಿಂದ ಅಂಬೇಡ್ಕರ್ ಪ್ರಭಾವ ಹೆಚ್ಚಾಗಿದೆ. ಈ ಎಚ್ಚರದ ಒಂದು ಪರಿಣಾಮವಾಗಿ ಮತ್ತು ಇಂತಹ ಎಚ್ಚರವನ್ನು ಮೂಡಿಸುವ ಸಲುವಾಗಿ 'ಕರ್ನಾಟಕ ದಲಿತ ಸಂಘರ್ಷ ಸಮಿತಿ' ಕೆಲಸ ಮಾಡಲಾರಂಭಿಸಿತು. ಅನೇಕ ಸಾಹಿತಿಗಳು ಈ ಸಮಿತಿಯಲ್ಲಿ ಸಕ್ರಿಯ ಪಾತ್ರ ವಹಿಸಿದ್ದು ಸಾಹಿತ್ಯದ ಮೂಲಕವೂ ಈ ಎಚ್ಚರವನ್ನು ಮೂಡಿಸಲು ಪ್ರಯತ್ನಿಸಿದ್ದಾರೆ.

ನವ್ಯ ಸಾಹಿತ್ಯವು ಸ್ವ ಅನುಭವಕ್ಕೆ ಹೆಚ್ಚಿನ ಆದ್ಯತೆ ನೀಡಿತು. ದಲಿತರ ಬರವಣಿಗೆಯಲ್ಲೂ ಕೂಡಾ ಈ ಸ್ವ ಅನುಭವ ಮೊದಲು ಕಾಣಿಸಿಕೊಂಡಿತು. ಆದರೂ ಅವರ ಬರವಣಿಗೆಯಲ್ಲಿ ಈ ಸಮಾಜ ವ್ಯವಸ್ಥೆಯ ಕ್ರೌರ್ಯ, ಶೋಷಣೆಗಳು ಕಾಣತೊಡಗಿತು. ಹೀಗೆ ದಲಿತ ಬರವಣಿಗೆ ವ್ಯಕ್ತಿ ನಿಷ್ಠತೆಯಿಂದ ಸಮಷ್ಟಿಯ ಕಡೆಗೆ ತಿರುಗಲು ಸಾಮಾಜಿಕ ಪ್ರಜ್ಞೆ ಮತ್ತು ವರ್ಣನಿಷ್ಠ ಪ್ರಜ್ಞೆಗಳು ಕಾರಣವಾದವು.

"ಭಾರತೀಯ ಮತ್ತು ಅನ್ಯಭಾಷಾ ಸಾಹಿತ್ಯದ ಪ್ರಭಾವ ದಲಿತ ಸಾಹಿತ್ಯಕ್ಕಿದೆ. ಉತ್ತರ ಕರ್ನಾಟಕದ ಲೇಖಕರ ಮೇಲೆ ಮಹಾರಾಷ್ಟ್ರದ ದಲಿತ ಪ್ಯಾಂಥರ್ಸ್ ಚಳುವಳಿ ಪ್ರಭಾವ ಅಧಿಕವಾಗಿರುವಂತೆ ದಕ್ಷಿಣ ಕರ್ನಾಟಕದ ದಲಿತ ಬರಹಗಾರರ ಮೇಲೆ ತೆಲುಗಿನ ದಿಗಂಬರ ಹಾಗೂ ತಿರುಗು ಬಡುಲು ಕಾವ್ಯದ ಪ್ರಭಾವ ಅಧಿಕವಾಗಿದೆ."[೧]

ದಕ್ಷಿಣ ಆಫ್ರಿಕಾದ ಕಪ್ಪು ಸಾಹಿತ್ಯ ನಮ್ಮಲ್ಲಿನ ದಲಿತ ಲೇಖಕರ ಮೇಲೆ ಸಾಕಷ್ಟು ಪ್ರಭಾವ ಬೀರಿತು. ದಕ್ಷಿಣ ಆಫ್ರಿಕಾದ ಕಪ್ಪುತನ ಅಲ್ಲಿನ ಲೇಖಕರಿಗೆ ಶ್ರೇಷ್ಠ ಸಂಕೇತವಾದಂತೆ ಇಲ್ಲಿನ ದಲಿತ ಸಾಹಿತಿಗಳಿಗೆ ತಮ್ಮ ಸುತ್ತಮುತ್ತಲಿನ ವಿಚಾರಗಳೇ ಸ್ವಾಭಿಮಾನದ ಸಂಕೇತಗಳು ಆದವು.

ನವ್ಯ ಪಂಥದಿಂದ ಹೊರಬಂದ 'ಲೋಹಿಯಾ ಮಂಚ'ದ ಪ್ರತಿಪಾದಕರು ಇಲ್ಲಿನ ಸಾಮಾಜಿಕ ವ್ಯವಸ್ಥೆಯ, ಶೂದ್ರತ್ವದ ನೆಲೆಯಿಂದ ಮೇಲೇರಿದರು. ಲೋಹಿಯಾವಾದ ಆರಂಭದಲ್ಲಿ ಸಾಕಷ್ಟು ಕಾಣಿಸಿಕೊಂಡರೂ ಅನಂತರ ದಲಿತ ಸಾಹಿತ್ಯದಿಂದ ಮತ್ತು ಕನ್ನಡ ಸಾಹಿತ್ಯದಿಂದಲೇ ದೂರ ಉಳಿಯಿತು. ಲೋಹಿಯಾವಾದಿ ಬರಹಗಾರರು ಸಂಘಟನಾತ್ಮಕ

---

[೧] ಅರವಿಂದ ಮಾಲಗತ್ತಿ : ದಲಿತ ಸಾಹಿತ್ಯ ಪ್ರವೇಶಿಕೆ : ಪು.ಸಂ. ೨೫.

ಶಕ್ತಿಗಳಿಂದ ದೂರ ಉಳಿದು ತಮ್ಮತನವನ್ನು ಕಾಯ್ದುಕೊಳ್ಳಲು ಹವಣಿಸಿದರು ಹೀಗಾಗಿ ಲೋಹಿಯಾ ವಾದ ಮರೆಯಲಾಯಿತು. ದಲಿತರು ಮುಖ್ಯವಾಗಿ 'ಅಂಬೇಡ್ಕರ್ ವಾದ'ವನ್ನು ಎತ್ತಿ ಹಿಡಿದರು. ಇಲ್ಲಿನ ಸಾಮಾಜಿಕ ಸಮಸ್ಯೆಗಳಿಗೆ 'ಅಂಬೇಡ್ಕರ್ ವಾದ' ಮುಖ್ಯ ಎಂಬುದನ್ನು ಮನಗಂಡರು. ಗಾಂಧೀವಾದವು ದಲಿತ ಸಾಹಿತ್ಯಕ್ಕೆ ಅಪ್ರತ್ಯಕ್ಷವಾಗಿ ಪ್ರೇರಣೆಯೊದಗಿಸಿದೆ.

ಭಾರತದಂತಹ ದೇಶದಲ್ಲಿ 'ಶಿಕ್ಷಣ' ದಲಿತರಿಗೆ ದೊರಕುವುದು ತುಂಬಾ ಕಷ್ಟವಾಗಿತ್ತು. ಇಂತಹ ಸಂದರ್ಭದಲ್ಲಿ ಶಿಕ್ಷಣದಲ್ಲಿ ಎಲ್ಲರಿಗೂ ಸಮಾನತೆ ಇದ್ದುದರಿಂದ ದಲಿತರ ಬದುಕಿನಲ್ಲಿ ಈ 'ಶಿಕ್ಷಣ' ಮಹತ್ವದ ಪಾತ್ರ ವಹಿಸಿತು. ಈ ಶಿಕ್ಷಣ ದೊರೆತಿದ್ದರಿಂದಾಗಿ ಮೊದಲು ಅಕ್ಷರ ಕಲಿತು ಲೇಖನಿ ಹಿಡಿಯಲು ಆರಂಭಿಸಿದರು. ಈ ದಲಿತ ಸಾಹಿತ್ಯದಿಂದ ಕನ್ನಡ ಸಾಹಿತ್ಯದಲ್ಲಿ ಹೊಸ ಅಲೆಗಳು, ಆಶಾಕಿರಣಗಳು ಮೂಡುವಂತಾದವು. ಜಾನಪದದ ಅಧ್ಯಯನ – ಜನಾಂಗಿಕ ಅಧ್ಯಯನಗಳು ದಲಿತ ಸಾಹಿತ್ಯಕ್ಕೆ ಹೊಸ ಆಯಾಮವನ್ನು ಒದಗಿಸಿದವು. ಇದರಿಂದ ಜಾನಪದ ಕ್ಷೇತ್ರದಲ್ಲೂ ದಲಿತರು ಮುಂದೆ ಬಂದರು.

"ಕುದುರೆ ಮೋರೆ ಪ್ರಕರಣ, ಬೆಲ್ಚಿಪ್ರಕರಣ, ಕಾರಂಚೇಡು ಪ್ರಕರಣ, ಮೀಸಲಾತಿ ವಿರೋಧಿ ಪ್ರಕರಣ, ಮತಾಂತರದ ಪ್ರಸಂಗಗಳು, ಭೂ ಅಕ್ರಮಣದ ಪ್ರಸಂಗಗಳು, ಭೂ ಹೋರಾಟದ ಪ್ರಸಂಗಗಳು, ವೆಂಕಟಸ್ವಾಮಿ ಆಯೋಗದ ವರದಿ, ಗಾಂಧಿ ಚಲನಚಿತ್ರ ಬಹಿಷ್ಕಾರ, ಮುನಿವೆಂಕಟಪ್ಪ ಪ್ರಕರಣ, ಮಲತಿನ್ನಿಸಿದ ಪ್ರಕರಣ, ಬೆತ್ತಲೆಸೇವೆ ವಿರೋಧಿ ಪ್ರಕರಣ, ಚುನಾವಣಾ ಬಹಿಷ್ಕಾರ."[೧] ಹೀಗೆ ಹಲವಾರು ಸನ್ನಿವೇಶಗಳು ದಲಿತ ಸಾಹಿತ್ಯಕ್ಕೆ ಪೂರಕವಾಗಿ ಪ್ರೇರಣೆ ಮತ್ತು ಪ್ರಭಾವ ಒದಗಿಸಿವೆ.

---

[೧] ಅರವಿಂದ ಮಾಲಗತ್ತಿ : ದಲಿತ ಸಾಹಿತ್ಯ ಪ್ರವೇಶಿಕೆ : ಪು.ಸಂ. ೨೬.

ಅಧ್ಯಾಯ – ೩

ದೇವನೂರು ಮಹಾದೇವ ಅವರ ಕಥಾ ಸಾಹಿತ್ಯ

ದೇವನೂರ ಮಹಾದೇವ ಕನ್ನಡದ ದಲಿತ ಸಾಹಿತ್ಯ ಲೇಖಕರಲ್ಲಿ ಪ್ರಮುಖರಾದವರು. ಇವರು ಬರೆದಿರುವುದು ಬಹಳ ಕಡಿಮೆ ಆದರೆ ಇವರು ದಲಿತ ಸಾಹಿತಿಯಾಗಿ ಪ್ರಚಾರ ಪಡೆದಿರುವುದು ಬಹಳಷ್ಟು. ದೇವನೂರ ಮಹಾದೇವ ಅವರು ದಲಿತ ಚಳುವಳಿಯ ಪೂರ್ವದಲ್ಲಿ ರಾಮಮನೋಹರ ಲೋಹಿಯ ಮತ್ತು ಅಂಬೇಡ್ಕರ್ ಚಿಂತನೆಗಳಿಂದ ಪ್ರಭಾವಿತರಾಗಿದ್ದಾರೆ. ಇವರು ಸಮಾಜವಾದಿ ಆಂದೋಲನದ ಒಡನಾಟದಲ್ಲಿ ಬೆಳೆದು ಬಂದಿದ್ದಾರೆ. ಇವರು 'ದಲಿತ ಸಂಘರ್ಷ ಸಮಿತಿ'ಯನ್ನು ರಚಿಸಿಕೊಂಡು ತಮ್ಮ ಕಾರ್ಯ ವೈಖರಿಯನ್ನು ಬೆಳೆಸಿಕೊಂಡರು. ದಲಿತ ಸಂಘರ್ಷ ಸಮಿತಿಯ ಬಹಿಷ್ಕಾರವನ್ನು ತೀವ್ರವಾಗಿ ಪ್ರತಿಭಟಿಸಿದರು. ದೇವನೂರರು ದಲಿತ ಪ್ರಜ್ಞೆಯಿಂದ ಹುಟ್ಟಿದ ಅಪರೂಪದ ಬರಹಗಾರ ಎಂದು ಹೇಳಬಹುದು. ದಲಿತ ಚಳುವಳಿಯ ಘರ್ಷಣೆ ಸಂಘರ್ಷದ ದಿನಗಳ ಪ್ರಾರಂಭದ ಹಂತಗಳಲ್ಲಿ ಇವರ ಬರವಣಿಗೆಗಳು ದಲಿತ ಬದುಕಿನ ಒಳಾವರಣಗಳನ್ನು, ಒಳಜಗತ್ತಿನ ಆಂತರಿಕ ಪ್ರಜ್ಞೆಯನ್ನು ಕಟ್ಟಿಕೊಟ್ಟಿದ್ದಾವೆ. ದಲಿತ ವರ್ಗದಿಂದ ಬಂದ ಮಹಾದೇವ ಅವರು ದಲಿತರ ಒಳನೋವುಗಳನ್ನು, ತುಡಿತಗಳನ್ನು, ದಲಿತ ಪ್ರಜ್ಞೆಯನ್ನು ತಮ್ಮ ಸಾಹಿತ್ಯದಲ್ಲಿ ಕಲಾತ್ಮಕವಾಗಿ ಚಿತ್ರಿಸಿದ್ದಾರೆ.

ಇವರು ದ್ವಿತಿಯ ಎಂ.ಎ. ತರಗತಿಗೆ ಹೋಗುತ್ತಿರುವಾಗಲೇ ಅಂದರೆ ೧೯೭೩ರಲ್ಲಿ ಇವರ 'ದ್ಯಾವನೂರು' ಕಥಾಸಂಕಲನ ಪ್ರಕಟವಾಯಿತು. ನವ್ಯ ಸಾಹಿತ್ಯ ತುಟ್ಟತುದಿಯಲ್ಲಿದ್ದ ಕಾಲದಲ್ಲಿ 'ಸಾಕ್ಷಿ' ಪತ್ರಿಕೆಯಲ್ಲಿ ಇವರ 'ದತ್ತ' ಕಥೆ ಮೊದಲೇ ಪ್ರಕಟವಾಗಿತ್ತು. 'ಡಾಂಬರು ಬಂದುದು' ಕಥೆ, 'ಜಾತಕ ಪಕ್ಷಿಯ ಅಳಲುಗಳು', 'ಭೂಮಿ ಸುತ್ತುತ್ತಲೇ ಇತ್ತು' ಮತ್ತು 'ತುಡುಗುಗವನ' ಮುಂತಾದ ಬರವಣಿಗೆಗಳು ಪತ್ರಿಕೆಗಳಲ್ಲಿ ಪ್ರಕಟವಾಗಿದ್ದವು. ೧೯೭೮ರಲ್ಲಿ 'ಒಡಲಾಳ' ಎಂಬ ಕಿರು ಕಾದಂಬರಿ ಪ್ರಕಟವಾಯಿತು. ೧೯೮೮ರಲ್ಲಿ 'ಕುಸುಮಬಾಲೆ' ಕಾದಂಬರಿ ಪ್ರಕಟವಾಯಿತು. ಇವರ ಸಮಗ್ರ ಕೃತಿಗಳು ೧೯೯೨ರಲ್ಲಿ ಪ್ರಕಟವಾಯಿತು. 'ಸಮಾಜವಾದಿ ಯುವಜನಸಭಾ' ಮತ್ತು 'ದಲಿತ ಸಂಘರ್ಷ ಸಮಿತಿ' ಈ ಎರಡು ಚಳುವಳಿಗಳು

ಮಹಾದೇವ ಅವರನ್ನು ರೂಪಿಸಿದವು ಎಂದು ಹೇಳಬಹುದು. ದಲಿತರು ಮತ್ತು ಸವರ್ಣಿಯರು – ಇಬ್ಬರನ್ನು ಖಂಡಿಸುವ ಗುಣ ದೇವನೂರರ ಸಾಹಿತ್ಯದಲ್ಲಿ ಕಾಣಬಹುದು. ಹೀಗೆ ಮಹಾದೇವ ಅವರು ದಲಿತ ಚಳುವಳಿಗಳು ಮತ್ತು ಸಂಘಟನೆಗಳಲ್ಲಿ ಭಾಗವಹಿಸುವುದರ ಮೂಲಕ ಬರಹಕ್ಕೂ ತೊಡಗಿಕೊಂಡರು. ಇವರ ಸಾಹಿತ್ಯದಲ್ಲಿರುವ ದಲಿತ ಪ್ರಜ್ಞೆಯನ್ನು ಕೃತಿಗಳನ್ನು ಅವಲೋಕಿಸುವುದರ ಮೂಲಕ ತಿಳಿಯಬಹುದು.

'ದ್ಯಾವನೂರು' ಕಥಾಸಂಕಲನ

'ದ್ಯಾವನೂರು' ಕಥಾಸಂಕಲನದಲ್ಲಿ ೭ ಕಥೆಗಳು ಇವೆ. ಅವುಗಳೆಂದರೆ 'ಮಾರಿಕೊಂಡವರು', 'ಗ್ರಸ್ತರು', 'ಒಂದು ದಹನದ ಕಥೆ', 'ದತ್ತ', 'ಡಾಂಬರು ಬಂದುದು', 'ಮೂಡಲ ಸೀಮೇಲಿ ಕೊಲೆ ಗಿಲೆ ಮುಂತಾಗಿ', ಮತ್ತು 'ಅಮಾಸ' – ಈ ಕೆಲವು ಕಥೆಗಳಲ್ಲಿ ಮಹಾದೇವ ಅವರು ದಲಿತ ಪ್ರಜ್ಞೆಯನ್ನು ವ್ಯಕ್ತಪಡಿಸಿರುವ ರೀತಿಯನ್ನು ನೋಡಬಹುದು.

ಜೀವನದಲ್ಲಿ ಯಾವುದೇ ರೀತಿಯ ಭದ್ರತೆಯನ್ನು ಹೊಂದಿರದ ಅಸಹಾಯಕ ಜನರ ದಾರುಣಮಯ ಸ್ಥಿತಿ 'ಮಾರಿಕೊಂಡವರು' ಕಥೆಯಲ್ಲಿದೆ. "ವ್ಯವಸ್ಥೆ ಕ್ರೌರ್ಯದ ಪರಮಾವಧಿ ಇಲ್ಲಿಯ ಬೀರ ಮತ್ತು ಲಕ್ಷ್ಮಿಯರನ್ನು ನಿರ್ಗತಿಕರನ್ನಾಗಿ ಮಾಡಿ ಈ ಸ್ಥಿತಿಗೆ ಮಾರಿದೆ. ಈ ಸ್ಥಿತಿಯಿಂದ ಇವರನ್ನು ಮೇಲು ಜಾತಿಯ ಜನ ಕೂಲಿ ಆಳಾಗಿ ಅಮಾನತ್ತಾಗಿ ಕಂಡುಕೊಳ್ಳುವಂತೆ ಮಾಡಿದೆ."[೧]

ಬೀರ ಮತ್ತು ಲಕ್ಷ್ಮಿಯರು ಕೂಲಿ ಕೆಲಸ ದೊರಕಿಸಿಕೊಳ್ಳುವುದಕ್ಕೆ ಪರದಾಡುವ ಶ್ರಮಜೀವಿಗಳ ಪ್ರತಿನಿಧಿಗಳಾಗಿದ್ದಾರೆ. ಈ ಕಥೆಯ ಕೇಂದ್ರ ಬಿಂದುವಾಗಿ ಶ್ರಮ ಶೋಷಣೆ ಮತ್ತು ಲೈಂಗಿಕ ಶೋಷಣೆ ಕಾಣಿಸಿಕೊಂಡಿದೆ. ಈ ಕಥೆಯಲ್ಲಿ ಗೌಡ, ಲಕ್ಷ್ಮಿ ಮತ್ತು ಬೀರರಿಗೆ ಕೆಲಸವನ್ನು ಕೊಟ್ಟು : ಗೌಡರ ಹಂಗಿನಲ್ಲಿದ್ದ ಲಕ್ಷ್ಮಿಯು ಕಿಟ್ಟಪ್ಪನಿಗೆ ಮೈ ಒಪ್ಪಿಸುವ ; ಜೀವಮಾನವನ್ನೇ ಹಿಂಡುವ ಹೆಂಡತಿಯ ಈ ವರ್ತನೆಯನ್ನು ಕಂಡು ಬೀರನು ಸುಮ್ಮನಾಗಿರಬೇಕಾದ ಅಸಹಾಯಕ ಸ್ಥಿತಿಯ ಮೂಲಕ ಮಹಾದೇವ ಅವರು ದಲಿತ ಪ್ರಜ್ಞೆಯನ್ನು ವಾಸ್ತವ ನೆಲೆಗಟ್ಟಿನಲ್ಲಿ ಚಿತ್ರಿಸಿದ್ದಾರೆ.

---

[೧] ಬಿ.ಎಂ. ಪುಟ್ಟಯ್ಯ : ದೇವನೂರ ಮಹಾದೇವ : ಪು.ಸಂ. ೩

ಗೌಡನಿಗೆ ಎದುರಾಡಿದರೆ ಕೆಲಸವನ್ನು ಕಳೆದುಕೊಳ್ಳುತ್ತಾರೆ. ವ್ಯವಸ್ಥೆ ಅವರಿಗೆ ದಯಮಾಡಿಸಿರುವ ಈ ಅಭದ್ರತೆಯ ಅನಿವಾರ್ಯತೆಯಿಂದಾಗಿ ಅವರು ಮಾರಿಕೊಂಡವರಾಗಿದ್ದಾರೆ. ಕಿಟ್ಟಪ್ಪನಿಂದ ಬಾಡು ಸ್ವೀಕರಿಸಿದ ಬೀರನಿಗೆ ಬಾಡು ಮತ್ತು ಕುಡಿತದ ಮೋಹವಿರುವಂತೆ ಕಂಡುಬರುತ್ತದೆ. ಬೀರ ಕುಡಿದ ಅಮಲಿನಲ್ಲಿ ರೋಷ ಮತ್ತು ಸೇಡಿನ ಮನೋಭಾವವನ್ನು ಪ್ರಕಟಿಸುತ್ತಾನೆ. ಆದರೆ ಸಮಸ್ಥಿತಿಯಲ್ಲಿದ್ದಾಗ ಅಸಹಾಯಕನಾಗುತ್ತಾನೆ. ಬೀರ ಕುಡಿದು ಧೈರ್ಯವಾಗಿ ಮಾತನಾಡುವುದನ್ನು ದಲಿತ ಜನಾಂಗದ ಪ್ರತಿಭಟನೆಯಾಗಿ, ಪ್ರಜ್ಞೆಯಾಗಿ ವ್ಯಕ್ತಪಡಿಸಿದ್ದಾರೆ. ಪರಿಸ್ಥಿತಿಯ ಒತ್ತಡದಿಂದಾಗಿ ಹೆಂಡವೇ ಬೀರನನ್ನು ಬಲಿ ತೆಗೆದುಕೊಂಡಂತಿದೆ.

"ಕಥೆಯ ಮೈಯಲ್ಲಿರುವುದು ಜಮೀನ್ದಾರಿ ಸಮಾಜದ ಆರ್ಥಿಕ ಸಂಬಂಧ ಮತ್ತು ಇದರ ನೆಲೆಯೊಳಗೆ ಉಂಟಾಗುವ ಲೈಂಗಿಕ ಸಂಬಂಧ ಇವು ಒಂದರೊಡನೊಂದು ಬೆಸೆದು ಬಂದಿವೆ. ಗಂಡ ಹೆಂಡತಿಯ ಪ್ರೀತಿ-ಪ್ರೇಮ, ಹಾಸ್ಯ, ವ್ಯಂಗ್ಯ, ಸಿಟ್ಟು, ಸ್ವಾಭಿಮಾನ, ಅಸಹಾಯಕತೆಗಳು ವಸ್ತುವಿಗನುಗುಣವಾಗಿ ಭಾಷೆಯ ಮೂಲಕ ಆಕಾರ ಪಡೆಯುತ್ತಾ ಸಾಗುತ್ತವೆ."[೧]

'ಗ್ರಸ್ತರು' ದ್ಯಾವನೂರು ಕಥಾಸಂಕಲನದ ಎರಡನೇ ಕಥೆ. ಕಥೆಯಲ್ಲಿ ನಾಯಕನ ಬಡತನದ ಸಮಸ್ಯೆ ಪ್ರಮುಖವಾಗಿ ಕಾಣಿಸಿಕೊಳ್ಳುತ್ತದೆ. ಹಂಗು ಎನ್ನುವುದು ವ್ಯಕ್ತಿಯ ಸ್ವತಂತ್ರ ಜೀವನಕ್ಕೆ ಹೇಗೆ ಒಂದು ದೊಡ್ಡ ಸಮಸ್ಯೆಯಾಗುತ್ತದೆ ಎಂಬ ವಿಷಯದ ಸುತ್ತ 'ಗ್ರಸ್ತರು' ಕಥೆ ಹೆಣೆದುಕೊಂಡಿದೆ. 'ಗ್ರಸ್ತರು' ಕತೆಯ ನಾಯಕ ದಲಿತ ಹುಡುಗ. ಈತ ಕೆಳಜಾತಿಯವನಾಗಿ ಓದಿ ನೌಕರಿ ಪಡೆದು ತನ್ನ ಸಂಸ್ಕೃತಿಯಿಂದಲೇ ಬೇರ್ಪಟ್ಟಿದ್ದಾನೆ. ತನ್ನ ಅವ್ವ, ದೊಡ್ಡವ್ವ, ಗೌಡ, ಮೇಲ್ಜಾತಿಯ ಹೆಣ್ಣು, ನೌಕರಿ ಈ ಸಂಬಂಧಗಳ ಚೌಕಟ್ಟಿನಲ್ಲಿ ಕಥೆಯ ವಿವರಗಳು ಮೈದಾಳಿವೆ. ಕಥಾನಾಯಕ ತನ್ನ ಮನೋಧರ್ಮಕ್ಕೆ ವಿರುದ್ಧವಾಗಿ ನಡೆದುಕೊಳ್ಳಲಾಗಿದೇ ಭ್ರಷ್ಟ ವ್ಯವಸ್ಥೆಗೆ ಹೇಸಿಕೊಂಡು ಕಥಾನಾಯಕ ಕೆಲಸಕ್ಕೆ ರಾಜೀನಾಮೆ ಕೊಡುತ್ತಾನೆ. ಅದು ಗೌಡರು ಶಿಫಾರಸ್ಸು ಮಾಡಿ ಕೊಡಿಸಿದ್ದ ಕೆಲಸ. ನಾಯಕ ಕೆಲಸ ಬಿಟ್ಟಿದ್ದು ತಮಗೆ ಮಾಡಿದ ಅವಮಾನವೆಂದು ಭಾವಿಸಿದ ಗೌಡ ತಮಗೆ ಕೊಡಬೇಕಾಗಿದ್ದ ಹಣವನ್ನು ವಸೂಲಿ ಮಾಡಿಕೊಳ್ಳಲು ಒತ್ತಡ ಹೇರುವುದರ ಮೂಲಕ ಸೇಡು ತೀರಿಸಿಕೊಳ್ಳಲು ಹವಣಿಸುತ್ತಾನೆ. ಆದರೆ ದಲಿತ ಹುಡುಗನ ತಾಯಿ ಗೌಡರೆಂದರೆ ದೇವರೆಂದು ಭಾವಿಸಿದ್ದಳು. "ಈ ಉಭಯ ಶಕ್ತಿಗಳ ಹಂಗಿನಲ್ಲಿ ಗೊಂದಲ

---

[೧] ಬಿ.ಎಂ. ಪುಟ್ಟಯ್ಯ : ದೇವನೂರ ಮಹಾದೇವ : ಪು.ಸಂ. ೪.

ಅನುಭವಿಸುವ ನಾಯಕನ ದುಗುಡದ ಚಿತ್ರ ಕಥೆಯಲ್ಲಿ ಬರುತ್ತದೆ. "ಈಗ ನಾವು ಬದ್ಕಿದ್ದೀವಾ?" ಎಂಬ ನಾಯಕನ ಕೊನೆ ಮಾತು ವರ್ಗ ವ್ಯವಸ್ಥೆಯು ಹೇಗೆ ಬಡವರನ್ನು, ದಲಿತರನ್ನು ಜೀವಂತ ಹೆಣವನ್ನಾಗಿಸಿದೆ ಎಂಬ ಘೋರ ಸತ್ಯದ ಕಡೆ ಸಹೃದಯರ ಮನಸ್ಸನ್ನು ಸೆಳೆಯುತ್ತದೆ."[೧]

ಸಮಾಜದಲ್ಲಿ ಮೇಲಿನ ಸ್ತರದ ವ್ಯಕ್ತಿ ಕೆಳಸ್ತರದ ವ್ಯಕ್ತಿಯನ್ನು ಯಾವ ರೀತಿ ತುಳಿಯಬಲ್ಲ, ಒಂದು ಸಮಸ್ಯೆ ಕೆಳಸ್ತರದ ವ್ಯಕ್ತಿಯನ್ನು ಹೇಗೆ ಹೀನಾಯಕ್ಕೊಳಪಡಿಸುತ್ತದೆ, ದಲಿತರ ಬಡತನವನ್ನು ಈ ಸಮಾಜ ಹೇಗೆ ಕಿತ್ತುತಿನ್ನುತ್ತದೆ ಎಂಬ ಸಂವೇದನಾಶೀಲ ಅಂಶಗಳನ್ನು ದೇವನೂರ ಮಹಾದೇವ ಅವರು ಕಥೆಯಲ್ಲಿ ಬಹಳ ಸ್ಪಷ್ಟವಾಗಿ ಚಿತ್ರಿಸಿದ್ದಾರೆ. ಕಥೆಯಲ್ಲಿ ದಲಿತರು ಮೇಲ್ಜಾತಿಯ ಹೆಣ್ಣುಗಳನ್ನು ಪ್ರೀತಿಸುತ್ತಾರೆ ಎಂಬ ಅಂಶವನ್ನು ವ್ಯಕ್ತಪಡಿಸಿದ್ದಾರೆ. ಕಥೆಯ ದಲಿತ ನಾಯಕನನ್ನು ಯುವ ಜನಾಂಗದ ಪ್ರತಿನಿಧಿ ಎನ್ನಬಹುದಾದರು 'ಗ್ರಸ್ತ' ರೂಪದಲ್ಲಿ ಚಿತ್ರಿಸಿರುವುದು ದುರಂತವೇ.

ನಾಯಕ ಹೇಳುವ "ಈಗ ನಾವು ಬದ್ಕಿದ್ದೀವಾ" ಎಂಬ ಮಾತು ಇಡೀ ದಲಿತ ಲೋಕವನ್ನು ಆವರಿಸುವ, ಧ್ವನಿಸುವ ಮಾತಾಗಿದೆ. ಇಲ್ಲಿ ದೇವನೂರರು ಕಥೆಯ ನಾಯಕನ ಅಸಹಾಯಕತೆಯನ್ನು ದಲಿತ ಪ್ರಜ್ಞೆಯ ಮೂಲಕ ಚಿತ್ರಿಸಿದ್ದಾರೆ ಎಂದು ಹೇಳಬಹುದು. ಜೊತೆಗೆ ಸಮಕಾಲೀನ ಸಮಸ್ಯೆಯ ಚಿತ್ರಣವೆಂದು ಹೇಳಬಹುದು. ಇಲ್ಲಿ ದೇವನೂರರು ಕೊಡುವ ಗ್ರಹಿಕೆಗಳು ಶೋಷಿತ ವ್ಯಕ್ತಿಯ ಪರವಾಗಿವೆ.

'ಒಂದು ದಹನದ ಕಥೆ' ಅಂತರ್ಜಾತಿಯ ಸಂಬಂಧದ ಸಮಸ್ಯೆಗಳನ್ನು ವಿವರಿಸುತ್ತದೆ ಹೊಸ ತಲೆಮಾರಿನ ಗಂಡು ಹೆಣ್ಣಿನ ಈ ಪ್ರಕ್ರಿಯೆ ಪ್ಯಾಷನ್ ಆಗುತ್ತಿರುವ ಸಂದರ್ಭದಲ್ಲಿ ದೇವನೂರ ಮಹಾದೇವ ಅವರು ಅದೇ ವಸ್ತುವನ್ನು ಬದುಕಿನ ಅನಿವಾರ್ಯ ಆಶಯವಾಗಿಟ್ಟುಕೊಂಡು ಹೇಗೆ ನಿಭಾಯಿಸುತ್ತಾರೆ ಎಂಬುದು ಗಮನಾರ್ಹವಾದುದು. ಮೇಲುಜಾತಿಯ ಕಮಲಳೊಡನೆ ಕೆಳಜಾತಿಯ ನಿರೂಪಕ ಸಂಬಂಧ ಬೆಳೆಸುತ್ತಾನೆ. ವಿವಾಹ ಪೂರ್ವದ ಸಂಬಂಧದಿಂದಾಗಿ ಆಕೆ ಗರ್ಭಿಣಿಯಾಗುತ್ತಾಳೆ, ಇದು ಸಮಸ್ಯೆಯಾಗುತ್ತದೆ. ನಿರೂಪಕ ತಂದೆ ತಾಯಿ ಇಲ್ಲದ ಅನಾಥ ಊರಿಗೆ ಬಂದಾಗ ಕಮಲಳ ಸಮಸ್ಯೆ ಎದ್ದು ಕೂರುತ್ತದೆ. ಇಡೀ ಊರು ಇವನನ್ನು ಅಪರಾಧಿಯಂತೆ ಕಾಣುತ್ತದೆ. ಅರ್ಥ ಮಾಡಿಕೊಳ್ಳಬೇಕಾದ ದೊಡ್ಡಪ್ಪ

---

[೧] ಜಿ.ಜಿ. ಮಂಜುನಾಥನ್ (ಸಂ) : ಸ್ಕಂದ ನೆನಪಿನ ಸಂಪುಟ : ಪು.ಸಂ. ೩೬೯.

ಮೊಮ್ಮಗಳನ್ನು ಮದುವೆಯಾಗದೇ ಬೇರೆ ಹೆಣ್ಣಿನ ಕಡೆ ಈತನ ಮನಸ್ಸು ಹರಿದಿರುವುದನ್ನು ವಿರೋಧಿಸುತ್ತಾನೆ. ವ್ಯವಸ್ಥೆಯ ಸೂತ್ರಗಳು ಹೇಗೆ ಕರಾರುವಕ್ಕಾಗಿವೆ ಎಂಬುದಕ್ಕೆ ಈ ಸನ್ನಿವೇಶ ಪ್ರಬಲ ನಿದರ್ಶನವಾಗಿದೆ.

ನಿರೂಪಕನ ದೊಡ್ಡಪ್ಪ ಕಮಲಳಿಗೆ ಅವಳದೇ ಜಾತಿಯ ಗಂಡಿನೊಡನೆ ಸಂಬಂಧ ಇತ್ತು ಎಂಬ ಹಣದ ಆಮಿಷ ಒಡ್ಡಿ ಒಪ್ಪಿಸಿ ತನ್ನ ಮೊಮ್ಮಗಳ ಮದುವೆಯನ್ನು ನಿರೂಪಕನ ಜೊತೆ ನೆರವೇರಿಸುತ್ತಾನೆ. ಪ್ರೀತಿಸಿದ ಹೃದಯಗಳನ್ನು ಕೊಲೆ ಮಾಡುತ್ತಾನೆ. ಪುರುಷ ಪ್ರಧಾನ ವ್ಯವಸ್ಥೆಯು ಹೆಣ್ಣನ್ನು ಕೇಳಿ ವ್ಯವಹರಿಸುವುದನ್ನು ತಿರಸ್ಕರಿಸುವುದರಿಂದ, ನಿರೂಪಕ ಕೂಡ ತನ್ನದೇ ಆದ ನೆಲೆಯಲ್ಲಿ ವ್ಯವಸ್ಥೆಯ ತೀರ್ಮಾನವನ್ನು ತಿರಸ್ಕರಿಸುತ್ತಾನೆ. ನಿರೂಪಕ ಕಮಲಳೊಡನೆ ಪಟ್ಟಣ ಸೇರುತ್ತಾನೆ. ಆತನ ಅಜ್ಜಿಯೂ ಪಟ್ಟಣ ಸೇರುತ್ತಾಳೆ. ಅಜ್ಜಿ ಸತ್ತಾಗ ಆತನಿಂದ ಶವಸಂಸ್ಕಾರ ಮಾಡಲು ಹಳ್ಳಿಯಲ್ಲಿ ಅನುಮತಿ ಸಿಗುವುದಿಲ್ಲ. ಆದರೆ ನಿರೂಪಕ ಹಳ್ಳಿಗರೊಂದಿಗೆ ರಾಜಿಮಾಡಿಕೊಳ್ಳದೇ ಅಜ್ಜಿಗೆ ತಾನೊಬ್ಬನೇ ಬೆಂಕಿ ಕಾಣಿಸುತ್ತಾನೆ. ಅಂತಿಗೊನೆ ನಾಟಕದ ಪ್ರಭಾವವನ್ನು ಇಲ್ಲಿ ಕಾಣಬಹುದು.

ಈ ಕಥೆಯೊಳಗೆ ಇರುವ ವ್ಯವಸ್ಥೆ ಅಪಾರ ಕ್ರೌರ್ಯದಿಂದ ಕೂಡಿದೆ. ಸ್ವಾರ್ಥವು ಪ್ರಮುಖವಾದಾಗ ಒಂದೇ ಜಾತಿ ಕೂಡ ತನ್ನೊಳಗೆ ಕ್ರೂರವಾಗುತ್ತದೆ. ಮೇಲು ಜಾತಿಯಂಥದೇ ಸಂದರ್ಭ ತನಗೆ ಸಿಕ್ಕರೆ ತಾನೂ ಅದೇ ರೀತಿ ನಡೆದುಕೊಳ್ಳುತ್ತೇನೆ ಎಂಬುದನ್ನು ಸಾಬೀತುಪಡಿಸುತ್ತದೆ. ನಿರೂಪಕನ ಅರಿವು ಪ್ರಾಮಾಣಿಕ ಮತ್ತು ಮಾನವೀಯವಾದುದರಿಂದ ಇರಬೇಕಾದ ಸಾಧ್ಯತೆಯತ್ತ ಹರಿಯುತ್ತದೆ.

ದ್ಯಾವನೂರ ಕಥಾಸಂಕಲನದ ಮತ್ತೊಂದು ಕಥೆ 'ದತ್ತ'. ತಂದೆ ತಾಯಿಗಳು ತಮ್ಮ ಸ್ವಾರ್ಥಕ್ಕೆ ಹಿರಿಯ ಮಗನನ್ನು ಬಳಸಿಕೊಳ್ಳುವ ಅಸಾಮಾನ್ಯ ಘಟನೆಯ ಕಥೆ ಇದಾಗಿದೆ. ತಂದೆ ತಾಯಿಗಳು ಮಕ್ಕಳ ಹೊಣೆಯನ್ನು ಅನ್ಯ ನೆಲೆಗೆ ಸರಿಸಿ ಕ್ರೌರ್ಯ ಎನ್ನಬಹುದಾದ ರೀತಿಯಲ್ಲಿ ನಡೆದುಕೊಳ್ಳುವುದು ದತ್ತಾ ಕಥೆ ಸ್ವರೂಪವಾಗಿದೆ. ತಂದೆ ತಾಯಿಗಳು ತಮ್ಮ ಮಗನನ್ನು ಏಳನೇ ವಯಸ್ಸಿನಲ್ಲಿ ಶ್ರೀಮಂತರೊಬ್ಬರಿಗೆ ದತ್ತು ಕೊಡುತ್ತಾರೆ. ಈತನಿಗೆ ೨೩ನೇ ವಯಸ್ಸಿನಲ್ಲಿ ಅವನ ದತ್ತು ತಂದೆ ತೀರಿಹೋದ ಮೇಲೆ ಅವನನ್ನು ತಮ್ಮೂರಿಗೆ ಕರೆಸಿ ಅಲ್ಲಿನ ಸ್ಥಿತಿವಂತರೊಬ್ಬರ ಒಬ್ಬಳೇ ಮಗಳನ್ನು ಅವನಿಗೆ ಮದುವೆ ಮಾಡಿಸಿ ತಾವು ಲಾಭ ಮಾಡಿಕೊಳ್ಳುವ ಸಂಚು

ಅವರದು. ಆ ತರುಣ ಶಿಕ್ಷಣ ಮುಗಿಸಿಲ್ಲ, ಕುಡಿತಕ್ಕೆ ಬಲಿಯಾಗಿದ್ದಾನೆ. ಆದರೆ ಈ ಹಂಚಿಕೆಗೆ ವಿರುದ್ಧ ಹೇಸಿ, ಹೇಳದೆ ಕೇಳದೆ ಮನೆ ಬಿಟ್ಟು ಹೋಗುತ್ತಾನೆ. ಅವನು ಹೋದರೂ ಅವನ ಅವ್ವ ಅಪ್ಪನ ತವಕ ಹಣದ ಬಗ್ಗೆ. ಇಂತಹ ತಂದೆ ತಾಯಿ ಇದ್ದಾರೆಯೇ ಎಂದು ಚಕಿತಗೊಳಿಸುವ ಕತೆ ಇದಾಗಿದೆ. 'ನಿಮ್ಮ ಮಗ ನಿಮ್ಮ ಪಾಲಿಗೆ ಇಲ್ಲ' ಎಂದು ಪತ್ರ ಬರೆದಿಟ್ಟು ಹೋದ ನಂತರ ಇವನ ತಾಯಿ ಓಡಿಹೋಗಿ ಹಣದ ಪೆಟ್ಟಿಗೆಯನ್ನು ನೋಡುತ್ತಾಳೆ. ಹಣ ಮುಟ್ಟಿಲ್ಲ ಎಂದು ಆಕೆ ಜೋರಾಗಿ ಕೂಗಿಕೊಳ್ಳುವುದು, ಅವರ ಬದುಕಿನ ಪ್ರಮುಖ ಗುರಿ ಏನು, ಅವರ ಆಶಯ ಯಾವುದು ಎಂಬುದು ಅರಿವಾಗುತ್ತವೆ.

'ಡಾಂಬರು ಬಂದುದು' ಕಥೆ ಪ್ರಸ್ತುತವಾಗಿ ಹಳ್ಳಿಗಳು ಬದಲಾವಣೆಯಾಗುತ್ತಿರುವ, ಸಂದರ್ಭದಲ್ಲಿ ಹಳ್ಳಿಯ ಶ್ರೀಮಂತರು ಹಣವನ್ನು ಹೇಗೆ ದುರುಪಯೋಗಪಡಿಸಿಕೊಳ್ಳುವರು ಎಂಬುದನ್ನು ಸಮಾಜದಲ್ಲಿ ನಡೆಯುವ ದುರ್ವ್ಯವಸ್ಥೆಯನ್ನು ಎತ್ತಿ ತೋರಿಸುತ್ತದೆ. ಕತೆಯಲ್ಲಿ ಎಸ್ಸೆಸ್ಸೆಲ್ಸಿ ಹತ್ತಿ ಬಂದ ತರುಣರಿಗೂ, ಪಟೇಲನಿಗೂ, ಇರುವ ಮನಸ್ತಾಪವು ತಾಳುವ ರೂಪಾಂತರಗಳೆ ವಸ್ತುವಾಗಿದೆ. ಲಕುಮ, ರಾಜಪ್ಪ, ಮಾಧು, ಶಂಭು ಸಮಾನಮನಸ್ಕರು, ಸೋರಿ ಹೋಗುತ್ತಿದ್ದ ಸರ್ಕಾರಿ ಸೌಲಭ್ಯವನ್ನು ಪತ್ರಿಕೆಯ ಮೂಲಕ ಸಾರ್ವಜನಿಕ ಗಮನಕ್ಕೆ ತರುವುದು. ಸಂಬಂಧಪಟ್ಟವರಲ್ಲಿ ನ್ಯಾಯವನ್ನು ಅಪೇಕ್ಷಿಸುವುದು ಈ ಯುವಕರ ನ್ಯಾಯದ ಪರಿಕಲ್ಪನೆಯಾಗಿದೆ. ರೋಡಿಗೆ ಮಂಜೂರಾದ ಹಣದಲ್ಲಿ ಉಳಿದುದನ್ನು ಶಾಲೆಯ ನಿರ್ಮಾಣದಂತಹ ಕೆಲಸಕ್ಕೆ ವಿನಿಯೋಗಿಸಿದರೆ ಶಿಕ್ಷಣದ ತಿಳುವಳಿಕೆಯಿಂದ ಪ್ರಶ್ನಿಸುತ್ತಾರೆಂಬ ಭಯದಿಂದಲೋ ಏನೋ, ಅದನ್ನು ಜಾತಿ ಮತ್ತು ಅಜ್ಞಾನದ ಕೇಂದ್ರವಾಗಿರುವ ದೇವಸ್ಥಾನದ ರಿಪೇರಿಗೆ ವ್ಯಯಿಸುವ ಹುನ್ನಾರ ನಡೆಸುವುದು, ಇದನ್ನು ಬಹಿರಂಗಗೊಳಿಸಿದವರನ್ನು ಊರ ಪಂಚಾಯಿತಿಯ ಮೂಲಕ ಶಿಕ್ಷಿಸಲು ಪ್ರಯತ್ನಿಸುವುದು, ತರುಣರ ಗುಂಪು ತಪ್ಪು ಮಾಡಿದರೆ ಬೆತ್ತಲೆಮಾಡಿ ಬಹಿರಂಗವಾಗಿ ಹೊಡೆಯಬೇಕೆಂದು ಅಪೇಕ್ಷಿಸುವುದು–ಇದು ಜಮೀನ್ದಾರಿ ಪಟೇಲನ ನ್ಯಾಯದ ಪರಿಕಲ್ಪನೆ. ಟಾರುಡಬ್ಬಗಳು ಊರ ಹೊರಗೆ ಹೋದಾಗ ಪೋಲಿಸರು ತಪಾಸಣೆ ಮಾಡುತ್ತಾರೆ. ಇದಕ್ಕೆ ಪೂರಕವಾಗಿ ಶಾನುಭೋಗ ಮತ್ತು ಕೆಲವು ಹಿರಿಯರ ಮನೋಭಾವಗಳು ಕೆಲಸ ಮಾಡುತ್ತದೆ. ಪ್ರಬಲವಾದುದನ್ನು ಕೆಣಕಲು ಅಕ್ಷರದ ಜೊತೆಗೆ ಆರ್ಥಿಕ ಬಲವು ಬೇಕೆಂಬುದು ಕಥೆಯಿಂದ ತಿಳಿದುಬರುತ್ತದೆ. ಆದರೆ ವ್ಯವಸ್ಥೆಯು ತನ್ನೊಳಗೆ ಅವ್ಯವಸ್ಥೆಯನ್ನು ಪೋಷಿಸುತ್ತಿದೆ ಎಂಬುದಕ್ಕೆ ಟಾರಿನ ಹಿನ್ನೆಲೆಯಲ್ಲಿನ ಅಸಂಬದ್ಧ ಕ್ರಿಯೆಗಳು

ನಿದರ್ಶನವಾಗಿವೆ. ಇದ್ದ ಸ್ಥಳದಿಂದ ಟಾರಿನ ಡ್ರಮ್ಮುಗಳು ಚಲಿಸುವುದು ಪ್ರತಿಭಟನೆಯ ಸಂಕೇತವಾಗುತ್ತವೆ.

'ಮೂಡಲ ಸೀಮೇಲಿ ಕೊಲೆ ಗಿಲೆ ಮುಂತಾಗಿ' ಕಥೆಯಲ್ಲಿ ಪ್ರಧಾನವಾಗಿರುವ ಅಂಶ ಹಸಿವು ಮತ್ತು ಶೋಷಣೆ. ಇದು ಕಥೆಯಲ್ಲಿ ರಂಗಪ್ಪನ ಬದುಕಿನ ಮೂಲಕ ಅರ್ಥವಾಗುತ್ತದೆ. ಕಥೆಯಲ್ಲಿ ಹಸಿವಿನ ಹಿನ್ನೆಲೆಯ ಕಾರಣದ ಸಾಧ್ಯತೆಗಳನ್ನು ಮತ್ತು ಹಸಿವಿನ ಪರಿಣಾಮದ ಮಗ್ಗುಲುಗಳನ್ನು ವರ್ಣ-ವರ್ಗ ಸಮಾಜದ ಹಂದರದಲ್ಲಿಟ್ಟು ಮಹಾದೇವ ಅವರು ವಿವರಿಸಿದ್ದಾರೆ. ಕಥೆಯಲ್ಲಿ ಜಾತಿ ಸಂಬಂಧದ ನೆಲೆಗಳು ಚರ್ಚೆಗೆ ಒಳಗಾಗುತ್ತವೆ.

ಉಳ್ಳವರ ಐಷಾರಾಮಿ ಜೀವನ ಹಾಗೂ ಏನೂ ಇಲ್ಲದವರ ಹಸಿವು ನೋವು ಅವಮಾನ ಜೀವನವನ್ನು ಕಥೆಯಲ್ಲಿ ಕಾಣಬಹುದು. ರಂಗಪ್ಪ ಮತ್ತು ಅವನ ಹೆಂಡತಿ, ಮಗು ಹಸಿವೆಯಿಂದ ಅವಮಾನದಿಂದ ಅಸಹನೀಯವಾದ ರೀತಿಯಲ್ಲಿ ಬಾಳುವ ಚಿತ್ರ ಕಥೆಯಲ್ಲಿ ಗೋಚರವಾಗುತ್ತದೆ. ರಂಗಪ್ಪನ ಮಗ ಊಟ ಮಾಡಲಾರದಂತಹ ಸ್ಥಿತಿ ಅಂದರೆ ಊಟವೇ ಇರದ ಸ್ಥಿತಿ. ರಂಗಪ್ಪ ಬೀಡಿಗಾಗಿ ಜೋಬನ್ನು ತಡಕಾಡುವುದು, ಹೆಂಡತಿ ಪಾರ್ವತಿ ಮಗನ ಹರಿದ ಚಡ್ಡಿಯನ್ನು ಹೊಲಿಯುವುದು, ಹುಲ್ಲಿನ ಜೋಪಡಿ ಆಕಾಶ ಕಾಣಿಸುವಂತೆ ಧಾರಾಳವಾಗಿ ಅವಕಾಶ ಮಾಡಿಕೊಟ್ಟಿರುವುದು. ಹೀಗೆ ಮಹಾದೇವ ಅವರು ದಲಿತ ಅನುಭವದ ಮೂಲಕ ಬಡತನ ಮತ್ತು ಹಸಿವನ್ನು ಕಥೆಯಲ್ಲಿ ವ್ಯಕ್ತಪಡಿಸಿದ್ದಾರೆ.

ರಂಗಪ್ಪ "ಭೂಮಿತಾಯಿ ಸೀಳುಕೊಂಡು ಒಂದ್ಸಲಕ ತನ್ನ ಹೊಟ್ಟೆ ಒಳಕ ಎಲ್ಲಾನು ಹಾಕೊಂದು ಬುಟ್ಟರ ಎಷ್ಟೋ ನೆಮ್ಮದಿ"[೧] ಎನ್ನುವ ಮಾತು ಅವನ ಬಡತನದ ಹಸಿವಿನ ಮಾತಾಗಿದೆ. ರಂಗಪ್ಪನ ಕೃಷಿ ಕಾರ್ಮಿಕನನ್ನು ಶೋಷಿಸಿಯೇ ಶ್ರೀಮಂತರಾಗುವ ಗೌಡರು ನರ್ಸಮ್ಮನಂಥ ಹೆಣ್ಣನ್ನು ಪೋಷಿಸುತ್ತದೆ. ಇಲ್ಲಿ ಗೌಡರಿಗೆ ಲೈಂಗಿಕ ಆಸಕ್ತಿಯು ಇದೆ. ಅದು ಶೋಷಣೆಯ ಸ್ಪಷ್ಟ ಚಿತ್ರಣವಾಗದೆ. ನರ್ಸಮ್ಮನೂ ಗೌಡರ ಹಂಗಿನಲ್ಲಿರುವುದರಿಂದ ಅದಕ್ಕೆ ಬೆಂಬಲ ಕೊಡುವ ಘಟಕಗಳೊಡನೆ ತನ್ನನ್ನು ಗುರುತಿಸಿಕೊಳ್ಳುವುದು ಸಹಜವಾಗಿಯೇ ಇದೆ. ಆದರೆ ಇವರ ನೆಮ್ಮದಿಯ ಕೂಟವು ರಂಗಪ್ಪನಂಥವರ ಬದುಕನ್ನು ಮುರಿಯುತ್ತಿದೆ. ಆದರೆ ಆ ದಿನದ

[೧] ದೇವನೂರ ಮಹಾದೇವ : ದ್ಯಾವನೂರು ಮತ್ತು ಒಡಲಾಳ : ಪು.ಸಂ. ೪೮.

ಹೊಟ್ಟೆಗೆ ಕೇಳುವುದು ಹಕ್ಕಾಗಿದ್ದರೂ ಭಿಕ್ಷುಕನಂತೆ ನಿಲ್ಲುವ ರಂಗಪ್ಪನ ಇಡೀ ಬೆತ್ತಲೆ ಬದುಕು ತೀವ್ರ ಬಡತನ ಮತ್ತು ಹಸಿವನ್ನು ಎತ್ತಿ ತೋರಿಸುತ್ತದೆ.

ಹಳ್ಳಿಗೆ ದಲಿತ ಅಧ್ಯಾಪಕನೊಬ್ಬ ಬಂದಾಗ ಆತನನ್ನು ದಲಿತನೆಂದು ಯಾರು ಕೀಳು ಬಗೆಯುವುದಿಲ್ಲ. ಮಣ್ಣಿನ ಮಗನಾಗಿರುವ ರಂಗಪ್ಪನಿಗೆ ಗಂಜಿಗೆ ಕಷ್ಟವಾಗಿರುವಾಗ ನರ್ಸಮ್ಮನಿಗೆ ತರಕಾರಿ ಪುಕ್ಕಟೆ ಸಿಗುತ್ತದೆ. ಹಳ್ಳಿಯ ಮೇಷ್ಟ್ರು ಮತ್ತು ನರ್ಸಮ್ಮನನ್ನು ಸ್ವೀಕರಿಸಿ ರಂಗಪ್ಪನನ್ನು ತಿರಸ್ಕರಿಸುತ್ತದೆ. ರಂಗಪ್ಪನ ಶ್ರಮ ಅಗಾಧವಾಗಿದೆಯಾದರೂ ಹೆಂಡತಿ ಒಬ್ಬ ಮಗನನ್ನು ಸಾಕಲಾರದ ದುರಂತದಲ್ಲಿದೆ. ಮಗ ಹೊಟ್ಟೆಗೆ ಕೇಳಿದರೆ ಏನು ಮಾಡುವುದು ಎಂಬ ಆತಂಕದಲ್ಲಿ ಆತನನ್ನು ಮುದ್ದಿಸಿ ಬರಿ ಹೊಟ್ಟೆಯಲ್ಲಿ ಮಲಗಿಸುವುದು ರಂಗಪ್ಪನ ಮನೆಯ ಬಡತನದ ಬೇಗೆಯನ್ನು ತಿಳಿಸುತ್ತದೆ. ರಂಗಪ್ಪನ ಹಸಿವು ಮತ್ತು ಎಲ್ಲದಕ್ಕೆ ತಲೆಯಾಡಿಸುತ್ತಾ ನಡೆಯುವ ಸಜ್ಜನಿಕೆಯಲ್ಲಿ ಪ್ರತಿಭಟನೆ, ಸಿಟ್ಟು, ವ್ಯಕ್ತವಾಗಿದೆ. ಊರಿನಲ್ಲಿ ರಂಗಪ್ಪನಿಂದ ಎಲ್ಲರೂ ಕೆಲಸ ಮಾಡಿಸಿಕೊಳ್ಳುತ್ತಾರೆ. ಆದರೆ ಯಾರು ರಂಗಪ್ಪನ ಹಸಿವನ್ನು ನೀಗಿಸುವುದಿಲ್ಲ. ಮಾನವೀಯತೆಯನ್ನು ತೋರುವುದಿಲ್ಲ. ಇದರಿಂದಾಗಿ ರಂಗಪ್ಪನಂಥವರು ಹಸಿವಿನಿಂದಲೇ ಸಾಯಬೇಕಾಗುತ್ತದೆ. ಇದೊಂದು ಜೀವಂತ ಸಾವು. ಈ ಕೊಲೆಗೆ ವ್ಯವಸ್ಥೆಯೇ ಕಾರಣವಾಗಿದೆ ಎಂಬ ಧ್ವನಿ ಕಥೆಯಿಂದ ಹೊರಹೊಮ್ಮುತ್ತದೆ.

"ಒಂದು ಸ್ಥಿತಿಯು ಅದ್ದೂರಿಯಾಗಿ ಬದುಕನ್ನು, ಬೇರೊಂದು ಸ್ಥಿತಿಯು ಅತ್ಯಂತ ದಾರುಣವಾಗಿ ತನ್ನ ಬದುಕನ್ನು ತೆಕ್ಕೆಗೆ ಸೆಳೆದುಕೊಳ್ಳುತ್ತಿರುವುದನ್ನು ಇಷ್ಟು ಪರಿಣಾಮಕಾರಿಯಾಗಿ ಕನ್ನಡದ ಯಾವ ಕಥೆಯು ಹೇಳಿಲ್ಲ. ನಿರುದ್ವಿಗ್ನವಾದ ವಿವರಗಳೇ ದೇವನೂರರನ್ನು ಶ್ರೇಷ್ಠ ಕಲಾವಿದನನ್ನಾಗಿ ಮಾಡಿವೆ".[೧]

ದೇವನೂರು ಮಹಾದೇವ ಅವರ 'ದ್ಯಾವನೂರು' ಕಥಾ ಸಂಕಲನದಲ್ಲಿ 'ಅಮಾಸ' ಕಥೆಯು ಪ್ರಮುಖವಾದದ್ದು. ದಲಿತ ಹುಡುಗನೊಬ್ಬನ ತಬ್ಬಲಿಯ ಕಥೆ. ನೆರಳು ನೀಡಿದ್ದ ಮಾರಿಗುಡಿಯ ವರ್ಣನೆಯಿಂದ ಕಥೆ ಆರಂಭವಾಗುತ್ತದೆ. ಅವನ ಹಾಗೆಯೇ ಅಲ್ಲಿ ಬಂದು ಸೇರಿದ್ದ ಕುರಿಯಯ್ಯ ಇಬ್ಬರು ನಿರಂತರವಾದ ಅನ್ಯಾಯ ಚಕ್ರದ ಪುನರಾವರ್ತನೆಯನ್ನು ಸೂಚಿಸುವಂತಿದ್ದಾರೆ. ಅಥವಾ ಮಾರಿಗುಡಿ ಮೂಲೆಯಲ್ಲಿದ್ದ ತೆಂಗಿನಮರ ಪ್ರತಿನಿಮಿಸುವಂತೆ

ಬೆಳೆಯುತ್ತಲೇ ಇರುವ ದುರಂತ ಪರಂಪರೆ. ಸಮಾಜದ ದುಷ್ಟವ್ಯವಸ್ಥೆಗೆ ಬಲಿಯಾಗಿದ್ದೂ ಅದರ ಅರಿವು ಆತನಿಗೆ ಸಾಧ್ಯವೇ ಇಲ್ಲದ ಸ್ಥಿತಿಯಲ್ಲಿ ಮಾರಿಗೆ ಬಲಿಕೊಟ್ಟು ಆಡಿಗೆ ಹಾಕಿದ್ದ ಸರ ಅಮಾಸನ ಕುತ್ತಿಗೆಗೆ ಬೀಳುವ ಸಂದರ್ಭದಲ್ಲಿ ತುಂಬಾ ಧ್ವನಿಪೂರ್ಣವಾಗಿ ಬಂದಿದೆ. ಒದ್ದಾಡುವ ದೇಹದಿಂದ ರಕ್ತ ಚಿಲಚಿಲನೆ ಚಿಮ್ಮುತ್ತಾ ನೆಲಕ್ಕೆ ದೊದದೊದನೆ ಸುತ್ತಲೂ ಕೆಂಪಗಾವರಿಸಿತು. ಯಾರೋ ಒಂದು ಹೈದ ತವಕನೆ ಓಡಿ ಆಡುಗಳ ಕುತ್ತಿಗೆಗೆ ಸುತ್ತಿದ್ದ ರಕ್ತ ತೊಟ್ಟಿಕ್ಕುತ್ತಿದ್ದ ಹೂವ ಸರವ ತಂದು ಅಮಾಸನನ ಕುತ್ತಿಗೆಗೆ ಹಾಕಿ ಕುಣಿ ಎಂದನು. ಅಮಾಸ ಅದರಿಂದ ತೊಟ್ಟಿಕ್ಕುತ್ತಿದ್ದ ರಕ್ತ ಕಂಡು ಬೆದರಿ ಬೆಚ್ಚಿ ಕಂಬಿ ಕಿತ್ತನು. ಇಲ್ಲಿ ಮಹಾದೇವರವರು ಸಮಾಜದಲ್ಲಿ ಸ್ಥಾನ ಮಾನ ಇಲ್ಲದವರು ಬಲಿಪಶುವಾಗಲೂ ಸಮಾಜ ಹೇಗೆ ಸಿದ್ಧವಾಗುವಂತೆ ಮಾಡುತ್ತದೆ ಎಂಬುದನ್ನು ಧ್ವನಿಸಿದ್ದಾರೆ.

ಈ ಕಥೆಯಲ್ಲಿ ರೈಲ್ವೇಯಲ್ಲಿ ಗ್ಯಾಂಗ್ ಮ್ಯಾನು ಆದ ಸಿದ್ಧಪ್ಪ ಅತಿಯಾಗಿ ಕುಡಿದು ಬಡಬಡಿಸುವ ಮಾತುಗಳು ತುಳಿತಕ್ಕೆ ಒಳಗಾದ ಜನರ ಸುಪ್ತ ಪ್ರಜ್ಞೆಯಲ್ಲಿರುವ ಅಂಶಗಳು ಆಗಬಹುದು, ರಚನಾತ್ಮಕ ಸಾಧ್ಯತೆಯ ಶುಚಿಯೂ ಆಗಬಹುದು. ಗೌಡರ ಕಣ್ಣುಗಳ ಮುಂದಕ್ಕೆ ಅಮಾಸ ಹುಲಿಯಾಸ ಹಾಕಿ ಬಗೆಬಗೆಯಾಗಿ ಕುಣಿಯುತ್ತಾ ಬಂತೋ ಎಂದು ಮುಗಿಯುವ ಕಥೆ ತನ್ನ ಮೇಲು ದನಿಯಲ್ಲಿ, ದನಿಯಿಲ್ಲದ ಮೌನದಲ್ಲಿ ಭವಿಷ್ಯದ ಭರವಸೆಯ ಕನಸನ್ನು ಶಕ್ತವಾಗಿ ತನ್ನೊಳಗೆ ಹುದುಗಿಸಿಕೊಂಡಿರುವುದನ್ನು ದೇವನೂರು ಮಹಾದೇವ ಅವರು ತುಂಬಾ ಮಾರ್ಮಿಕವಾಗಿ ಚಿತ್ರಿಸಿದ್ದಾರೆ.

ಹುಲಿವೇಷ, ಕತ್ತೆ ಕಿರುಬನ ವೇಷ, ಮರಿಹುಲಿವೇಷ, ಈ ಕುಣಿತಗಳು ಕೇರಿಯ ಜನರನ್ನು ದಂಗು ಬಡಿಸುತ್ತದೆ. ಇವು ಒಕ್ಕಲಗೇರಿಗೆ ಬಂದಾಗ ಅಲ್ಲಿ ಗೌಡರು, ಶಾನಭೋಗರು ಮುಂತಾದ ಮೇಲುಜಾತಿಯವರು ಇನಾಮು ಕೊಟ್ಟು ಶಭಾಷಗಿರಿ ಪಡೆಯುತ್ತಾರೆ. ಇದು ಕೆಳಜಾತಿಯವರ ಹೆಮ್ಮೆಯನ್ನು ಮೇಲ್ಜಾತಿಯವರ ಕುತಂತ್ರವನ್ನು ಒಮ್ಮೆಗೆ ಪ್ರಕಟಿಸುತ್ತದೆ.

ಅಮಾಸ ಕಥೆಯಲ್ಲಿನ ತೆಂಗಿನಮರ ಕುರಿಯಯ್ಯನ ಶ್ರಮದ ಪ್ರತೀಕವಾಗಿದೆ. ಆದರೆ ಅದು ಬೆಳೆದು ದೊಡ್ಡದಾಗಿ ಫಲ ಕೊಡುವ ವೇಳೆಗೆ ಅದರ ಬುಡಕ್ಕೆ ಬಣ್ಣ ಬಳಿಸಿ ಜಮೀನ್ದಾರರು ಅದನ್ನು ತಮ್ಮದಾಗಿಸಿಕೊಂಡಿದ್ದಾರೆ. ಅಷ್ಟೇ ಅಲ್ಲದೆ ತಮ್ಮ ಆಳುಗಳ ಮೂಲಕ ತೆಂಗಿನ ಮರದ

---

[೭] ಡಾ॥ ಎಸ್.ಕೆ. ಕೋದಂಡ ರಾಮ : ಕನ್ನಡ ಕಥಾ ಸಾಹಿತ್ಯದಲ್ಲಿ ಸಾಂಸ್ಕೃತಿಕ ಸಂಘರ್ಷ : ಪು.ಸಂ. ೩೬೫.

ಫಸಲನ್ನು ಮನೆಗೆ ತೆಗೆದುಕೊಂಡು ಹೋಗುತ್ತಾರೆ. ಇಲ್ಲಿ ಕುರಿಯಯ್ಯನ ವರ್ಗದ ಆಳನ್ನು ಬಳಸಿಕೊಂಡಿರುವುದು ಜಮೀನ್ದಾರಿ ಸಮಾಜದ ಉತ್ಪಾದನಾ ಸಂಬಂಧವನ್ನು ವ್ಯಕ್ತಪಡಿಸುತ್ತದೆ.

ಕಥೆಯಲ್ಲಿ ಕುರಿಯಯ್ಯ ಗೌಡರ ಮನೆ ಕುರಿಕಾದು ಕೊನೆಗೆ ಅನಾಥವಾಗಿ ಜೀವನ ಸಾಗಿಸುವುದು ಕಂಡುಬಂದರೆ, ಅಮಾಸನು ಗೌಡನ ಅನೈತಿಕ ಸಂಬಂಧದ ಪ್ರತಿಫಲವೇ ಆಗಿರುವುದು ಗಮನಾರ್ಹ. ಕುರಿಯಯ್ಯ ಮತ್ತು ಅಮಾಸನ ಜೀವನ ನಮ್ಮ ದೇಶದಲ್ಲಿನ ವರ್ಣ ಹಾಗೂ ವರ್ಗ, ವ್ಯವಸ್ಥೆಗಳು ಏಕ ಕಾಲದಲ್ಲಿ ನಡೆಸಿರುವ ದಬ್ಬಾಳಿಕೆಯನ್ನು ಧ್ವನಿಸುತ್ತವೆ.

ಹಬ್ಬದಂದು ಹುಲಿವೇಷ, ಕತ್ತೆಕಿರುಬನ ವೇಷ, ಮರಿಹುಲಿ ವೇಷ ಇವು ಕುಣಿಯುತ್ತಾ ಬರುತ್ತದೆ. ಇವು ಕೇರಿಯ ಜನರನ್ನು ಆಶ್ಚರ್ಯಗೊಳ್ಳುವಂತೆ ಮಾಡುತ್ತದೆ. ಒಕ್ಕಲಿಗೇರಿಗೆ ಬಂದಾಗ ಅಲ್ಲಿ ಗೌಡರು ಶಾನುಭೋಗರು ಮುಂತಾದ ಮೇಲ್ಜಾತಿಯವರು ಬಹುಮಾನಕೊಟ್ಟು ಶಭಾಷ್‌ಗಿರಿ ಪಡೆಯುತ್ತಾರೆ. ಇದು ಕೆಳಜಾತಿಯವರ ಹೆಮ್ಮೆಯನ್ನು ಮೇಲ್ಜಾತಿಯವರ ಕುತಂತ್ರವನ್ನು ಒಮ್ಮೆಗೆ ಪ್ರಕಟಿಸುತ್ತದೆ.

" ಈ ಕುಣಿತವನ್ನು ನೋಡಿ ಮಲಗಿದ್ದ ಗೌಡನ ನಿದ್ರೆಯನ್ನು ಅಮಾಸನ ಹುಲಿವೇಷ ಕೆಡಿಸುತ್ತದೆ. ಆಶ್ಚರ್ಯ ಭಯವನ್ನುಂಟು ಮಾಡುತ್ತದೆ. ಅಮಾಸನ ಹುಲಿ ವೇಷದ ಕ್ರಿಯೆಯ ಪರಿಣಾಮವನ್ನು ಈ ತಲೆಮಾರಿನ ಯುವ ಜನಾಂಗದ ಎಚ್ಚರಿಕೆಯ ಆಶಯವೆಂದು ವಿವರಿಸಲು ಸಾಧ್ಯವಿದೆ."[೧] ಎಂದು ಡಾ.ಎಂ. ಪುಟ್ಟಯ್ಯ ಅಭಿಪ್ರಾಯ ಪಟ್ಟಿದ್ದಾರೆ.

ಒಟ್ಟನಲ್ಲಿ ದ್ಯಾವನೂರು ಕಥಾ ಸಂಕಲನವು ಸ್ವಾತಂತ್ರ್ಯ ಬಂದ ಮೊದಲ ಮೂರು ದಶಕಗಳಲ್ಲಿ ಗ್ರಾಮೀಣ ಸಮಾಜದ ಚಿತ್ರಣವನ್ನು ಕಟ್ಟಿಕೊಡುತ್ತದೆ. ಗ್ರಾಮೀಣರ ಅದರಲ್ಲೂ ಮುಖ್ಯವಾಗಿ ದಲಿತ ವರ್ಗಗಳ ಮೊದಮೊದಲು ಸುಶಿಕ್ಷಿತ ತಲೆಮಾರು, ಅದಕ್ಕೂ ಗ್ರಾಮ-ಸಮಾಜದ ಮುಖಂಡತ್ವಕ್ಕೂ ಆಗುತ್ತಿದ್ದ ಮುಖಾಮುಖಿಗಳ ಕೆಲವು ಕುರುಹುಗಳು ಕಥಾ ಸಂಕಲನದಲ್ಲಿವೆ. ಶಿಕ್ಷಣಗಳಿಸಲು ಯತ್ನಿಸಿ ಅದು ದಕ್ಕದೆ ಹೋದ ಎಡಬಿಡಂಗಿ ತರುಣರ ಚಿತ್ರಣವು ಇದರಲ್ಲಿದೆ.

---

[೧] ಬಿ.ಎಂ. ಪುಟ್ಟಯ್ಯ : ದೇವನೂರ ಮಹಾದೇವ : ಪು.ಸಂ. ೧೭

ದೇವನೂರ ಮಹಾದೇವ ಅವರ ಒಡಲಾಳ

ದೇವನೂರ ಮಹಾದೇವ ಅವರ ಮೊದಲ ಕಿರು ಕಾದಂಬರಿ 'ಒಡಲಾಳ' ಇದು ೧೯೭೯ರಲ್ಲಿ ಪ್ರಕಟವಾಯಿತು. ಈ ಕೃತಿಯ ಕೇಂದ್ರಪ್ರಜ್ಞೆ ಹಸಿವು. ಈ ಕಾದಂಬರಿಯಲ್ಲಿ ಬರುವ ಕೆಲವು ಪಾತ್ರಗಳು ಅದರಲ್ಲೂ ಸಾಕವ್ವ ಮೋಸ ಹೋಗುವುದನ್ನು 'ಒಡಲಾಳ' ಕಾದಂಬರಿಯಲ್ಲಿ ಪ್ರಸ್ತುತದ ವ್ಯವಸ್ಥೆಯಲ್ಲಿ ನಡೆಯುತ್ತಿರುವ ಸ್ಥಿತಿ ಪ್ರಜ್ಞೆಯನ್ನು ವ್ಯಕ್ತಪಡಿಸುತ್ತದೆ.

ಒಡಲಾಳದ ಕಥೆಯನ್ನು ಒಂದು ಪಕ್ಷಿ ನೋಟದಂತೆ ನೋಡುವುದಾದರೆ ಅಲ್ಲಿ ಎಲ್ಲರೂ ಸಾಕ್ಷಿ ಹುಡುಕುತ್ತಿರುತ್ತಾರೆ. ಏನನ್ನೋ 'ನೋಡಲು' ತವಕ ಪಡುತ್ತಿರುತ್ತಾರೆ. ಪೋಲಿಸರು ಕಡ್ಲೇಕಾಯಿ ಸಿಪ್ಪೆಯ ಸಾಕ್ಷಿ ಹುಡುಕುತ್ತಾರೆ. ಅದು ಸಿಗದೆ ಹುಂಜವೊಂದು ಕಾಲುಗ ಹಗ್ಗ ಬಿದ್ದು ಪೋಲಿಸನ ಜೇಪಿಗೆ ಬೀಳುತ್ತದೆ. ಸಾಕವ್ವನ ಹುಂಜವಂತೂ ಇಡೀ ಕಥೆಯಲ್ಲಿಯೇ ಎಲ್ಲಿಯೂ 'ಪ್ರತ್ಯಕ್ಷ'ವಾಗಿ ಕಂಡುಬರದೆ, ಅದರ ಹುಡುಕಾಟದಲ್ಲಿ ಎಲೆ ಅಡಿಕೆಗೆ ಸಾವ್ಕಾರರಿಂದ ಒಂದು ರೂಪಾಯಿ ನೋಟು ಸಿಗುತ್ತದೆ. ಸ್ವತಃ ಸಾಹುಕಾರರಿಗೆ ಕಡ್ಲೇಕಾಯಿಯ ಮೂಟೆ ಮತ್ತೆ 'ನೋಡಲು' ಸಿಗದೆ ನಿರಾಸೆಯಾಗುತ್ತದೆ. ಅವರು ಕದ್ದು ಕಡ್ಲೇಕಾಯಿ ತಿಂದುದ್ದಕ್ಕೆ ಓದುವ ನಾವೇ ಸಾಕ್ಷಿಗಳಾದರೂ ಅದನ್ನು ನಿರೂಪಿಸಲು ನಮಗೆ ಯಾವುದೇ ಆಧಾರಗಳು ಸಿಗುವುದಿಲ್ಲ. ಬದಲಿಗೆ ಸಿಗುವುದು ಒಂದು ದಿನದಲ್ಲಿ ನಡೆದ ಘಟನೆಗಳ ಮೊತ್ತ ಅಷ್ಟೆ.

ಇಲ್ಲಿ ದಲಿತ ಕುಟುಂಬವೊಂದರ ಮೇಲೆ ಜಮೀನ್ದಾರರ ಮತ್ತು ಪೋಲಿಸರ ಆಕ್ರಮಣ ನಡೆಯುವುದು, ಅದು ವಿಫಲವಾಗುವುದು. ಕೊನೆಗೂ ಈ ಕುಟುಂಬ ಅಸಹಾಯಕವಾಗುವ ಸ್ಥಿತಿಯನ್ನು ಕತೆ ವಿವರಿಸುತ್ತದೆ. ದಲಿತ ಹೆಣ್ಣೊಬ್ಬಳ ಮೂಲಕ ಬಿಚ್ಚಿಕೊಳ್ಳುವ ಈ ಕಥೆಯಲ್ಲಿ, ಸಾಕವ್ವನ ಹುಂಜ ಕಳವಾಗಿರುವುದು ಅದನ್ನು ಹುಡುಕುವ ಬಗೆ, ಉತ್ತಪ್ಪನ ಕಡಲೆಕಾಯಿ ಕಳವಾಗಿರುವುದು ಅದನ್ನು ಜಪ್ತಿ ಮಾಡುವ ಕ್ರಮ, ಆಸ್ತಿ ವಿಷಯಕ್ಕೆ ಜಗಳ ಶುರುವಾಗಿರುವುದು ಎಲ್ಲರನ್ನು ಆವರಿಸುವುದು ಇವುಗಳ ಪರಿಣಾಮ ಹರಡುವ ಬಗೆ, ಪ್ರತಿಕ್ರಿಯೆಗಳ ಸ್ವರೂಪ ಘಟನೆಯಿಂದ ಘಟನೆಗೆ ಮಹಾದೇವರ 'ಒಡಲಾಳ' ತನ್ನ ಸುಂದರ ಬರವಣಿಗೆಯ ಸಂಬಂಧವನ್ನು ಕೆಳವರ್ಗದ ಶೋಷಿತ ಬದುಕಿನೊಡನೆ ಗುರುತಿಸಿಕೊಡುತ್ತದೆ. ಒಟ್ಟು ಬದುಕಿನ ಆಶಯಗಳು ಭಯಂಕರ ಅಸಹಾಯಕತೆಯ ಲೋಕದಲ್ಲಿ ನಿಟ್ಟುಸಿರು ಗರೆಯುತ್ತವೆ.

"ಮಹಾದೇವ ಅವರ ಕಾಮಿಕ್ ಧಾಟಿ 'ಒಡಲಾಳ' ಮತ್ತು 'ಕುಸುಮ ಬಾಲೆ' ಕೃತಿಗಳಿಗೆ ತಂದುಕೊಟ್ಟಿರುವ ಉಜ್ವಲತೆ, ಲವಲವಿಕೆ ಗಮನಾರ್ಹವಾದದ್ದು. ಶೋಷಿತರ, ನೊಂದವರ, ದಟ್ಟ ದರಿದ್ರರ ಬಗ್ಗೆ ಬರೆಯುವಾಗಲೂ ಮಹಾದೇವರಲ್ಲಿ ಸುಪ್ತವಾಗಿರುವ ಪ್ರತಿಭೆ, ಜೀವಂತಿಕೆಗಳನ್ನು ಕಾಣಿಸುವ ಬಗೆ ಅದ್ಭುತವಾದದ್ದು. ಇತಿಹಾಸದ ಕ್ರೌರ್ಯಕ್ಕೆ ಬಲಿಯಾದ ಜನಾಂಗವೊಂದು ಕ್ರಾಂತಿಗೆ ಸನ್ನದ್ಧವಾಗುತ್ತಿರುವ ಅವಕಾಶಗಳು ಸಿಕ್ಕರೆ ತಮ್ಮ ಪ್ರತಿಭೆಯನ್ನು ಸಾಧನೆಯಾಗಿ ರೂಪಾಂತರಿಸಲು ಕಾಯುತ್ತಿರುವ, ಉರಿಯುವ ನೆನಪುಗಳ ಜೊತೆ ಚೇತೋಹಾರಿ ಕನಸು ಕಾಣುತ್ತಿರುವ ದರ್ಶನ ಒಡಲಾಳ ಕುಸುಮಬಾಲೆಗಳಲ್ಲಿ ಮೂಡಿಬರುತ್ತದೆ."[೧]

ಒಡಲಾಳದಲ್ಲಿ ದಲಿತ ಪ್ರಜ್ಞೆಯ ಸಾಧ್ಯತೆಗಳ ಸೂಚನೆಗಳು ಸಾಕಷ್ಟಿವೆ. ಈ ಸಾಧ್ಯತೆಗಳು ಸಾಕವ್ವನ ಇರುವಿಕೆಯ ಸಾಮರ್ಥ್ಯದಲ್ಲಿ ಪುಟ್ಟ ಗೌರಿಯ ನವಿಲುಗಳ ಪ್ರಪಂಚದಲ್ಲಿ ಕಾಣಿಸುತ್ತವೆ. ಜೊತೆಗೆ ಶಿವೂನ ವಿದ್ಯಾಭ್ಯಾಸದಲ್ಲಿಯೂ, ಗುರುಸಿದ್ಧನೂ ಪ್ರತಿಭೆಯ ರಾಜಕೀಯದಲ್ಲೂ ಹೆಚ್ಚಾಗಿ ಸೂಚಿತವಾಗಿದೆ. ಕಾದಂಬರಿಯ ಮೊದಲನೆಯ ಭಾಗದಲ್ಲಿ ಸಾಕವ್ವನ ಹಟ್ಟಿಯಲ್ಲಿ ನಡೆಯುವಂತಹ ಎಲ್ಲಾ ಸಂಘರ್ಷಗಳು, ವೈಮನಸ್ಯ, ಜಗಳ, ಒಳಗೆ ಹರಿಯುವಂತಹ ಪ್ರೀತಿ, ಅದರ ಹಿಂದಿರುವ ಅಂತಃಕರಣ ಇವೆಲ್ಲಾ ಆ ಮನೆಯಲ್ಲಿ ಗೋಜಲು ಗೋಜಲಾಗಿರುವ ಸ್ಥಿತಿಯನ್ನು ಕಾಣುತ್ತೇವೆ. ಇಲ್ಲಿ ಮನುಷ್ಯ ಸಂಬಂಧಗಳ ವಾಸ್ತವ ಲೋಕವನ್ನು ಕಾಣುತ್ತೇವೆ. ಕಾದಂಬರಿಯ ಇನ್ನೊಂದು ಭಾಗದಲ್ಲಿ ಪೋಲಿಸರು ಮತ್ತು ಅವರ ಹಿಂದೆ ಇರುವ ಯಜಮಾನ ವ್ಯವಸ್ಥೆ ಆ ಹಟ್ಟಿಯನ್ನು ಪ್ರವೇಶ ಮಾಡಿ ಪವಿತ್ರವಾಗಿದದ್ದನ್ನು ಅಪವಿತ್ರಗೊಳಿಸುವ ಕೆಲಸ ಮಾಡುತ್ತದೆ. ಇದೆಲ್ಲಾ ಹೆಚ್ಚು ಕಮ್ಮಿ ಗಮನಕ್ಕೆ ಬರುವುದು ದೇವನೂರರ ಬಾಷೆಯ ಮೂಲಕವೇ ಸಾಕವ್ವ ಹಠಮಾರಿ, ಜಿಗುಟೆ, ಸ್ವಾರ್ಥದಿಂದಲೇ ಬದುಕಿ ಉಳಿದಿರುವಂತಹವಳು ಸಾಕವ್ವ ತನ್ನ ಸುತ್ತಲೂ ಗಡಿಯಂತೆ ಕುಟುಂಬವನ್ನು ಕಟ್ಟಿಕೊಂಡಿರುವುದು ಕಂಡುಬರುತ್ತದೆ. ದಲಿತರು ಯಾವಾಗಲೂ ಇಕ್ಕಟ್ಟಿನಲ್ಲಿಯೇ ಬದುಕುತ್ತಾರೆ ಎಂಬುದನ್ನು ಇದು ಸಂವೇದಿಸುತ್ತದೆ.

ಪುಟ್ಟಗೌರಿ ಒಮ್ಮೆ ನವಿಲುಗಳನ್ನು ಬರೆಯುವುದು ಸಾಕವ್ವನಿಗೆ ಇಷ್ಟವಾಗುವುದಿಲ್ಲ. ಏಕೆಂದರೆ ಸಾಕವ್ವ ಇಲ್ಲಿ ಹೇಳುವುದು ಮೊದಲು ಊಟದ ಯೋಚನೆಯನ್ನು ಮಾಡಬೇಕೆ

[೧] ಹಿ.ಚಂದ್ರಿಕ (ಸಂ) : ಯಾರ ಜಪ್ತಿಗೂ ಸಿಗದ ನವಿಲುಗಳು : ಪು.ಸಂ. ೨೨.

ಹೊರತು ಇದನ್ನೆಲ್ಲಾ ಮಾಡಬಾರದು ಎಂದು ಇಲ್ಲಿ ದಲಿತರ ಹಸಿವಿನ ಚಿತ್ರಣವನ್ನು ಎತ್ತಿ ತೋರಿಸುತ್ತದೆ.

ಈ ಕಿರುಕಾದಂಬರಿಯ ಭಾಗದಲ್ಲಿ ಶಿವೂನ ಜೊತೆ ಮಾತನಾಡುತ್ತಾ ಸಾಕವ್ವ ಹೇಳುತ್ತಾಳೆ. ಯಮಧರ್ಮರಾಜ ಅಥವಾ ಅವರ ದೂತರು ಬಂದು ತನ್ನನ್ನು ಕರೆದುಕೊಂಡು ಹೋದರೂ ನಾನು ಹೇಳ್ತೀನಿ ಅಂದರೆ – ನೀವು ಕೊಡೊ ಶಿಕ್ಷೆ ಯಾವುದು ದೊಡ್ಡದು ಮಹಾಸ್ವಾಮಿ ಅದಕ್ಕಿಂತಲೂ ನಾನು ದೊಡ್ಡ ಶಿಕ್ಷೆನಾ ಇಲ್ಲೆ ಅನುಭವಿಸಿದ್ದಿನಲ್ಲ ಎಂದು ಆಗ ಸಾಕವ್ವ ಶಿವೂನ ಕಣ್ಣುಗಳಲ್ಲಿ ಅಪ್ಸರೆಯಾಗಿ ಕಂಡುಬರುತ್ತಾಳೆ. ಈ ಹಿನ್ನೆಲೆಯಲ್ಲಿ ಮಹಾದೇವ ಅವರು ನಾವು ಕಲ್ಪನೆ ಮಾಡಿಕೊಳ್ಳುವಂತಹ ಅಸಹಾಯಕ ಸ್ಥಿತಿಗಳ ಪ್ರಜ್ಞೆಯನ್ನು ಹೆಕ್ಕಿ ತೆಗೆದಿದ್ದಾರೆ. ಆ ದಲಿತ ಬದುಕಿನ ಒಡಲಾಳದಿಂದಲೇ ಹುಟ್ಟಿರುವಂತಹ ಪ್ರತಿಮೆಗಳನ್ನು ನೋಡುವಾಗ ಅಲ್ಲಿ ಅಸಹಾಯಕತೆಯ ಪ್ರತಿಮೆಗಳು ಕಂಡುಬರುವುದನ್ನು ದೇವನೂರು ಸ್ಪಷ್ಟಪಡಿಸಿದ್ದಾರೆ.

ಒಡಲಾಳದ ಪ್ರಮುಖ ಪಾತ್ರವಾದ ಸಾಕವ್ವ ತನ್ನ ಕಳುವಾದ ಹುಂಜವನ್ನು ಮತ್ತು ಊರಿನ ಶ್ರೀಮಂತ ಎತ್ತಪ್ಪನವರ ಮನೆಯಿಂದ ಕಾಣೆಯಾದ ಕಡಲೆಕಾಯಿಮೂಟೆಯನ್ನು ಹುಡುಕುವುದು ಕಾದಂಬರಿಯಲ್ಲಿ ವಾಸ್ತವಿಕ ನೆಲಗಟ್ಟನ್ನು ಸೂಚಿಸುತ್ತದೆ. ಸಾಕವ್ವನ ಕುಟುಂಬದ ಬಡತನವು ಅವಳ ಅಸ್ಪೃಶ್ಯತನದಿಂದಲೇ ಉದ್ಭವಿಸಿದ್ದು ಎಂಬ ಅಂಶ ಗೋಚರವಾಗುತ್ತದೆ. ಜೊತೆಗೆ ಒಂದೇ ಸೂರಿನಡಿಯಲ್ಲಿ ಮೂರು ಗಂಡುಮಕ್ಕಳು ಹಾಗೂ ಎರಡು ಹೆಣ್ಣು ಮಕ್ಕಳ ಸಂಸಾರದೊಡನೆ ವಾಸಿಸುವ ಮನೆಯ ಯಜಮಾನಿ ಸಾಕವ್ವ ಮುದುಕಿ ; ಅವಳ ಬೀಳುತ್ತಿರುವ ಮನೆಯಂತೆಯೇ ಕಾದಂಬರಿಯಲ್ಲಿ ಸಾಕವ್ವ ಕಡಲೆಕಾಯಿ ಕಳ್ಳತನದ ಆಪಾದನೆಗೂ ಗುರಿಯಾಗುತ್ತಾಳೆ. ಇದನ್ನೆಲ್ಲಾ ಗಮನಿಸಿದಾಗ ದೇವನೂರು ಮಹಾದೇವ ಅವರು ಒಡಲಾಳದಲ್ಲಿ ಸಣ್ಣ ಮತ್ತು ಬಹಳ ಮಹತ್ವವೆನಿಸುವ ದಿನನಿತ್ಯದ ಘಟನೆಗಳ ಮೂಲಕ ದಲಿತರ ಜೀವನದ ನಿಕೃಷ್ಟತೆಯನ್ನು ತೆರೆದು ತೋರಿಸಿದ್ದಾರೆ. .

ಸಾಕವ್ವ ತನ್ನ ಹುಂಜ ಕಳುವಾದಾಗ ದೇವರನ್ನು ತರಾಟೆಗೆ ತೆಗೆದುಕೊಂಡು ಹವಾಜು ಹಾಕುತ್ತಿರುತ್ತಾಳೆ. ಕಡೆಗೆ ಮಾನವರೂಪ ದೇವರು ಪೋಲೀಸ್ ಇನ್ಸ್‌ಪೆಕ್ಟರ್‌ನ ರೂಪದಲ್ಲಿ ಅವತರಿಸಿ, ಅವನಿಂದ ಸಾಕವ್ವಳ ಎರಡನೆಯ ಹುಂಜವನ್ನು ಕಳೆದುಕೊಳ್ಳುವಂತೆ ಮಾಡುತ್ತದೆ. ಪೋಲೀಸರು ಕಡಲೆಕಾಯಿ ಮೂಟೆಗೋಸ್ಕರ ಅವಳ ಹಟ್ಟಿಯನ್ನು ಶೋಧಿಸುವ ಸನ್ನಿವೇಶದಲ್ಲಿ

ಹೊರಗಿನ ಮತ್ತು ಒಳಗಿನ ಪ್ರಪಂಚದ ಮಧ್ಯೆ ನೇರ ಹೋರಾಟವನ್ನು ಕಾಣುತ್ತವೆ. ನರಲೋಕದಲ್ಲಿ ಪಟ್ಟಂತ ಶಿಕ್ಷೆಗಿಂತ ಮೇಲೆ ಯಮಧರ್ಮರಾಯ ಕೊಡುವ ಶಿಕ್ಷೆ ದೊಡ್ಡದಲ್ಲ ಎಂದು ತನ್ನ ಮೊಮ್ಮಗನಿಗೆ ಸಾಕವ್ವ ಹೇಳುವಾಗ ಕಾಣುವ ಯಮನ ಬಗೆಗಿನ ನಿರ್ಲಕ್ಷ್ಯ ಹಾಗೂ ಪೋಲಿಸರೂ ಕೂಡ ಯಮ ಹಾಗೂ ಯಮಧೂತರಂತೆಯೇ ಕಾಣುವುದು ಆಕೆಗೆ ಗಾಬರಿಯಾಗುತ್ತದೆ. ತನ್ನ ಮೊಮ್ಮಗ ನರಲೋಕದಲ್ಲಿ ರಾಜ್ಯಭಾರ ಮಾಡುವಂತಹ ವರವನ್ನು ಕೇಳಿಕೊಳ್ಳುವ ಇರಾದೆ ಸಾಕವ್ವನಿಗೆ ಇದೆ. ಆದರೆ ಈ ವಿಷಯವನ್ನು ಹೊರಗಿನ ಪ್ರಪಂಚ ಒಪ್ಪುವಂತೆ ಮಾಡಲು ಸಾಧ್ಯವಿಲ್ಲವೆಂಬ ಸಂಗತಿಯೂ ಗೊತ್ತಿದೆ. ಆ ಪ್ರಪಂಚದ ನಿರ್ಲಕ್ಷ್ಯ, ದಮನಕಾರಿ ಧೋರಣೆಗಳಿಂದ ಜರ್ಜರಿತಳಾದ ಆಕೆ ನರಕದಲ್ಲಿ ಯಮನಿಗೆದುರಾಗಿ ನಿಂತು ಮೊಮ್ಮಗನಿಗೆ ವರ ಕೇಳುವ ಸನ್ನಿವೇಶವನ್ನು ಕಲ್ಪಿಸಿಕೊಳ್ಳುತ್ತಾ ಕನಸಿನ ದೇವಕನ್ನಿಕೆಯಾಗುತ್ತಾ ವಾಸ್ತವವನ್ನು ಕ್ಷಣಿಕವಾಗಿಯಾದರೂ ಮರೆಯಲೆತ್ನಿಸುತ್ತಾಳೆ. ಸಾಕವ್ವ ಮತ್ತು ಅವಳ ಮಕ್ಕಳು ಮೇಲ್ಜಾತಿಯವರ ಕೈಯಲ್ಲಿ ತಾವು ಶೋಷಣೆಗೆ ಒಳಗಾಗಿರುವುದನ್ನು ಸಂಪೂರ್ಣವಾಗಿ ಎಂದೂ ಅರಿತುಕೊಳ್ಳುವುದಿಲ್ಲ. ಜೊತೆಗೆ ಸಾಕವ್ವನಿಗೆ ತನ್ನ ಮಕ್ಕಳು ತನ್ನ ಬಗ್ಗೆ ಗೌರವ ಕಾಳಜಿ ತೋರಿಸುತ್ತಿಲ್ಲ ಎಂಬುದಕ್ಕಿಂತ ಅವರು ಏನು ಕೆಲಸವಿಲ್ಲದೆ ಪೋಲಿ ತಿರುಗುತ್ತಿದ್ದಾರೆ ಎಂಬುದೇ ದೊಡ್ಡ ಅಸಮಾಧಾನ.

ಸಾಕವ್ವ ತನ್ನ ಹುಂಜದ ಬಗ್ಗೆ ತಲೆಕೆಡಿಸಿಕೊಂಡಿರುವಂತೆಯೇ ಆಕೆಯ ಮಕ್ಕಳು ಮೊಮ್ಮಗಳು ಬಡತನದಿಂದ ಕಚ್ಚಾಡುತ್ತಿದ್ದಾರೆ. ಈ ಬಡತನದಿಂದಾಗಿ ತಾಯಿ ಸಾಕವ್ವ ತಾಯಿಯ ಸ್ಥಾನ ಪಡೆದಿಲ್ಲ. ಆಕೆಯ ಹಿರಿಯ ಮಗ ಕಾಳಣ್ಣ ಹಿರಿಯನ ಅಧಿಕಾರ ಹೊಂದಿಲ್ಲ. ಸಾಕವ್ವ ತನ್ನ ಮಕ್ಕಳೊಂದಿಗೆ ಆಸ್ತಿಯ ಬಗ್ಗೆ ಜಗಳವಾಡುತ್ತಿರುತ್ತಾಳೆ.

ಈ ಜಗಳ ಸೊಸೆಯರ ಜಗಳಕ್ಕೆ ದಾರಿಮಾಡಿಕೊಟ್ಟು ಆಕೆಯ ಮಕ್ಕಳು ಹಾಸ್ಯಾಸ್ಪದರಾಗುತ್ತಾರೆ. ಸಾಕವ್ವನ ಮನೆಯಲ್ಲಿ ಖಾಲಿಯಾಗಿದ್ದ ಎಣ್ಣೆಕುಡಿಕೆ, ಹಿಟ್ಟಿನ ಡಬ್ಬಗಳು ಅವರ ಆರ್ಥಿಕ ಪರಿಸ್ಥಿತಿಗೆ ಸಾಕ್ಷಿಗಳಾಗಿವೆ. ಗೋಡೆಯ ದೊಡ್ಡ ಮೊಳೆಯೊಂದಕ್ಕೆ ನೇತುಹಾಕಲ್ಪಟ್ಟ ರಾಟೆಯು ಅದಕ್ಕೆ ಹಿಂದಿದ್ದ ಉಪಯೋಗವನ್ನು ಬಿಂಬಿಸುತ್ತದೆ. ಹೀಗಿದ್ದಾಗ ಕಾಳಣ್ಣ ಒಂದು ಚೀಲ ಕಳ್ಳೇಕಾಯಿ ತರುತ್ತಾನೆ. ಅವರೆಲ್ಲರ ಮನಸ್ತಾಪ ಕೊನೆಗೊಂಡು ಪ್ರೀತಿ, ಸ್ನೇಹ ಉಕ್ಕುತ್ತದೆ. ಸಾಕವ್ವನ ಮೊಮ್ಮಗಳು ಮಟಗೌರಿ ಗುಡಿಗೆ ಹೋಗಿ ನಾಟಕ ಪ್ರಾಕ್ಟೀಸ್ ನಡೆಸುತ್ತಿರುವ ನಂಟನನ್ನು

ಕರೆತರುತ್ತಾಳೆ. ಈ ಕಳ್ಳೇಕಾಯಿ ಕರಗಿಸುವ ಸಂಭ್ರಮದಲ್ಲಿ ಅವರೆಲ್ಲ ಸಾಹುಕಾರ ಎತ್ತಪ್ಪನ ಭವ್ಯಮನೆ, ಆಸ್ತಿಯ ಬಗ್ಗೆ ಮಾತನಾಡುತ್ತಾರೆ; ಆತನ ಮನೆಯ ಹಬ್ಬ ತಮ್ಮ ಮನೆಯ ಹಬ್ಬವೆಂಬಂತೆ ಮಾತಾಡಿಕೊಂಡು ನಲಿಯುತ್ತಾರೆ.

"ಇಂತಹ ಸನ್ನಿವೇಶದಲ್ಲಿ ಇಡೀ ಒಂದು ಮೂಟೆ ಕಡಲೇಕಾಯಿಯನ್ನು ಮುಗಿಸಿ ಕೂತ ಮನುಷ್ಯರ ಬಡತನದ ವಾಸ್ತವತೆಯನ್ನು ಅಲ್ಲಗೆಳೆಯಲಾಗದು. ಕೇರಿಯ ಹೆಂಗಸರು ಕೆಲಸ ಮಾಡಲು ಸಿದ್ಧರಾಗಿದ್ದರೂ ಅವರಿಗೆ ಕೆಲಸ ಕೊಡಲು ಯಾರೂ ಸಿದ್ಧರಿಲ್ಲ. ಇದು ವ್ಯವಸ್ಥಿತವಾದ ಆರ್ಥಿಕ ಶೋಷಣೆಯನ್ನು ಬಿಂಬಿಸುತ್ತದೆ. ಭೂ ಮಾಲೀಕರ ಹಾಗೂ ಶೋಷಿತ ದಿನಗೂಲಿ ಕೆಲಸಗಾರರ ಮಧ್ಯೆ ಇರುವ ಬಲವಂತದ ಹೊಂದಾಣಿಕೆ ಇವರು ಕಡಲೆಕಾಯಿಯನ್ನು ಇಲ್ಲವಾಗಿಸುವ ಸನ್ನಿವೇಶ ಸಂಭಾಷಣೆಯಲ್ಲಿ ಎದ್ದು ಕಾಣಿಸುತ್ತದೆ."[೧] ಇಲ್ಲಿ ಕಳ್ಳತನವು ಹಸಿವನ್ನು; ಕತ್ತಲನ್ನು ಒಟ್ಟಿಗೆ ಓಡಿಸುವ, ಸಹಜವಾಗಿ ಮೈಗೂಡಿಸಿರುವ ಒಂದು ಉಪಾಯವಾಗಿ ಕಾಣುತ್ತದೆ.

ಕ್ಷಾಮದಿಂದ ಊಟ, ವಸತಿ ಪರದಾಡುತಿರುವ ಸಾಕವ್ವನ ಮಕ್ಕಳಿಗೆ ಎತ್ತಪ್ಪನ ಆನೆಯಂತೆ ಬೆಳೆದ ಹಸುಗಳು ಒಂದು ಅಚ್ಚರಿಯ ವಿಷಯವಾಗಿದ್ದು, ಅವು ಸತ್ತರೆ ಇಡೀ ಹೊಲಗೇರಿಗೆ ಒಂದು ದಿನದ ಹೊಟ್ಟೆ ಪಾಡು ಕಳೆಯುತ್ತದೆ ಎನ್ನುವ ಮನೋಭಾವನೆ ಇದೆ. ಸತ್ತ ಜಾನುವಾರುಗಳನ್ನು ತಿನ್ನುವ ಅವರ ಈ ಪದ್ಧತಿ ಅವರಿಗಿರುವ ಹಸಿವನ್ನು ಒತ್ತಿ ಹೇಳುತ್ತವೆ. ಇಲ್ಲಿ ದೇವನೂರರು ದಲಿತ ಪ್ರಜ್ಞೆಯನ್ನು ತಮ್ಮ ಸಾಹಿತ್ಯದಲ್ಲಿ ವ್ಯಕ್ತಪಡಿಸಿದ್ದಾರೆ.

ಸಾಕವ್ವನ ಕುಟುಂಬ ಬಡತನದಿಂದ ಕೂಡಿದ್ದರೂ ಎತ್ತಪ್ಪನಂತಾಗುವ ಕನಸು ಇವರಿಗಿದೆ. ಪುಟಗೌರಿಯ ಮದುವೆಯನ್ನು ಎತ್ತಪ್ಪನ ಮಗಳ ಮದುವೆಯಂತೆ ಕಂಡಿರುವಂತದ್ದು ಆದರು ಪ್ರತಿಯೊಬ್ಬ ಮನುಷ್ಯನಲ್ಲಿ ತಾನು ಶ್ರೀಮಂತನಾಗಬೇಕು ಎಂಬ ಆಸೆ ಇರುತ್ತದೆ. ಆದರೆ ಸಾಕವ್ವನ ಈ ಕನಸು ಬರೀ ಕನಸೇ ಹೊರತು ನೈಜವಾದುದಲ್ಲ. ಇಲ್ಲೆಲ್ಲಾ ದೇವನೂರರು ಸೂಕ್ಷ್ಮಮತಿಯಾಗಿ ತಮ್ಮಂತರಾಳದಲ್ಲೆ ದಲಿತ ಪ್ರಜ್ಞೆಯನ್ನು ವ್ಯಕ್ತಪಡಿಸುತ್ತಾರೆ.

ಎತ್ತಪ್ಪನ ಕಡಲೆಕಾಯಿ ಮೂಟೆಯ ಪತ್ತೆಗಾಗಿ ಇಡೀ ಪೋಲಿಸ್ ದಂಡೇ ಧಾವಿಸುತ್ತದೆ ಈ ಸನ್ನಿವೇಶ ಮತ್ತು ಸಾಕವ್ವ ಕೋಳಿಹುಂಜ ಹುಡುಕುವ ಸನ್ನಿವೇಶ ಎರಡು ಎಲ್ಲರಿಗೂ ನ್ಯಾಯ

---

[೧] ಪಿ.ಚಂದ್ರಿಕ (ಸಂ) : ಯಾರ ಜಪ್ತಿಗೂ ಸಿಗದ ನವಿಲುಗಳು : ಪು.ಸಂ. ೪೬.

ಒದಗಿಸುವ ಭರವಸೆ ಕೊಡುವ ಸಾಮಾಜಿಕ ವ್ಯವಸ್ಥೆಯನ್ನು ವ್ಯಂಗ್ಯವಾಗಿ ಚಿತ್ರಿಸುತ್ತದೆ. ಬಡತನದ ಅಸಹಾಯಕತೆಯಲ್ಲಿ ತಬ್ಬಿಬ್ಬಾಗಿರುವ ಶೋಷಿತರನ್ನು ಏನು ಬೇಕಾದರೂ ಮಾಡಬಹುದು, ಯಾವ ಆಪಾದನೆಯನ್ನು ಬೇಕಾದರೂ ಹೊರಿಸಬಹುದು ಎಂಬ ವರ್ಗವಿದೆ ಎಂಬುದನ್ನು ಮಹಾದೇವ ಅವರು ತಮ್ಮ ಸಾಹಿತ್ಯ ಮುಖೇನಾ ತಿಳಿಸಿದ್ದಾರೆ. ಸಾಕವ್ವ ಮೊದಲಿನ ಹುಂಜ ಸಿಗುತ್ತದೆ ಎಂಬ ಆಸೆಯಿಂದ ಎರಡನೇ ಹುಂಜವನ್ನು ಹಿಡಿದುಕೊಟ್ಟು ಮೋಸ ಹೋಗುತ್ತಾಳೆ. ದಲಿತರು ಮೋಸ ಹೋಗುವ ಬಗೆಯನ್ನು ದೇವನೂರರು ದಲಿತ ಪ್ರಜ್ಞೆಯ ಮೂಲಕವೇ ಕಟ್ಟಿಕೊಡುತ್ತಾರೆ.

"ಚಲನೆಯನ್ನು ಆಯ್ದುಕೊಳ್ಳುವ ವರ್ಗ ಅದನ್ನು ಸ್ಥಗಿತಗೊಳಿಸುವ ವರ್ಗದಿಂದ ವಿರೋಧ ಎದುರಿಸುತ್ತದೆ. ಅದು ಸಾಕವ್ವ ಎರಡನೆಯ ಕೋಳಿ ಕಳೆದುಕೊಂಡಾಗ ಒಂದು ರೂಪಾಯಿ ಕೊಡುವ ಗೌಡರ ರೀತಿಯಲ್ಲಿರಬಹುದು ಅಥವಾ ಪುಟಗೌರಿಯ ಗಲ್ಲಕ್ಕೆ ರೊಲುದೊಣ್ಣೆ ಒತ್ತಿ ಹಿಡಿಯುವ ಇನ್ಸ್‌ಪೆಕ್ಟರ್‌ನನ್ನು ಗುರುಸಿದ್ದು ದುರುಗುಟ್ಟಿ ನೋಡುವುದು ಆಗ ರೋಮ ಅಲ್ಲಾಡಿದಂತಾಗಿ, ಅದನ್ನು ಮರೆಯಲು ಸಿಗರೇಟು ಹಚ್ಚಿಕೊಳ್ಳುವುದರಲ್ಲಿರಬಹುದು ಇಲ್ಲಿ ಎರಡೂ ಸಂದರ್ಭದಲ್ಲಿ ಪ್ರತಿಭಟನೆ ಇದೆ."[೧]

ಒಡಲಾಳದ ಕೇಂದ್ರ ಪ್ರಜ್ಞೆಯಾದ ಹಸಿವು ಸಾಕವ್ವನ ಸಂಸಾರದಲ್ಲೊಂದು ದಿನ ಹಿಂಗಿದರೂ ಅದರ ದೃಶ್ಯ ಸಾಕ್ಷಿ ಅವರ ವಿರೋಧಿಗಳಾದ ಪೋಲಿಸರಿಗೆ ಸಿಗದು, ಪೋಲಿಸರ ದೃಶ್ಯ ಹಸಿವು ಅಪೂರ್ಣವಾಗಿಯೇ ಉಳಿಯುತ್ತದೆ. ಒಂದರ್ಥದಲ್ಲಿ ಬದುಕಿನ ಕೆಲವು ಆಗು ಹೋಗುಗಳಿಗೆ ಸಾಕ್ಷಿಗಳು ಕಾಣಲು ದೊರಕದು ಎಂಬ ಅಂಶ ಗೋಚರವಾಗುತ್ತದೆ. ಸಾಕ್ಷಿಯನ್ನು ಹುಡುಕಲು ಬಂದ ಪೋಲಿಸರ ಪ್ರಯತ್ನವನ್ನು ದೇವನೂರರು ತಮ್ಮ ವಿಶಿಷ್ಟ ಭಾಷೆಯ ಮೂಲಕವೇ ಅವರ ಕುರುಡನ್ನು ಲೇವಡಿ ಮಾಡಿದ್ದಾರೆ.

ಈ ಕಿರು ಕಾದಂಬರಿಯಲ್ಲಿ "ಕುಟುಂಬವೊಂದರ ಎಲ್ಲಾ ಬಗೆಯ ಒಳ ವಿವರಗಳು ಹೇಗೆ ಪ್ರಕಟವಾಗಿದೆ ಎಂಬುದೇ ಮುಖ್ಯವಾಗಬೇಕಿಲ್ಲ. ಬದಲಾಗಿ ಕುಟುಂಬವೊಂದು ಹೊರಗಿನ ಶಕ್ತಿಗಳ ಜೊತೆಗೆ ಸಂಘರ್ಷದಲ್ಲಿ ಎಂಥ ಪಾತ್ರವನ್ನು ಪ್ರಕಟಿಸಿತು ಎಂಬುದೇ ಬಹಳ ಮುಖ್ಯವಾಗುತ್ತದೆ."[೨]

---

[೧] ಎನ್.ಕೆ. ಕೋದಂಡ ರಾಮ : ಕನ್ನಡ ಕಥಾ ಸಾಹಿತ್ಯದ್ಲಿ ಸಾಂಸ್ಕೃತಿಕ ಸಂಘರ್ಷ : ಪು.ಸಂ. ೨೬೮.
[೨] ಡಾ॥ ಬಿ.ಎಂ.ಪುಟ್ಟಯ್ಯ : ದೇವನೂರು ಮಹಾದೇವ : ಪು.ಸಂ. ೨೧.

"ಒಡಲಾಳ – ನಿರಂತರವಾಗಿ ಏನನ್ನೂ ತೀವ್ರವಾಗಿ ಕಾಣಲು ಉದ್ಯುಕ್ತರಾಗುವವರ (ಪೋಲಿಸರಂತೆ ಅದು ಅವರ ಕರ್ತವ್ಯ ಹಾಗೂ ಹೊಟ್ಟೆ ಪಾಡು ಎರಡೂ ಆಗಬಹುದು) ಆದರೆ ಅಸ್ತಿತ್ವದಲ್ಲಿಯೇ ಇಲ್ಲದಿರಬಹುದಾದ (ಇಡೀ ಕಥೆಯಲ್ಲಿ ಕೇವಲ ಅವರಿವರ ಬಾಯಿ ಮಾತಿನಲ್ಲೇ ಮೂಡಿ ಮರೆಯಾಗುವ ಸಾಕವ್ವನ ಹುಂಜದಂತೆ) ದೃಶ್ಯಗಳ ಒಂದು ಸಮೀಕರಣ. ಮತ್ತೊಂದರ್ಥದಲ್ಲಿ ಪ್ರಜಾಪ್ರಭುತ್ವವಾದಿ ಕಾನೂನಿನ ಕಣ್ಣಿಗೆ ಅಲಭ್ಯವಾದ ಉಪಾಯಗಳ ಜೋಡಣೆ ಈ ಕಥೆ."[೧] ಒಡಲಾಳ ದಲಿತ ಹೆಣ್ಣೊಬ್ಬಳ ಮೂಲಕ ದಲಿತ ಬದುಕಿನ ಒಂದು ಸ್ಥಿತಿಯನ್ನು ಅನಾವರಣ ಮಾಡಿದ ಕಾದಂಬರಿ. ಮಹಾದೇವ ಅವರು ದಲಿತ ಆಡುಭಾಷೆಯನ್ನು ಸಾಹಿತ್ಯ ಭಾಷೆಯಾಗಿ ಇಲ್ಲಿ ಬಳಸಿಕೊಂಡಿದ್ದಾರೆ. ಮನುಷ್ಯರ ದೇಹದ ಲಕ್ಷಣಗಳನ್ನು ವರ್ಣಿಸುವಾಗ ವಿಶೇಷವಾಗಿ ಕಾಮಿಸುವ ವ್ಯಂಗ್ಯ, ವಿಡಂಬನೆಯ ಉದ್ದೇಶಕ್ಕಾಗಿ ಬಂದಿಲ್ಲ. ಬದಲಾಗಿ ಈ ರೀತಿಯ ವಿಚಿತ್ರ ವಿಕಾರ ದೈಹಿಕ ಲಕ್ಷಣಗಳು ಒಂದು ವ್ಯವಸ್ಥೆ ವಿಕಾರ ರೂಪಗಳಾಗಿ ಹೇಗಿರುತ್ತದೆ ಎಂಬುದನ್ನು ತಿಳಿಸುತ್ತದೆ. ಅಂಥ ವ್ಯವಸ್ಥೆ ಬಗ್ಗೆ ಕ್ರೋಧವನ್ನುಂಟು ಮಾಡಲು ಇವು ಶಕ್ತವಾಗಿವೆ. ಈ ದೃಷ್ಟಿಯಿಂದ ಸಾಕವ್ವ, ಅವಳ ಮಕ್ಕಳು, ಸೊಸೆ, ಮೊಮ್ಮಕ್ಕಳು, ಹುಂಜ ಈ ರೀತಿ ಎಲ್ಲರೂ ಒಂದು ವ್ಯವಸ್ಥೆಯೊಳಗಿನ ದಲಿತ ಬದುಕಿನ ಸ್ಥಿತಿಯನ್ನು ವಿವರಿಸಲು ಪ್ರಯತ್ನಿಸುತ್ತವೆ. ಹೀಗೆ ದೇವನೂರರು 'ದಲಿತ' ಬದುಕಿನ ಚಿತ್ರಣವನ್ನು ನಿಡುವುದರ ಮೂಲಕ ಒಡಲಾಳ ಕಾದಂಬರಿಯಲ್ಲಿ ದಲಿತ ಪ್ರಜ್ಞೆಯನ್ನು ವ್ಯಕ್ತಪಡಿಸಿದ್ದಾರೆ.

ದೇವನೂರು ಮಹಾದೇವ ಅವರ ಕುಸುಮ ಬಾಲ

ದೇವನೂರು ಮಹಾದೇವ ಅವರ 'ಕುಸುಮಬಾಲ'ಯು ಕನ್ನಡ ಕಾದಂಬರಿಗಳಲ್ಲಿ ನೆನೆಯಬೇಕಾದಂತ ಕಾದಂಬರಿ. ಈ ಕಾದಂಬರಿ ೧೯೮೮ರಲ್ಲಿ ಪ್ರಕಟವಾಯಿತು. ಈ ಕಾದಂಬರಿಗೆ ೧೯೯೧ರಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯೂ ದೊರೆತಿದೆ. ದೇವನೂರರ ಭಾಷೆಯ ಬೆಡಗು ಈ ಕಾದಂಬರಿಯ ಬೆಡಗು ಈ ಕಾದಂಬರಿಯ ಪ್ರಮುಖ ಅಂಶ. 'ಕುಸುಮ ಬಾಲೆ'ಯಲ್ಲಿ ಭಾಷೆಯೂ ಕೂಡ ಒಂದು ಸಮುದಾಯದ ಪ್ರಜ್ಞೆಯನ್ನು ಹೊಸ ರೀತಿಯಲ್ಲಿ ಅಭಿವ್ಯಕ್ತಗೊಳಿಸುತ್ತದೆ. ಈ ಹೊಸ ಪ್ರಜ್ಞೆ ಕಾದಂಬರಿಯ ದನಿಯಲ್ಲೂ ಅಡಕವಾಗಿದೆ.

[೧] ಪಿ.ಚಂದ್ರಿಕ (ಸಂ) : ಯಾರ ಜಪ್ತಿಗೂ ಸಿಗದ ನವಿಲುಗಳು : ಪು.ಸಂ. ೬೩.

"ಕುಸುಮ ಬಾಲೆಯಲ್ಲಿ ದಂತ ಕಥೆ-ಪುರಾಣಗಳ ವಿಪುಲತೆಯು ಎದ್ದು ಕಾಣುವ ಅಂಶಗಳಲ್ಲೊಂದಾಗಿದೆ. ಕೃತಿಯಲ್ಲಿ ಚಿತ್ರಿತವಾಗಿರುವ ಜನಸಮುದಾಯದ ಸಂಸ್ಕೃತಿಯ ಚರಿತ್ರೆಯನ್ನು ವಾಸ್ತವ ಘಟನಾವಳಿಗಳ ತರ್ಕಬದ್ಧ ಅರಿವಿನಲ್ಲಿ ಗ್ರಹಿಸುತ್ತ ಬೆಳೆದು ಬಂದದ್ದಲ್ಲ. ಅದರ ಮನೋಭೂಮಿಕೆ ದಂತಕಥೆ-ಪುರಾಣಗಳ ಪರಂಪರೆಯಿಂದ ಪೋಷಿತವಾಗುತ್ತ ಪುಷ್ಠಿ ಪಡೆಯುತ್ತ ಬಂದಂಥದ್ದು."[೧] ಹೀಗೆ ಇರುವ ಸಮೂಹ ಸಂಸ್ಕೃತಿಯ ವರ್ತಮಾನದ ವಾಸ್ತವವನ್ನು ದಂತಕಥೆ ಪುರಾಣಗಳ ಮೂಲಕವೇ ವ್ಯಾಖ್ಯಾನಿಸಿಕೊಳ್ಳುವಂಥದ್ದಾಗಿರುವುದನ್ನು ದಂಥ ಕಥೆಯ ಮೂಲಕ ಚನ್ನನನ್ನು ವೈಭವೀಕರಿಸುವುದರಲ್ಲಿ ಕಾಣಬಹುದು. ಈ ವೈಭವೀಕರಣದ ಹಿಂದೆ ಚನ್ನನ ಸಾವಿನ ದುರಂತವಿದೆ, ಮೇಲು ಜಾತಿಯವರ ಕ್ರೌರ್ಯದ ಕುತಂತ್ರವಿದೆ. ದಲಿತ ಸಂಸ್ಕೃತಿಯು ಅದರ ಅರಿವಿಗೆ ಬಾರದ ಚನ್ನನ ದುರಂತದಂಥ ಕಠೋರ ವಾಸ್ತವವನ್ನು ಒಡಲಿಟ್ಟುಕೊಂಡಿದೆ ಎಂಬ ಸತ್ಯವನ್ನು ಈ ದಂತ ಕಥೆಗಳ ಮೂಲಕ ಮಹಾದೇವ ಅವರು ಸೂಚಿಸುತ್ತಿದ್ದಾರೆ. ಹದಿನಾರು ಎಳನೀರು ಕದ್ದ ಗಾರಸಿದ್ಮಾವನ್ನು ಶಿವಾಚಾರದವರು ನ್ಯಾಯಾಂಗಕ್ಕೆ ಕಟ್ಟಿ ಹಾಕಿ ಥಳಿಸುತ್ತಾರೆ. ಹಾಗೆ ಕಟ್ಟಿ ಹಾಕಿ ಥಳಿಸಿದ್ದು ತಪ್ಪು ಅದು ಮೇಲುಜಾತಿಯವರು ಕಾನೂನು ಕೈಗೆತ್ತಿಕೊಂಡು ನಡೆಸಿದ ದೌರ್ಜನ್ಯ ಎಂಬ ಪ್ರಜ್ಞೆಯನ್ನು ತಿಳಿಸುತ್ತದೆ. ಆದರೆ ದಬ್ಬಾಳಿಕೆ ದೌರ್ಜನ್ಯಗಳ ತೀವ್ರತೆ ತಟ್ಟುವುದಿಲ್ಲ. ಅದು ಅವನಿಗೆ ಶೋಷಣೆಯ, ಅವಮಾನದ ಸಂಗತಿಯಾಗಿ ಕಾಣಿಸುವುದಿಲ್ಲ. ಆ ದೌರ್ಜನ್ಯವನ್ನು ತನ್ನ ಪೌರುಷ ಕೊಚ್ಚಿಕೊಳ್ಳುವುದಕ್ಕೆ ವಸ್ತುವಾಗಿ ಅವನು ಬಳಸಿಕೊಳ್ಳುತ್ತಾನೆ. ಇಲ್ಲಿ ಹೊಸ ಸಾಮಾಜಿಕ ಪ್ರಜ್ಞೆ ಕಾಣುವ ಶೋಷಣೆ, ದಬ್ಬಾಳಿಕೆ, ದೌರ್ಜನ್ಯಗಳು ಸ್ವತಃ ಅವುಗಳಿಗೆ ಬಲಿಯಾಗುತ್ತಿರುವ ದಲಿತರ ಸಂವೇದನಾ ಸೀಮೆಯೊಳಗೆ ದಾಖಲಾಗದೆ ಹೋಗುವ ವಿಸಂಗತ ಮತ್ತು ದುರಂತ ಇವು ಪ್ರಜ್ಞೆಯ ಅನುಭವವನ್ನು ನೀಡುತ್ತದೆ.

ಕಾದಂಬರಿಯಲ್ಲಿ ಕುರಿಯಯ್ಯನಂಥವನ ನನ್ನಿಯು ತಮ್ಮವರ ಅಂದರೆ ಶೋಷಿತ ಜನಸಮೂಹದವರ ಪೌರುಷ ಕೊಚ್ಚಿಕೊಳ್ಳುವ ಸಂಗತಿಯಾಗಿ ಕಂಡುಬರುತ್ತದೆ. ಗಾರಸಿದ್ಮಾವನಂಥವನು ಅನ್ಯಾಯ, ಶೋಷಣೆ ದಬ್ಬಾಳಿಕೆಗಳನ್ನು ಕಾರಣವಾದ ಸಂಗತಿಗಳಾಗಿ ಕಂಡುಬರುತ್ತವೆ. ಅವುಗಳ ದುರಂತಕ್ಕೆ ಯಾತನೆ ಅಥವಾ ಅವಮಾನದ ಅಲಗಿನ ತಿವಿತಕ್ಕೆ ಅವರು ಸಂವೇದನಾ ಜಡರಾಗಿರುತ್ತಾರೆ. ಈ ಬಗೆಯ ಸಂವೇದನಾ ಜಡತೆ ಹಾಗೂ ನತದೃಷ್ಟ

---

[೧] ಪಿ.ಚಂದ್ರಿ (ಸಂ) : ಯಾರ ಜಪ್ತಿಗೂ ಸಿಗದ ನವಿಲುಗಳು : ಪು.ಸಂ. ೪.

ಅವಸ್ಥೆಯನ್ನು ವೈಭವೀಕರಿಸುವ ಪ್ರವೃತ್ತಿ. ಇವುಗಳೇ ಶತಮಾನಗಳ ಕಾಲದ ದಲಿತ ಜನ ಸಮೂಹದ ಜೀವಧಾರಣೆ ಸತ್ಯಾಂಶಗಳೆಂಬಂತೆ ಆಗಿರುವುದೊಂದು ವ್ಯಂಗ್ಯ. ಇದು ಸಂಸ್ಕೃತಿಯ ದುರಂತವಾಗಿಯು ಕಂಡುಬರುತ್ತದೆ. ಗಾರಸಿದ್ದಾವ ಕುರಿಯಯ್ಯನಂಥ ದಲಿತ ಸಾಮಾನ್ಯರಿಗೆ ಮಾತ್ರ ಎಲ್ಲಾ ಮೇಲ್ಜಾತಿಯ ಸಾಮಾನ್ಯರಿಗೂ ಈ ದುರಂತ ವ್ಯಂಗ್ಯದ ಅರಿವು ಇರುವುದಿಲ್ಲ. ಗಾರೆಸಿದ್ದಾವನನ್ನು ಕಂಬಕ್ಕೆ ಕಟ್ಟಿ ಹೊಡೆದ ಸಂದರ್ಭದಲ್ಲಿ ಲಿಂಗಾಯಿತರ ಕಡೆಯ 'ಮೊಕಂಡನು "ಮೇಷ್ಟ್ರಾ .... ಜೋಳ್ಗೆ ಒಳಗ ಕಿತ್ಲು ಬೀಜ ಸುಳ್ಳಿನ ಮಳೆ ತುಂಬ್ಕುಂಡು ಅದಾ ಎಕ್ಕುಟ್ಲೆ ಊರ ಹಾಳ್ಮಾಡಕ ಅಂತ ಬಂದ್ಯ .... "[೧]

ಈ ಮಾತುಗಳು ಹೊಸ ಸಾಮಾಜಿಕ ಪ್ರಜ್ಞೆಯ ಮಧ್ಯೆ ಪ್ರವೇಶಕ್ಕೆ ಮೇಲ್ಜಾತಿಯವರ ಸ್ಥಳೀಯ ಸಂಸ್ಕೃತಿಯ ಪ್ರತಿಕ್ರಿಯೆ ಮತ್ತು ಪ್ರತಿಭಟನೆಯು ವ್ಯಕ್ತವಾಗಿದೆ. ಜೊತೆಗೆ ದಲಿತರ ಮೇಲೆ ಎಸಗುವ ದೌರ್ಜನ್ಯದ ಬಗ್ಗೆ ಅವರೂ ಸಂವೇದನಾ ವಿಸಂಗತಿಯ ದುರಂತ ಕಾದಂಬರಿಯೊಳಗಿನ ಪಾತ್ರಗಳ ಪ್ರಜ್ಞೆಯ ನೆಲೆಯಲ್ಲಿ ಮಾತ್ರ ಇರುವಂಥದ್ದು. ನಮ್ಮ ಸಮಕಾಲೀನ ಸಾಮಾಜಿಕ ಸಂದರ್ಭದಲ್ಲಿಯೂ ಕೂಡ ಇದು ಓದುಗರ ಪ್ರಜ್ಞೆಯ ನೆಲೆಯಲ್ಲಿಯೂ ಇರುವಂಥದೇ. ನಮ್ಮ ಸಾಮಾಜಿಕ ಸಾಂಸ್ಕೃತಿಕ ಸಂದರ್ಭದಲ್ಲಿ ಭಿನ್ನ ಪಂಗಡಗಳಿಗೆ ಒಳಪಡುವವರ, ಆ ಕಾರಣದಿಂದಲೇ ಅವರಿಗೆ ಸಾಮಾನ್ಯವಾಗಿರುವ ಸಂವೇದನಾ ಭಿನ್ನತೆಯನ್ನು ಕುರಿತು ಕಾದಂಬರಿಯಲ್ಲಿ ಪ್ರಸ್ತಾಪಿಸಲಾಗಿದೆ. ಈ ಹಿನ್ನೆಲೆಯಲ್ಲಿ ಈ ಸಂಸ್ಕೃತಿಯ, ಈ ಸಂವೇದನಾ ವಿಘಟನೆಯ ದುರಂತವನ್ನು ಧ್ವನಿಸುವ ವಿವಕ್ಷೆ ಅಥವಾ ಆಶಯ ಕಾದಂಬರಿ ಕಾರನದಾಗಿದೆ.

ಮಹಾದೇವರ 'ಕುಸುಮಬಾಲೆ' ಕೃತಿಗೆ ಉಜ್ವಲತೆ ಮತ್ತು ಲವಲವಿಕೆ ಗಮನಾರ್ಹವಾಗಿ ಬಂದಿದೆ. ಶೋಷಿತರ, ನೊಂದವರ ದಟ್ಟದಾರಿದ್ರ್ಯರ ಬಗ್ಗೆ ಬರೆಯುವಾಗಲೂ ಮಹಾದೇವರಲ್ಲಿ ಸುಪ್ತವಾಗಿರುವ ಪ್ರತಿಭೆ ಜೀವಂತಿಕೆಗಳನ್ನು ಕಾಣಿಸುವ ಬಗೆ ಅದ್ಭುತವಾದದ್ದು. ಇತಿಹಾಸದ ಕ್ರೌರ್ಯಕ್ಕೆ ಬಲಿಯಾದ ಜನಾಂಗವೊಂದು ಕ್ರಾಂತಿಗೆ ಸನ್ನದ್ಧವಾಗುತ್ತಿರುವ ಅವಕಾಶಗಳು ಸಿಕ್ಕರೆ ತಮ್ಮ ಪ್ರತಿಭೆಯನ್ನು ಸಾಧನೆಯಾಗಿ ರೂಪಾಂತರಿಸಲು ಕಾಣುತ್ತಿರುವ ಉರಿಯುವ ನೆನಪುಗಳ ಜೊತೆ ಚೇತೋಹಾರಿ ಕನಸು ಕಾಣುತ್ತಿರುವ ದರ್ಶನ ಕುಸುಮಬಾಲೆಯಲ್ಲಿ ಮೂಡಿ ಬಂದಿದೆ.

---

[೧] ದೇವನೂರ ಮಹಾದೇವ : ಕುಸುಮ ಬಾಲೆ : ಪು.ಸಂ. ೪೨-೪೩.

ಸರಳ ನಿರಾಶೆ, ಆಸೆಗಳನ್ನು ತಮ್ಮ ವಿನೋದದ ಮೂಲಕ ಗೆದ್ದುಕೊಂಡಿರುವ ಮಹಾದೇವರ ಪ್ರಭುದ್ಧ ಜೀವನದ ದೃಷ್ಟಿ ಕನ್ನಡ ದಲಿತ ಸಾಹಿತ್ಯಕ್ಕೆ ಬಂದು ಗಂಗೆಯ ಆತ್ಮವಿಶ್ವಾಸವನ್ನು ಸ್ವಾಭಿಮಾನವನ್ನು ತಂದುಕೊಟ್ಟಿದೆ.

'ಕುಸುಮಬಾಲೆ' ಕಾದಂಬರಿಯಲ್ಲಿ ಜನರು ನಡೆಸುವ ಹೋರಾಟದ ಕೆಲವು ಬಗೆಗಳು ಅವರೆಲ್ಲರನ್ನು ಕಟ್ಟಿ ಹಾಕುವ ರಕ್ತ ಸಂಬಂಧಗಳ ಸ್ವರೂಪ ಇಲ್ಲಿ ದಟ್ಟವಾಗಿ ಚಿತ್ರಣಗೊಂಡಿದೆ. ತೂರಮ್ಮ ಮಗುವಿನ ಜೀವ ಉಳಿಸಿಕೊಳ್ಳಲು ಇದಿಯಮ್ಮನೊಡನೆ ಹೋರಾಡುವ ಬಗೆ, ಯಾಡನನ್ನು ಕಂಕುಳಲ್ಲಿ ಇರಿಸಿಕೊಂಡು ಅಕ್ಕಮಹಾದೇವಿ ಪಡುವ ಪರಿಪಾಟಲು, ಇವುಗಳ ಜೊತೆಗೆ ಯಾಡ ಗಾರಸಿದ್ಮಾವ ಇವರು ಇಕ್ಕಟ್ಟಿನಿಂದ ಹೊರಬರಲು ತೋರುವ ಚಾಲಾಕುಗಳು ಒಂದೇ ಬಗೆಯವು. ಕುರಿಯಯ್ಯನ ನನ್ನಿಯು ತರ್ಕಾತೀತ ನೆಲೆಯಲ್ಲಿ ಸಮುದಾಯದ ಸದಸ್ಯರ ನಡುವೆ ರಕ್ತದ ಕಥೆ ರೂಪುಗೊಳ್ಳುತ್ತದೆ. ಹೀಗೆ 'ಕುಸುಮಬಾಲೆ' ಕಾದಂಬರಿಯಲ್ಲಿ ಮಹಾದೇವರವರು ಸಾಹಿತ್ಯದ ಮೂಲಕ ದಲಿತರ ಪ್ರಜ್ಞೆಯನ್ನು ವ್ಯಕ್ತಪಡಿಸಿದ್ದಾರೆ.

ಕಾದಂಬರಿಯಲ್ಲಿ 'ಕುಸುಮಬಾಲೆ'ಯು ಒಂದರ್ಥದಲ್ಲಿ ಕೃತಿಯ ಕೇಂದ್ರದಲ್ಲಿರಬಹುದು. ಆದರೆ ಒಂದು ಕೃತಿಯ ಕೇಂದ್ರ ಪಾತ್ರದಂತೆ ಅವಳೆಲ್ಲೂ ವರ್ತಿಸಿವುದಿಲ್ಲ. ಆದರೆ ಕೃತಿಯ ಇತರ ಪಾತ್ರಗಳು ಲೇಖಕರ ದಲಿತ ಅನುಭವದ ಆಧಾರದ ಮೇಲೆ ಚಿತ್ರಿತವಾಗಿದೆ. ಇಲ್ಲಿಯ ದಲಿತ ಪಾತ್ರಗಳು ಶೋಷಣೆಗೆ ಒಳಪಟ್ಟಂತೆ ಕಂಡುಬಂದರೂ ಎಲ್ಲ ದಲಿತ ಶೋಷಿತ ಪಾತ್ರಗಳು ಒಂದು ನೆಲೆಯಲ್ಲಿ ಭಂಡರಾಗಿದ್ದಾರೆ. ಪ್ರಾರಂಭದಲ್ಲಿ ದನ ಮೇಯಿಸುವ ಕೆಲಸ ಮಾಡುತ್ತಿದ್ದು ಇತರರ ರಾಸುಗಳನ್ನು ಮಾರಿ ಬಂದ ಹಣದಿಂದ ಶ್ರೀಮಂತನಾಗುವ ಯಾಡ ; ಊರಿನಲ್ಲಿ ಮುಟ್ಟಾದವರೆಲ್ಲರ ಬಟ್ಟೆಗಳನ್ನು ಕದ್ದು, ಮಾರಿ ಜೀವನ ನಡೆಸುವ ಅಮಾಸ, ಎಳನೀರು ಕದ್ದು ಸಿಕ್ಕಿಬಿದ್ದಾಗ ಅದಕ್ಕೆ ತಪ್ಪುಕಟ್ಟಲು ಇತರರಿಂದಲೇ ಹಣ ಕೇಳುವ ಗಾರಸಿದ್ಮಾವ – ಇವರೆಲ್ಲರೂ ಒಂದು ರೀತಿಯಲ್ಲಿ ಭಂಡರಂತೆ ವರ್ತಿಸುತ್ತಾರೆ. ಆದರೆ ಇವರು ಭಂಡರಂತೆ ವರ್ತಿಸಲು ಕಾರಣಗಳಿವೆ. ಯಾಡ ಮತ್ತು ಅವನ ತಾಯಿ ಬಸಪ್ಪ ಸೋಮಿಯಿಂದ ಮೋಸ ಹೋಗಿರುತ್ತಾರೆ. ಯಾಡ ನಿರ್ಗತಿಕನಾಗಿರುತ್ತಾನೆ, ಗಾರಸಿದ್ಮಾವನಿಗೆ ಸ್ಥಿರಾಸ್ತಿ ಇಲ್ಲ ಎಳನೀರು ಕುಡಿಯಬೇಕಾದರೆ ಕದಿಯಲೇ ಬೇಕಾಗುತ್ತದೆ. ಅಮಾಸ ಕಳ್ಳತನವನ್ನು ಬದುಕಲು ಒಂದು ಮಾರ್ಗವನ್ನಾಗಿ ಮಾಡಿಕೊಂಡಿರುತ್ತಾನೆ. ಇವು ಸಮಾಜದ ವ್ಯವಸ್ಥೆಯ ಬಗ್ಗೆ ತಿಳಿಸುತ್ತದೆ. ಬಡವರ ಮತ್ತು ದಲಿತರ

ಪರಿಸ್ಥಿತಿಯನ್ನು ಇವು ತಿಳಿಸುತ್ತವೆ. ಈ ಪಾತ್ರಗಳ ಮೂಲಕ ದಲಿತರು ಬದುಕಲು ಕಷ್ಟ ಪಡುವ ಬಗೆಯನ್ನು ಮಹದೇವರವರು ದಲಿತ ಪ್ರಜ್ಞೆಯ ಮೂಲಕ ತಿಳಿಸುತ್ತಾರೆ.

'ಕುಸುಮಬಾಲೆ'ಯಲ್ಲಿ ಜಾತಿಯ ಪ್ರಶ್ನೆಯನ್ನು ಬದುಕಿನ ನಿರಂತರ ಸತ್ಯವಾದ ಗಂಡು ಹೆಣ್ಣಿನ, ಜಾತಿ-ಜಾತಿಗಳ ಸಂಬಂಧಗಳ ಹಿನ್ನೆಲೆಯಲ್ಲಿ ಕೆದಕಿ ನೋಡಿದಾಗ ಸಂವೇದನಾ ಶೀಲವಾದ ಅಂಶಗಳು ಗೋಚರವಾಗುತ್ತದೆ. ಜೋತಮ್ಮ ಮೈದುಂಬಿದಾಗ ಕುರಿಯಯ್ಯ ಕಾಣುವ ತಲತಲಾಂತರದ ಸತ್ಯ ಕೂಡ ಮೇಲು-ಕೆಳವರ್ಗಗಳ ಗಂಡು ಹೆಣ್ಣುಗಳು ಕೂಡುವುದು ನಿರಂತರ ಸತ್ಯವೇ ಆಗಿದೆ. ಈ ಕಥೆಯ ಒಟ್ಟು ತುಡಿತವನ್ನು ನೋಡಿದಾಗ ಈ ತಲತಲಾಂತರದ ಸತ್ಯ ಕೃತಿಗೆ ಮುಖ್ಯವಾಗಿರಬೇಕೆಂಬುದು ಮಹಾದೇವರವರ ನಿಲುವು ಆಗಿರಬಹುದು ಎನಿಸುತ್ತದೆ. ವರ್ತಮಾನದ ವ್ಯವಸ್ಥೆಯ ಹಿನ್ನೆಲೆಯಲ್ಲಿ ಮಹಾದೇವರವರು ಇತ್ಯಾತ್ಮಕವಾಗಿ ನೋಡುವಂತೆ ಕಂಡುಬರುತ್ತದೆ. ಜಾತಿಯ ಪ್ರಶ್ನೆ ರಕ್ತದ ನೆನಪಿಗೆ ಸಂಬಂಧಿಸಿದಾದ್ದರಿಂದ ಅದನ್ನು ತರ್ಕದಿಂದ ಅಳೆಯುವುದಾಗಲಿ, ಅರ್ಥ ಮಾಡಿಕೊಳ್ಳುವುದಾಗಲೀ ಸಾಧ್ಯವಿಲ್ಲವೆಂಬುದನ್ನು ಈ ಮೂಲಕ ಅವರು ತಿಳಿಸುತ್ತಿರಬಹುದು. "ಕುಸುಮ ಬಾಲೆ"ಯಲ್ಲಿ ಕುರಿಯಯ್ಯನ ನನ್ನಿ ಪ್ರಸಂಗವು ದಲಿತ ಸಂಸ್ಕೃತಿಯ ಪ್ರಜ್ಞೆಯನ್ನು ಸೂಚಿಸುತ್ತದೆ. ಜೊತೆಗೆ ವಿಮರ್ಶೆಗೆ ಬೇಕೆಂದೇ ಸೃಷ್ಟಿಯಾದ ರೀತಿಯಲ್ಲಿದೆ ಎನಿಸುತ್ತದೆ. ದಲಿತ ಸಾಂಸ್ಕೃತಿಕ ಜಗತ್ತನ್ನು ಪ್ರೀತಿಯಿಂದ, ವಿಶ್ವಾಸದಿಂದ ಮಂಡಿಸತ್ತಲೇ ಅದರೊಳಗಿನ ಎಷ್ಟೋ ವಿರೋಧಭಾಸಗಳನ್ನು ಕಾದಂಬರಿ ವಿಮರ್ಶಾತ್ಮಕವಾಗಿ ತೆಗೆದು ತೋರಿಸುತ್ತದೆ."[೧] /

ಮನುಷ್ಯ ಮನುಷ್ಯರನ್ನು ದ್ವೇಷಿಸಲು ಏನಾದರೊಂದು ಕಾರಣವಿರುತ್ತದೆ. ಯಾರು ವಿನಾಕಾರಣ ಯಾರನ್ನು ದ್ವೇಷಿಸುವುದಿಲ್ಲ. ಆದರೆ ಹೊಲೆಮಾದಿಗರನ್ನು ಮೇಲ್ಜಾತಿಯವರು ಶತ್ರುಗಳ ಹಾಗೆ ಭಾವಿಸಲು ಕಾರಣವೇನು? ಎಂಬ ಪ್ರಶ್ನೆ ಕಾದಂಬರಿಕಾರರನ್ನು ಕಾಡಿದಂತಿದೆ. ಅದಕ್ಕೆ ಉತ್ತರವೆಂಬಂತೆ ಬಂದಿರುವ ಊಹೆ ಸಮಂಜಸವಾಗಿ ಕಾಣುವುದಿಲ್ಲ. ಹಾದರದ ಸಂಬಂಧಗಳನ್ನು ವರ್ಣಸಂಕರದ ಅತ್ಯಂತ ಸಹಜ ಹಾಗೂ ಚಾರಿತ್ರಿಕ ಪ್ರಕ್ರಿಯೆಯಾಗಿ ಗುರುತಿಸಬೇಕೆಂಬ ಆಶಯ ಕಾದಂಬರಿಕಾರರಲ್ಲಿದೆ.

---

[೧] ಷಿ.ಚಂದ್ರಿಕ : ಯಾರ ಜಪ್ತಿಗೆ ಸಿಗದ ನವಿಲುಗಳು : ಪು.ಸಂ. ೮೨.

ಕುರಿಯಯ್ಯನ ಸತ್ಯದಲ್ಲಿ ಜಾತಿ ಸಮಸ್ಯೆ ಎಂಬುದು ಕೇವಲ ಮೇಲು ನೆಲೆಯಲ್ಲಿಯೇ ಕಂಡುಬರುತ್ತದೆ. ಉತ್ತಮಜಾತಿ ಎಂಬ ಪಾವಿತ್ರ್ಯದ ಕಲ್ಪನೆಯನ್ನು ಬೀಳುಗಲೆಯುವುದರಿಂದ ದಲಿತರ ಪ್ರತಿಷ್ಠೆಯನ್ನು ತೋರಿಸುವುದು ಕಾದಂಬರಿಯಲ್ಲಿ ನಡೆದಿದೆ.

"ಕುರಿಯಯ್ಯನ ಆಶಯದ ಮೇಲೆ ಕಾದಂಬರಿಕಾರನ ಒತ್ತು ಹೆಚ್ಚಿದೆ. ಇದು ವರ್ಣ ಸಮಸ್ಯೆಯನ್ನು ಕಾದಂಬರಿಕಾರ ಗ್ರಹಿಸಿದ ರೀತಿ, ಆದರೆ ಇದು ವರ್ಣ ಸಮಸ್ಯೆಯನ್ನು ವಸ್ತುನಿಷ್ಠವಾಗಿ ಗ್ರಹಿಸಿದ ಕ್ರಮವಾಗಲಾರದು. ಒಳಸಂಬಂಧಗಳೇನಿದ್ದರೂ ಕೂಡಾ ದಲಿತರು ವರ್ಣ ದೃಷ್ಟಿಯಿಂದ ಅಸ್ಪೃಶ್ಯರೆ ಆಗಿದ್ದಾರೆ. ವರ್ಗದೃಷ್ಟಿಯಿಂದ ಶೋಷಿತರೇ ಆಗಿದ್ದಾರೆ. ಹಾಗಾಗಿ ಲೈಂಗಿಕ ಒಳಸಂಬಂಧಗಳು ಏನನ್ನು ಮಾಡಿದಂತಾಗುವುದಿಲ್ಲ. ಕ್ರಾಂತಿಕಾರಕ ಕ್ರಿಯೆಗೆ ಈ ಒಳಸಂಬಂಧಗಳು ಹೇತುವಾಗಿದ್ದರೆ ಕಾದಂಬರಿಕಾರನ ಒತ್ತಿಗೆ ಮತ್ತು ಆಶಯಕ್ಕೆ ಬೆಲೆ ಬರುತ್ತಿತ್ತು."[೧]

ಕುರಿಯಯ್ಯನ ನನ್ನಿಯ ಪ್ರಸಂಗದ ಹಿನ್ನೆಲೆಯಲ್ಲಿ ನೋಡಿದಾಗ ಮಾರಿಗುಡಿಯಲ್ಲಿ ಸೇರಿರುವ ಮುಖಂಡರು ಶಿಕ್ಷಣ ಪಡೆದವರು. ಅವರಿಗೆ ಜೀತವಿಮೋಚನೆ ಮಾಡುವುದೂ ಗೊತ್ತು, ಅದರ ಮೂಲವೂ ಗೊತ್ತು. ಕುರಿಯಯ್ಯನ ಮೂಲಕ ಪ್ರಕಟವಾಗುವ ಜಾತಿ ಮೂಲದ ಕಾರಣವು ಅಲ್ಲಿಯ ಮುಖಂಡರನ್ನು ಅಚ್ಚರಿಗೊಳಿಸಿದೆ. ವಸಾಹತುಶಾಹಿ ಶಿಕ್ಷಣದ ಪ್ರಾಪ್ತವಾಗಿರುವ ವೈಚಾರಿಕತೆಯನ್ನು ವಿರೋಧಿಸುತ್ತದೆ. ದಲಿತ ಬದುಕಿನ ಭೌತಿಕಭಾವ ದ್ವಂದ್ವಾತ್ಮಕ ಸಂಬಂಧಗಳ ಸಂಕೀರ್ಣತೆಯನ್ನು ಸರಳೀಕರಿಸಿ ಕೇವಲ ಭೌತಿಕ ವಿನ್ಯಾಸಕ್ಕೆ ಇಳಿಸಲಾಗಿದೆ. ಭಾವ ಸಂಬಂಧಿ ಆಯಾಮ ನಗಣ್ಯವಾಗಿದೆ. ಗಂಡು ಹೆಣ್ಣುಗಳ ನಡುವಿನ ಸಂಬಂಧ ಕಾದಂಬರಿಯ ಮತ್ತೊಂದು ಮುಖ್ಯ ಅಂಶವಾಗಿದೆ. ಯಾವುದೇ ಕೆಳಜಾತಿಯ ಗಂಡುಗಳು ಮೇಲ್ಜಾತಿಯ ಹೆಣ್ಣುಗಳನ್ನು ಕೂಡುವುದು ಇಲ್ಲಿಯ ವಿಶೇಷ. ಆದರೆ ಕಾದಂಬರಿಯೊಳಗೆ ಇದು ಸಾಮಾನ್ಯ ಸಂಗತಿ ಎಂಬಂತೆ ಬಂದಿದೆ.

ಚೆನ್ನ ಬಿ.ಎ. ಓದಿ ಫೇಲಾಗಿಯೂ ಮೇಲು ಜಾತಿಯವರ ಹೊಟ್ಟೆ ಉರಿಸಲು ಗಿರ್ಜಾ ಮೀಸೆ ಬಿಡುತ್ತಾನೆ. ದಲಿತ ಸಂಘದ ನಾಗರಾಜನಿಂದ ತಪ್ಪಿಸಿಕೊಂಡ ಮೇಲೆ ಈತನ ಕೊಲೆಯಾಗುತ್ತದೆ. ಇದು ಈತನ ತಂದೆ ತಾಯಿಯರಿಗೆ ತಿಳಿಯದೇ ಬೊಂಬಾಯಿಯಲ್ಲಿ ಆತ

ಶ್ರೀಮಂತನಾಗಿದ್ದಾನೆಂದು ತಿಳಿದುಕೊಂಡಿರುವುದು ಏನನ್ನು ಸೂಚಿಸುತ್ತದೆ ಎಂಬುದು ತಿಳಿಯುವುದಿಲ್ಲ.

"ದಲಿತ ಸಂಘವು ಜೀತವಿಮೋಚನೆಗಾಗಿ ಮೆರವಣಿಗೆ ನಡೆಸಲು ಮುಂದಾಗಿದೆ. ಇಂತಹ ಮೆರವಣಿಗೆಯಿಂದ ಜೀತ ವಿಮೋಚನೆ ಸಾಧ್ಯವಿಲ್ಲವೆಂಬುದು ಕಾದಂಬರಿಕಾರರ ನಿಲುವಾಗಿದೆ."[೨]

---

[೧] ಎಸ್.ಎಸ್. ಹಿರೇಮಠ್ : ಸಂಕ್ರಮಣ : ಪು.ಸಂ. ೩೩.

[೨] ಬಿ.ಎಂ. ಪುಟ್ಟಯ್ಯ : ದೇವನೂರ ಮಹಾದೇವ : ಪು.ಸಂ. ೨೪.

ಅಧ್ಯಾಯ - ೪

ಸಿದ್ದಲಿಂಗಯ್ಯ ಅವರ ಕಾವ್ಯ ಮತ್ತು ನಾಟಕ

ಡಾ. ಸಿದ್ದಲಿಂಗಯ್ಯ ಅವರು ३.೨.೧೯೫೪ರಂದು ರಾಮನಗರ ತಾಲ್ಲೂಕಿನ 'ಮಂಚನಬೆಲೆ' ಯಲ್ಲಿ ಜನಿಸಿದರು. ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಪ್ರಾಧ್ಯಾಪಕರು, ವಿಧಾನ ಪರಿಷತ್ತಿನ ಸದಸ್ಯರೂ ಆಗಿದ್ದರು. ಪ್ರಸ್ತುತ ಕನ್ನಡ ಅಭಿವೃದ್ದಿ ಪ್ರಾಧಿಕಾರ ಅಧ್ಯಕ್ಷರಾಗಿದ್ದಾರೆ. ಬೂಸಾ ಚಳುವಳಿಯ ಸಂದರ್ಭದಲ್ಲಿ 'ದಲಿತಕವಿ' ಸಿದ್ದಲಿಂಗಯ್ಯ ಕಾಣಿಸಿಕೊಂಡರು. ಬಹಳ ಹಿಂದಿನಿಂದಲೂ ತುಳಿತಕ್ಕೊಳಗಾಗಿರುವ 'ದಲಿತ ವರ್ಗದ ನೋವನ್ನು ಕಾವ್ಯವನ್ನಾಗಿಸಿ ಕನ್ನಡ ಕಾವ್ಯ ಪ್ರಪಂಚಕ್ಕೆ ಹೊಸ ಆಯಾಮ ನೀಡಿ ಕನ್ನಡ ಸಾಹಿತ್ಯದಲ್ಲಿ ಇತಿಹಾಸ ನಿರ್ಮಿಸಿದ ಕವಿಯಾಗಿದ್ದಾರೆ. ಸಿದ್ದಲಿಂಗಯ್ಯನವರು ಪಿ.ಯು.ಸಿ. ಓದುವಾಗಲೇ ಕವಿತೆ ಬರೆಯಲಾರಂಭಿಸಿದರು. ಇವರ ಮೇಲೆ ಸಾಹಿತ್ಯಕವಾಗಿ ಮೊದಲು ಕುವೆಂಪು ಪ್ರಭಾವ ಇವರ ಮೇಲಾಗಿದೆ. ಕುವೆಂಪು ಅವರ ಮೌಢ್ಯ ವಿರೋಧಿ ವಿಚಾರ ಮತ್ತು ಪ್ರತಿಭಟನೆ ಸಿದ್ದಲಿಂಗಯ್ಯನವರನ್ನು ಆಕರ್ಷಿಸಿತು. ಅನಂತರ ಬಂಡಾಯಗಾರರಾಗಿ ಕಾಣಿಸಿಕೊಂಡು ಅಂಬೇಡ್ಕರ್, ಲೋಹಿಯ ಅವರ ಪ್ರಭಾವಕ್ಕೊಳಗಾದರು. ಕಮ್ಯುನಿಸ್ಟ್ ವಿಚಾರಧಾರೆ ಕಡೆಗೆ ಇವರ ಗಮನ ಹರಿಯಿತು. ದಲಿತ ಚಳುವಳಿಗಳಲ್ಲಿ ಭಾಗವಹಿಸಿ ಊರೂರ ಮೇಲೆ ಸಂಚರಿಸಿದರು. ಸಮಾಜದಲ್ಲಿದ್ದ ಜಾತಿ ವ್ಯವಸ್ಥೆ ಬಗ್ಗೆ ಆಳವಾಗಿ ಚಿಂತಿಸಿದರು. ಸಿದ್ದಲಿಂಗಯ್ಯನವರು ದಲಿತ ಚಳುವಳಿಯ ನಾಯಕರೂ ಆಗಿ, ರಾಜಕೀಯ ಅಖಾಡಕ್ಕೂ ಇಳಿದರು. ದಲಿತ ಸಂಘರ್ಷ ಸಮಿತಿಯನ್ನು ಹುಟ್ಟು ಹಾಕಿದ ಕಾರಣಪುರುಷರಲ್ಲಿ ಇವರು ಒಬ್ಬರು. ಅಂಬೇಡ್ಕರ್, ಲೋಹಿಯ, ಮಾರ್ಕ್ಸ್‌ವಾದಿ ವಿಚಾರ ಧಾರೆಗಳಿಂದ ಪ್ರಭಾವಿತರಾಗಿ ಕಾವ್ಯ ರಚನೆಗೈದರು.

ಸಿದ್ದಲಿಂಗಯ್ಯನವರು ಸಮಾಜದಲ್ಲಿ ದೌರ್ಜನ್ಯಕ್ಕೊಳಗಾಗಿರುವ, ಶೋಷಣೆಗೊಳಗಾಗಿರುವ ಸಾಮಾಜಿಕ, ರಾಜಕೀಯ ಸವಲತ್ತುಗಳಿಂದ ವಂಚಿತರಾಗಿರುವ, ಬಡತನದ ಬೇಗೆಯಲ್ಲಿ ನೊಂದವರ ಬಗ್ಗೆ ಕಾವ್ಯ ಬರೆದರು. ಇವರ ಮೊದಲ ಕವನ ಸಂಕಲನ 'ಹೊಲೆ ಮಾದಿಗರ ಹಾಡು' 'ಸಾವಿರಾರು ನದಿಗಳು,' 'ಕಪ್ಪು ಕಾಡಿನ ಹಾಡು' ಮತ್ತು 'ಮೆರವಣಿಗೆ'ಯಲ್ಲಿ ಇತ್ತೀಚಿನ

ಕವನಗಳನ್ನು ಪ್ರಕಟಿಸಿದ್ದಾರೆ. ಜೊತೆಗೆ 'ಏಕಲವ್ಯ' 'ಪಂಚಮ' ಮತ್ತು ನೆಲಸಮ' ಎಂಬ ಮೂರು ನಾಟಕಗಳನ್ನು ಬರೆದಿದ್ದಾರೆ. 'ಊರು ಕೇರಿ' ಇವರ ಆತ್ಮಕಥನವಾಗಿದೆ.

ಸಿದ್ದಲಿಂಗಯ್ಯರವರ ಕಾವ್ಯಗಳು

ಸಿದ್ದಲಿಂಗಯ್ಯನವರ ಮೊದಲ ಕವನಗಳಲ್ಲಿ ಆಕ್ರೋಶ, ಪ್ರತಿಭಟನೆ, ಸಾಮಾಜಿಕ, ರಾಜಕೀಯ ವ್ಯವಸ್ಥೆಯ ವಿರುದ್ಧ ಹೋರಾಟದ ಮನೋಭಾವ ವ್ಯಕ್ತವಾಗಿದೆ. ಅನಂತರ ಸೃಜನಶೀಲ ಬರವಣಿಗೆಯಲ್ಲಿ ತೊಡಗಿ ಒಳಾಂತರಗಳ ಮೂಲಕ ಆಕ್ರೋಶ, ಪ್ರತಿಭಟನೆಯನ್ನು ತಮ್ಮ ಕಾವ್ಯದಲ್ಲಿ ವ್ಯಕ್ತಪಡಿಸಿದ್ದಾರೆ. ದಲಿತ ಅನುಭವದ ಮೂಲಕ ತಮ್ಮ ಕಾವ್ಯದಲ್ಲಿ ರೊಚ್ಚು, ಸಿಟ್ಟುಗಳನ್ನು ವ್ಯಕ್ತಪಡಿಸಿರುವುದು ಗಮನಾರ್ಹವಾಗಿದೆ.

ಪ್ರಸ್ತುತ ನಿಬಂಧದಲ್ಲಿ ಸಿದ್ದಲಿಂಗಯ್ಯನವರ ಸಾಹಿತ್ಯದಲ್ಲಿ ದಲಿತ ಪ್ರಜ್ಞೆಯನ್ನು ಗುರುತಿಸುವ ಪ್ರಯತ್ನವಾಗಿದೆ. ಮೊದಲಿಗೆ ಸಿದ್ದಲಿಂಗಯ್ಯನವರ 'ಹೊಲೆಮಾದಿಗರ ಹಾಡು' ಕವನ ಸಂಕಲನವನ್ನು ಪ್ರಸ್ತಾಪಿಸುವುದು ಉಚಿತವಾಗಿದೆ. ಸಿದ್ದಲಿಂಗಯ್ಯನವರ 'ಹೊಲೆ ಮಾದಿಗರ ಹಾಡು' ಕವನ ಸಂಕಲನ ೧೯೭೫ರಲ್ಲಿ ಪ್ರಕಟಗೊಂಡಿತು. ಇದು ಕನ್ನಡ ದಲಿತ ಸಾಹಿತ್ಯದಲ್ಲಿ ಅಷ್ಟೇ ಅಲ್ಲದೇ ಇಡೀ ಕನ್ನಡ ಸಾಹಿತ್ಯದಲ್ಲೇ ಹೊಸ ಅಲೆಯನ್ನು ಎಬ್ಬಿಸಿತು. ಈ ಕವನ ಸಂಕಲನದಲ್ಲಿ ಶತಮಾನಗಳಿಂದ ತುಳಿತಕ್ಕೆ ಒಳಗಾದ ದಲಿತವರ್ಗದ ವೇದನೆ ಮತ್ತು ಪ್ರಜ್ಞೆಗಳ ವಿಶಿಷ್ಟವಾದಂತಹ ಅಭಿವ್ಯಕ್ತಿಯಾಗಿದೆ. ಇಲ್ಲಿನ ಕವಿತೆಗಳಲ್ಲಿ ಆಕ್ರೋಶ, ಸಿಟ್ಟು, ರೊಚ್ಚು ಕಂಡುಬರುತ್ತದೆ. ಈ ಕವನಸಂಕಲನವನ್ನು ಕುರಿತ ಹಾಗೆ ದೇವನೂರ ಮಹಾದೇವರವರು "ಹೊಲೆಮಾದಿಗರ ಹಾಡು ೨೦ನೇ ಶತಮಾನದ ಜನಪದಕಾವ್ಯ ಎನ್ನುವಂತಿದೆ.ಇದು ಹೊಸ ನೆಲದ ಮೊಳಕೆ. ಕಡೆಗಣಿಸಲ್ಪಟ್ಟ ಜಗತ್ತಿನ ಸಾಂಕೇತಿಕ ದನಿ. ಫಲವತ್ತುತನವನ್ನು ಅದರ ಹುಟ್ಟನಲ್ಲೇ ಹುದುಗಿಸಿಕೊಂಡಂಥದ್ದು"[೧] ಎಂದಿದ್ದಾರೆ.

"ತಲೆತಲಾಂತರದಿಂದಲೂ ಸಮಾಜದ ಕ್ರೌರ್ಯ ಪೂರ್ಣತುಳಿತಕ್ಕೆ ಒಳಗಾಗಿ ಹಿಂಸೆಯನ್ನೇ ಉಂಡುಟ್ಟು ಹೊದ್ದುಬಂದ ಇಂಡಿಯಾದ ದುಡಿದಿಕ್ಕುವ ಮೂಕ ಜನತೆಯ ಕುದಿವ

[೧] ಸಿದ್ದಲಿಂಗಯ್ಯ : ಹೊಲೆಮಾದಿಗರ ಹಾಡು : ಪು.ಸಂ. ೩೬.

ಅಂತರಂಗವನ್ನು ಗೆಳೆಯ ಸಿದ್ದಲಿಂಗಯ್ಯ ಪರಿಣಾಮಕಾರಿಯಾಗಿ ಪರಿಚಯ ಮಾಡಿಕೊಡಲು ಆರಂಭಿಸಿದ್ದಾರೆ".[೧] ಎಂದು ಕಾಳೇಗೌಡ ನಾಗವಾರ ಅವರು ಅಭಿಪ್ರಾಯ ಪಟ್ಟಿದ್ದಾರೆ.

ಈ ಕವನಸಂಕಲನದಲ್ಲಿ ಒಟ್ಟು ೨೦ ಪದ್ಯಗಳಿದ್ದು ಅವುಗಳಲ್ಲಿ 'ನನ್ನ ಜನಗಳು', 'ಒಂದು ಮೂಳೆಯಹಾಡು', 'ಒಂದು ಪಥ', 'ಕ್ರಾಂತಿ ಪದ', 'ಹಬ್ಬ', 'ಮಸಣದ ಚೆಲುವೆ', ಇವುಗಳಲ್ಲಿ ಸಿಟ್ಟು, ಆಕ್ರೋಶ ಮತ್ತು ವಿಶಾದ ಬೆರೆತಿವೆ. ದಲಿತ ಅನುಭವವನುಂಡ ಕವಿಗಳು ಮಾತ್ರ ಈ ರೀತಿ ಬರೆಯಲು ಸಾಧ್ಯ ಎಂಬುದನ್ನು ಸಿದ್ಧಲಿಂಗಯ್ಯ ಸಾಬೀತುಪಡಿಸಿದ್ದಾರೆ.

ಉದಾಹರಣೆಯಾಗಿ ಕೆಲವು ಕವನಗಳ ತುಣುಕುಗಳನ್ನು ನೋಡಬಹುದು.

"ಬಡ್ಡಿಯನ್ನು ತೆತ್ತೋರು ಭಾಷಣಗಳ ಬೆಂಕಿಯಲ್ಲಿ
ಬೆಂದು ಬೂದಿಯಾದೋರು ನನ್ನ ಜನಗಳು
ಪರಮಾತ್ಮನ ಹೆಸರು ಹೇಳಿ ಪರಮಾನ್ನ ಉಂಡ ಜನಕೆ
ಬೂಟು ಮೆಟ್ಟು ಹೊಲೆದೋರು ನನ್ನ ಜನಗಳು

(ನನ್ನ ಜನಗಳು ಪುಟ ಸಂಖ್ಯೆ ೭)

"ದಲಿತರಾಗ ಗುನುಗುತಿದೆ ಗೋರಿಯ ಕರಿ ಬಿರುಕಿನಲಿ
ಶೋಷಣೆಯಲೆ ಶೃಂಗಾರವು ಆಯಿತೆನ್ನ ಹೆಣಕೆ
ಸುಲಿವವರನು ಸುಲಿವದಿನ ಬಂದಿತೆಂದು ಹಿಗ್ಗುತಿದೆ
ಸುಡುಗಾಡಿನ ಬಿರುಗಾಳಿಯ ಕ್ರಾಂತಿಗೀತೆ ಹಾಡಿ"

(ಕ್ರಾಂತಿ ಪದ ಪು.ಸಂ. ೧೩)

"ನಮ್ ಹೇಲ್ ತಿನ್ನೋನಾಯ್ನ ಕ್ವಾಣೆವಳೀಕ್ ಬುಟ್ಕತ್ತಾರೆ
ನಾವ್ ಬೆಳಿತಿದ್ ತಿಂತಾರೆ ನಾವ್ ದುಡಿದಿದ್ ತಗತ್ತಾರೆ
    ನಾವ್ ಮಾತ್ರ ಬ್ಯಾಡ
ಹೊಲೇರು ಮಾದುಗ್ರು ಅನ್ನೋಬದ್ಲು ಹರಿಜನ
ಅಂತ ಕರದು ನಗ್ತಾರಲ್ಲಮ್ಪೋ"

(ಒಂದು ಪದ ಪು.ಸಂ. ೧೦)

---

[೧] ಸಿದ್ದಲಿಂಗಯ್ಯ : ಹೊಲೆಮಾದಿಗರ ಹಾಡು : ಪು.ಸಂ. ೩೯.

ಎಷ್ಟ್ ದಿನಾ ಈ ಪುಟ್ಕೋಸಿಗಳಾಟ
ಸಿಡಿತೀನಿ ಬಾಂಬ್ ಸಿಡ್ದಂಗೆ
ಇವ್ರ ಸಿಂಗಾರ, ಸೋಪಾ, ಗಾಜುಲೈಟು ಎಲ್ಲಾ
ಪುಡಿ ಪುಡಿ ಆಗಂಗೆ
ನನ್ಮೈಲ್ ನಿಂತ್ಕಂಡ್ ತುಳಿತಿರೋ ಈ ಬಂಗ್ಲೆ
ಕೈಳಿಕ್ ಬೀಳಂಗೆ ....
ನಾ ಮೂಳೆ ನಾ ಇಂಗೆ ಇರಲ್ಲ
ಕೂಗ್ತಿನಿ ಸಿಡಿತಿನಿ, ಮನುಷ್ಯ ಆಯ್ತಿನಿ"

(ಒಂದು ಮೂಳೆಯ ಹಾಡು ಪು.ಸಂ. ೯)

ಈ ಕವನಗಳಲ್ಲಿ ಒಳಗೊಳಗೆ ಅಳುವ ಜನ, ಒದೆಸಿಕೊಂಡು ಒರಗಿದ ಜನ ಒಮ್ಮೆ ಸಿಡಿದೆದ್ದಾರು ಎನ್ನುವ ಮನೋಭಾವವನ್ನು ಉಳ್ಳವಾಗಿವೆ. ದಲಿತ ವರ್ಗದ ಸ್ಥಿತಿಯನ್ನು ಕಾವ್ಯದಂಚಿನಲ್ಲೇ ಸೃಷ್ಟಿಸುವ ಸಿದ್ಧಲಿಂಗಯ್ಯನವರ 'ನನ್ನ ಜನಗಳು' ಕವಿತೆ ತೋರಿಸುತ್ತದೆ. ಈ ಕವಿತೆಯ ಕಥೆ ಮುಂದಿನ ಕವನಗಳಿಗೆ ಒಂದಲ್ಲಾ ಒಂದು ರೀತಿಯಲ್ಲಿ ವಸ್ತುವಾಗಿವೆ. ಕವಿ ಕವನಗಳಲೆಲ್ಲಾ ತಮ್ಮ ವರ್ಗದ ಸುತ್ತಮುತ್ತಲಿನ ಭಾಷೆಯನ್ನೇ ಬಳಸಿಕೊಂಡಿದ್ದಾರೆ.

ಈ ಕವನಸಂಕಲನದಲ್ಲಿ ಮುಖ್ಯವಾಗಿ ಕಂಡುಬರುವುದು ಸಿಟ್ಟು, ಈ ಸಿಟ್ಟು ತನ್ನೆಲ್ಲಾ ಸಾಮರ್ಥ್ಯವನ್ನು ಮೈದುಂಬಿಸಿಕೊಂಡು ಹೊರಬರುತ್ತದೆ ಆದರೆ ಹಾಗೆ ಹೊರಬರಲು ಸಿಟ್ಟನ್ನು ತಾಳಿಕೊಳ್ಳುವ ಶಕ್ತಿ ಭಾಷೆಗೆ ಇಲ್ಲವೆನಿಸುತ್ತದೆ. ಸಿಟ್ಟಿನ ಉದಾ : 'ಒಂದು ಪದ' ಕವನದ ತುಣುಕು.

"ಇಕ್ರಲಾ ವದೀರ್ಲ
ಈ ನನ್ನ ಮಕ್ಳ ಚರ್ಮ ಎಬ್ರಲಾ
ದೇವ್ರು ಒಬ್ನೇ ಅಂತಾರೆ
ಒಳಗೊಂದೊಂದ್ ತರಾ ಗುಡಿ ಕಟ್ಟವ್ರೆ ಎಲ್ಲಾರು ದೇವ್ರು ಮಕ್ಳು ಅಂತಾರೆ
ಹೊಲೇರ್ನ ಕಂಡ್ರೆ ಹಾವ್ ಕಂಡಂಗಾಡ್ತಾರೆ
ಹೋಟ್ಲು, ಬಾವಿ, ಮನೆ ಯಾವುದ್ಕೂ ಸೇರ್ಸಲ್ವಲ್‌ರೋ"

ಇಲ್ಲಿಯ ಆಕ್ರೋಶ ಬೈಗುಳದ ಭಾಷೆಯಾಗಿರುವುದರಿಂದ ನಮ್ಮ ಕಾವ್ಯ ಪರಂಪರೆಯನ್ನು ನೋಡಿದಾಗ ವಿಚಿತ್ರವೆನಿಸುತ್ತದೆ.

"ಮೊದಲಬಾರಿಗೆ ಸಿದ್ದಲಿಂಗಯ್ಯನವರು ಸಿಟ್ಟನ್ನು ಕಾವ್ಯದಲ್ಲಿ ಅಭಿವ್ಯಕ್ತಿಗೊಳಿಸಿದಾಗ ಕನ್ನಡ ಭಾಷೆಗೆ ಸೋತು 'ಇಕ್ರಲಾ ವದೀರ್ಲ ಎಂಬ ಭಾವನೆ ಮೈದುಂಬಿ ಬರುತ್ತದೆ."[೧]

ಇಲ್ಲಿ ಸಿದ್ದಲಿಂಗಯ್ಯನವರು ತಮ್ಮ ವರ್ಗದ ಪ್ರಜ್ಞೆಯನ್ನು ನೋವಿನ ಸ್ಪರ್ಶದ ಮೂಲಕ ನೀಡುತ್ತಿದ್ದಾರೆ. ನಮ್ಮ ಭಾರತದಲ್ಲಿನ ಜಾತಿ ಪದ್ಧತಿಯ ಕಟ್ಟು ನಿಟ್ಟಿನಿಂದಾಗಿ ದಲಿತರು ಸಾಮಾಜಿಕ, ರಾಜಕೀಯ, ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಸಮಾನತೆ ಮತ್ತು ಸವಲತ್ತುಗಳಿಂದ ವಂಚಿತರಾಗಿ ಯಾವ ರೀತಿಯ ಅಸಮಾನತೆಯ ಕೂಪದಲ್ಲಿ ತಳ್ಳಲ್ಪಟ್ಟಿದ್ದಾರೆ ಎಂಬುದನ್ನು, ನೋವು ದುಃಖಗಳನ್ನು ಅನುಭವಿಸುತ್ತಿದ್ದಾರೆ ಎಂಬುದನ್ನು ಇಕ್ರಲಾ ವದೀರ್ಲಾ ಕಾವ್ಯ ತಿಳಿಯಪಡಿಸುತ್ತದೆ.

ನನ್ನ ಜನಗಳು ಕವನದಲ್ಲಿ

"ಹಸಿವಿನಿಂದ ಸತ್ತೋರು ಸೈಜುಗಲ್ಲು ಹೊತ್ತೋರು
ಒದೆಸಿಕೊಂಡು ವರಗಿದೋರು ನನ್ನ ಜನಗಳು
ಹೊಲವನುತ್ತು ಬಿತ್ತೋರು ಬೆಳೆಯ ಕುಯ್ದು ಬೆವರೋರು
ಬಿಸಿಲಲಿ ಬೇಯೋರು ನನ್ನ ಜನಗಳು
ಮಾಳಿಗೆಗಳ ಎತ್ತಿದೋರು ಬಂಗಲೆಗಳ ಕಟ್ಟಿದೋರು
ತಳಾದಿಗೆ ಸಕ್ಕಿದೋರು ನನ್ನ ಜನಗಳು
ಬೀದಿಯಲಿ ಬಿದ್ದೋರು ಸದ್ದಿಲ್ಲದೆ ಇದ್ದೋರು
ಒಳಗೊಳಗೆ ಅತ್ತೋರು ನನ್ನ ಜನಗಳು"

ಈ ಸಾಲುಗಳು ದಲಿತ ಜನಾಂಗದ ಶ್ರಮವನ್ನು ವ್ಯಕ್ತಪಡಿಸುತ್ತವೆ. ಈ ಜನಾಂಗ ಕಷ್ಟಪಟ್ಟು ದುಡಿದರೂ ಅವರ ದುಡಿತಕ್ಕೆ ತಕ್ಕ ಪ್ರತಿಫಲ ಸಿಗುವುದಿಲ್ಲ. ಇಂತಹ ಸಂದರ್ಭದಲ್ಲಿ ಎಂತಹ ಅಸಹಾಯಕ ಸ್ಥಿತಿಯಲ್ಲಿ ನೊಂದು ನರಳುತ್ತಾರೆಂಬುದನ್ನು ಸಮರ್ಥವಾಗಿ ಹಿಡಿದಿಟ್ಟಿವೆ. ರಾಷ್ಟ್ರದ

---

[೧] ಹೆಚ್. ದಂಡಪ್ಪ (ಸಂ) : ಬಡವರ ನಗುವಿನ ಶಕ್ತಿ : ಪು.ಸಂ. ೧೬೫.

ಪ್ರಗತಿಗಾಗಿ, ಉನ್ನತಿಗಾಗಿ ಹತ್ತು ಹಲವು ಶ್ರಮದ ಕೆಲಸಗಳನ್ನು ಮಾಡಲು ತಮ್ಮ ಬದುಕನ್ನೇ ಮೀಸಲಿಟ್ಟಿರುವ ಈ ದಲಿತರಿಗೆ ಪ್ರಾಥಮಿಕ ಅವಶ್ಯಕತೆಗಳಾದ ಅನ್ನ, ಬಟ್ಟೆ, ವಸತಿ ಸೌಕರ್ಯಗಳು ಸಿಗದೆ ಹೋಗಿ ಹೇಗೆ ದುಃಖ ದುಮ್ಮಾನದ ನೋವು ಸಂಕಟದ ಸ್ಥಿತಿಯಲ್ಲಿ ಬಳಲುತ್ತಾರೆ ಎಂಬುದನ್ನು ಈ ಕವನ ಧ್ವನಿಸುತ್ತದೆ.

ನಮ್ಮ ದೇಶದ ವ್ಯವಸ್ಥೆಯಲ್ಲಿ ಜನ ಸಾಮಾನ್ಯರು ದೀನದಲಿತರು ಶ್ರೀಮಂತರ ದುಡಿಯುವ ಗುಲಾಮಗಿರಿಯಿಂದ ಮುಕ್ತರಾಗುತ್ತಾರೆಂದು ಭಾವಿಸಲಾಗಿತ್ತು. ಆದರೆ ನಮ್ಮ ದೇಶದಲ್ಲಿ ಸ್ವಾತಂತ್ರ್ಯವೆಂಬುದು ಸುಖ ಸವಲತ್ತುಗಳನ್ನು ಕನಸಿನಲ್ಲಿ ಮಾತ್ರ ಅನುಭವಿಸುವಂತಾಯಿತು. ಪ್ರಜ್ಞೆಯೇ ಪ್ರಭು ಎಂಬ ಪ್ರಜಾಪ್ರಭುತ್ವ ವ್ಯವಸ್ಥೆ ದೊಡ್ಡ ವ್ಯಂಗ್ಯವಾಯಿತು. ಪ್ರಜಾಪ್ರಭುತ್ವದ ಮುಖವಾಡದಲ್ಲಿ ಸರ್ವಾಧಿಕಾರ, ದಮನಕಾರಿ ಪ್ರವೃತ್ತಿ ರಾರಾಜಿಸಿ ದುಡಿಯುವ ವರ್ಗವನ್ನು, ಜನಸಾಮಾನ್ಯರನ್ನು ದಲಿತರನ್ನು ಅಧೋಗತಿಗೆ ತಳ್ಳಲಾಯಿತು. ಇದರ ಸ್ಪಷ್ಟ ಅರಿವಿರುವ ಕವಿ ಹಲವಾರು ಕವನಗಳಲ್ಲಿ ಈ ವ್ಯವಸ್ಥೆಯ ಮೋಸ ವಂಚನೆಗಳನ್ನು ಬಯಲಿಗೆಳೆದಿದ್ದಾರೆ.

"ಗುಡಿಸಲುಗಳು ಗುಡುಗುತ್ತಿವೆ ಬಂಗಲೆಗಳು ನಡುಗುತ್ತಿವೆ

ಎಲ್ಲೆಲ್ಲಿಯೂ ಮೊಳಗುತ್ತಿದೆ ನವಕ್ರಾಂತಿಯ ಗಾನ

ಮತಗಳು ಹತವಾಗುತ್ತಿವೆ ಜನಪಥಗಳು ಮೂಡುತ್ತಿವೆ

ಅಸಮಾನತೆ ಆಗುತ್ತಿದೆ ಕ್ರಾಂತಿಗೆ ಸೋಪಾನ

'ಕ್ರಾಂತಿಪದ' ಪದ್ಯದ ಮೊದಲ ಈ ತುಣುಕುಗಳು ಗುಡಿಸಲು-ಬಂಗಲೆ, ಬಡವ ಶ್ರೀಮಂತ, ಕಷ್ಟ – ಸುಖಗಳ ಸಂಕೇತವಾಗಿ ಮೂಡಿಬಂದಿವೆ. "ಇಲ್ಲಿಯವರೆಗೂ ಬಂಗಲೆಗಳು ಗುಡಿಸಲುಗಳನ್ನು ತುಳಿಯುತ್ತಾ ಶೋಷಣೆ ಮಾಡುತ್ತಾ ಬಂದಿವೆ. ಆದರೆ ಈಗ ಕಾಲ ಬದಲಾಗತೊಡಗಿದೆ. ಆದ್ದರಿಂದ ಶತಮಾನಗಳಿಂದ ತುಳಿತಕ್ಕೆ ಒಳಗಾಗಿದ್ದ ಶೋಷಿತ ಜನರಿಗೆ ನಿಧಾನವಾಗಿ ಪ್ರಜ್ಞೆ ಮೂಡತೊಡಗಿದೆ. ಗುಡಿಸಲುಗಳು ಗುಡುಗಲು ಶುರು ಮಾಡಿವೆ. ಗುಡಿಸಲುಗಳ ಆ ನೋವು ಸಂಕಟಗಳ ಆಕ್ರೋಶದ ಗುಡಿಗಿಗೆ ಸೊಕ್ಕಿದ ಬಂಗಲೆಗಳು ನಡುಗ ತೊಡಗಿವೆ. ಎಲ್ಲೆಲ್ಲಿಯೂ ನವಕ್ರಾಂತಿಯ ಗಾನ ಕವಿಗೆ ಕೇಳತೊಡಗಿದೆ. ಸಮಾಜದಲ್ಲಿ ವರ್ಗಗಳ

ನಡುವಿನ ಅಂತರ ಹೆಚ್ಚಾಗುತ್ತಾ ಹೋದಂತೆಲ್ಲ ವರ್ಗ ಸಂಘರ್ಷ ಅನಿವಾರ್ಯವಾದುದು ಎಂಬ ಸತ್ಯವನ್ನು ಪ್ರಜ್ಞೆಯ ಮೂಲಕ ಕವಿ ಹೇಳ ಹೊರಟದ್ದಾರೆ. ಆದ್ದರಿಂದ ಅಸಮಾನತೆ ಆಗುತ್ತಿದ್ದ ಕ್ರಾಂತಿಗೆ ಸೋಪಾನ ಎಂಬ ಮಾತು ಧ್ವನಿಪೂರ್ಣ. ಮುಂದಿನ ಮಾತುಗಳು ಕ್ರಾಂತಿಯ ತೀವ್ರತೆಯನ್ನು ವ್ಯಂಜಿಸುತ್ತದೆ. ಶ್ರಮಿಕ ವರ್ಗದ ಬೆವರಹನಿ ಬೆಂಕಿಯಾಗಿ ಸಿಡಿದು ಶೋಷಕರನ್ನು ಕಂಗೆಡಿಸುವ ಚಿತ್ರ ಅರ್ಥಗರ್ಭಿತವಾಗಿದೆ."[೧] ಮೇಲು ಕೀಳು ಎಂಬ ಭಾವನೆಗಳು ಈ ವ್ಯವಸ್ಥೆಯಲ್ಲಿ ನಿಚ್ಚಳವಾಗಿದೆ. ಇದು ಧರ್ಮ, ಜಾತಿ, ಆರ್ಥಿಕ ವ್ಯವಸ್ಥೆ ಮುಂತಾದವುಗಳಲ್ಲಿ ಕಂಡುಬರುತ್ತದೆ. ದೇವರು ಧರ್ಮದ ಹೆಸರಿನಲ್ಲಿ ಜನಸಾಮಾನ್ಯರನ್ನು ಸುಳಿಯುವ ಮೋಸಗಾರರನ್ನು ಇಲ್ಲಿ ಪ್ರಶ್ನಿಸಲಾಗಿದೆ.

'ಒಂದು ಮೂಳೆಯ ಹಾಡು' ಪದ್ಯ ಧ್ವನಿರಮ್ಯವಾಗಿ ಬಂದಿದೆ. ಇಲ್ಲಿ ದಲಿತ ಬದುಕಿನಲ್ಲಿ ಎಲ್ಲವನ್ನು ಕಳೆದುಕೊಂಡು ಮೂಳೆಯ ಹಂತಕ್ಕೆ ಹೋಗಿರುವ ಹತಾಶ ಮನೋಭಾವವನ್ನು, ನೋವು ಸಂಕಟಗಳನ್ನು ಇದು ಅತ್ಯಂತ ಧ್ವನಿಪೂರ್ಣವಾಗಿ ವ್ಯಂಜಿಸುತ್ತದೆ. ಇಲ್ಲಿ ಮೂಳೆಯು ಶೋಷಣೆಗೊಳಪಟ್ಟ ಜನಾಂಗದ ಪ್ರಜ್ಞೆಯನ್ನು ಗೋಚರಿಸುತ್ತದೆ. ಇಂತಹ ಮೂಳೆ ತಮ್ಮ ರಕ್ತ ಮಾಂಸವನ್ನು ಕಿತ್ತು ತಿಂದವರ ವಿರುದ್ಧ ಸಹಜವಾಗಿಯೇ ಬಂಡೆದ್ದಿದೆ. ಬಡ ದಲಿತರಿಗೆ ಹೆಚ್ಚಿನ ಬಡ್ಡಿಯಲ್ಲಿ ಸಾಲ ಕೊಟ್ಟು ಆ ಬಡ್ಡಿಯ ಸಾಲದ ಹೊರೆಯನ್ನು ತೀರಿಸಲಾರದೆ ತಮ್ಮ ಬದುಕಿನ ಕೊನೆಯವರೆಗೂ ಶ್ರೀಮಂತರ ಅಡಿಯಲ್ಲಿ ಸಿಕ್ಕಿ ನರಳುವುದು ಮಾಮೂಲಿ ದಂಧೆಯಾಗಿದೆ. ಆದರೆ ಈಗ ಮೂಳೆಗೆ ಅಲ್ಪಸ್ವಲ್ಪ ಅರಿವು ಮೂಡತೊಡಗಿ ಸಿಡಿಯಲು ಪ್ರಾರಂಭವಾಗಿದೆ. ಇದು ದಲಿತರು ಎಚ್ಚುತ್ತುತಿರುವ ಬಗೆಯನ್ನು ವಿಷಾದಪಡಿಸುತ್ತದೆ. ಈ ದಲಿತರು ಸಿಡಿದು ವರ್ಗ ಭೇದವನ್ನು ಅಳಿಸಲು ಅಣಿಯಾಗುತ್ತಿದ್ದಾರೆ.

'ಸೌದೆ ಸಿಗಿದಂತೆ ಸಿಗಿತಿನಿ' 'ಕಳ್ಳು ಪಚ್ಚಿ ಬಗಿತಿ' 'ಕುಟ್ತಿನಿ ಕುಡಿತಿನಿ ಗಟಗಟ' ಈ ರೀತಿಯ ಉಕ್ತಿಗಳು ತೀವ್ರ ಪ್ರತಿಭಟನೆಯ ತೀವ್ರ ದಲಿತ ಪ್ರಜ್ಞೆಯ ಸಂಕೇತವಾಗಿ ಬಂದಿವೆ. ಈ ಮಾತುಗಳಲ್ಲಿ ಸಿದ್ಧಲಿಂಗಯ್ಯನವರು ವರ್ಗ ಪ್ರಜ್ಞೆಯನ್ನು ಶ್ರುತಪಡಿಸಿದ್ದಾರೆ. ಶೋಷಿತ ವರ್ಗ ಶೋಷಕ ವರ್ಗದ ವಿರುದ್ಧ ಬಂಡೆದ್ದಿರುವುದನ್ನು ಕಲಾತ್ಮಕವಾಗಿ ಧ್ವನಿಪೂರ್ಣವಾಗಿ ಹೇಳುತ್ತದೆ.

---

[೧] ಹೆಚ್ ದಂಡಪ್ಪ (ಸಂ) : ಬಡವರ ನಗುವಿನ ಶಕ್ತಿ : ಪು.ಸಂ. ೧೦೦

"ಈ ಕವನ ಸಂಕಲನದ 'ಸುತ್ತೋಗೋರಾ' 'ಗಳ್ದಗಳು' 'ಹಬ್ಬ' 'ಸುಂಟರಗಾಳಿ' 'ಹಣೆಬರವು ಎಂಬ ನಾಟಕವು' 'ನಗ್ಬೇಕು' 'ನಾವು' ಮುಂತಾದ ಕವನಗಳು "ದಲಿತ ಜನಾಂಗದ ಶೋಷಿತ ಸಮುದಾಯದ ನೋವು ಸಂಕಟಗಳನ್ನು ಆಕ್ರೋಶ ಆವೇಶಗಳನ್ನು ವ್ಯವಸ್ಥೆಯ ಮೋಸ ಕುತಂತ್ರಗಳನ್ನು, ಶೋಷಣೆಯ ಪರಿಯನ್ನು ಅತ್ಯಂತ ಮಾರ್ಮಿಕವಾಗಿ ಶಬ್ಧಚಿತ್ರಗಳ ಮೂಲಕ ಕಟ್ಟಿಕೊಡುತ್ತದೆ."[೧]

ಈ ಕವನ ಸಂಕಲನವನ್ನು ಒಟ್ಟಾರೆಯಾಗಿ ಕುರಿತು ಕಾಳೇಗೌಡನಾಗವಾರ ಅವರು "ಸಿದ್ದಲಿಂಗಯ್ಯನವರ ಈ ೨೦ ಕವನಗಳ ಈ ಸಂಕಲನ ಕನ್ನಡದ ಬರವಣಿಗೆಗೆ ಅರ್ಥಪೂರ್ಣವಾದ ಹೊಸ ದಿಕ್ಕನ್ನು ತೋರಿಸಿಕೊಟ್ಟ ಸಾಂಸ್ಕೃತಿಕ ಮಹತ್ವವನ್ನು ಹೊಂದಿದೆ. ತನ್ನೆಲ್ಲಾ ನೋವು ಹಾಗೂ ಚಾರಿತ್ರಿಕವಾದ ದೀರ್ಘಕಾಲದ ಸುಲಿಗೆಯ ಪೂರ್ಣ ಕಥನವನ್ನು ಥಟ್ಟನೆ ವ್ಯವಸ್ಥೆಯ ಮುಖಕ್ಕೆ ಒಡ್ಡಿ ಹೇಳುವ ರೊಚ್ಚು ಮತ್ತು ಎದೆಗಾರಿಕೆಯ ಸಂಕೇತವಾಗಿ ಈ ಸಂಕಲನದ ಶೀರ್ಷಿಕೆ ಕಾಣಿಸಿಕೊಂಡಿದೆ."[೨]

ಈ ಕವನ ಸಂಕಲನದ ಕವನಗಳು ಜನತೆಯ ಮಧ್ಯದಿಂದಲೇ ಎದ್ದ ಸೂಕ್ಷ್ಮ ಪ್ರಜ್ಞೆಯ, ಅತೀವ ಯಾತನೆಯ, ಭಯಂಕರ ಕೋಪದ, ಅಚಲ ವಿಶ್ವಾಸದ, ಅಭಿಮಾನದ, ಸ್ವಾಭಿಮಾನದ ಸಂಕೇತವಾಗಿ ಸಹಜವಾಗಿ ಮೂಡಿಬಂದಿವೆ. ಈ ಕವನ ಸಂಕಲನ ಆರ್ಥಿಕ, ಸಾಮಾಜಿಕ ರಾಜಕೀಯವಾಗಿ ದೌರ್ಜನ್ಯಕ್ಕೊಳಗಾದವರ ಬಗ್ಗೆ ಬಂದ ಮೊದಲ ದನಿ ಎನ್ನಬಹುದು. ಇಲ್ಲಿ ಅದುಮಿಟ್ಟಿದ್ದ ರೋಷ, ಕೆಚ್ಚು, ಆಕ್ರೋಶ, ಹೆಚ್ಚು ವ್ಯಕ್ತವಾಗಿದೆ. ಆಂತರಿಕ ಒತ್ತಡ ಮತ್ತು ಮಾನಸಿಕ ಪ್ರಕ್ರಿಯೆಗಳ ಸೂಕ್ಷ್ಮಗಳನ್ನು ಹೊಲೆಮಾದಿಗರ ಹಾಡುವಿನಲ್ಲಿ ಕಾಣಬಹುದು. ಮಾನವೀಯ ಕ್ರೌರ್ಯಗಳ ಆಳದಲ್ಲಿ ಹುದುಗಿ ಹೋಗಿರುವ ಮಾನವತೆಯ ಅನೇಕ ವಿವರಗಳು ಜೀವಂತವಾಗಿ ಪಡಿಮಿಡಿಯುತ್ತಿರುವ ಈ ಸಂಕಲನದ ಕವಿತೆಗಳು ತಾತ್ಕಾಲೀನ ಸಾಂಸ್ಕೃತಿಕ ಸ್ಥಗಿತ ಸಂದರ್ಭವನ್ನು ಪಾರು ಮಾಡುವ ಚೈತನ್ಯವನ್ನು ಪಡೆದುಕೊಂಡಿದೆ. ವರ್ಗಪ್ರಜ್ಞೆ ಇಲ್ಲಿನ ಎಲ್ಲಾ ಕವಿತೆಗಳಲ್ಲೂ ಮುಡಿದೆ. ಒಳ್ಳೆಯ ಮನುಷ್ಯನಾಗಿ ಈ ನೆಲದ ಮೇಲೆ ಬದುಕಬೇಕೆಂಬ ಆರೋಗ್ಯಕರ ದೃಷ್ಟಿಯು ಇಲ್ಲಿದೆ.

---

[೧] ಹೆಚ್ ದಂಡಪ್ಪ (ಸಂ) : ಬಡವರ ನಗುವಿನ ಶಕ್ತಿ : ಪು.ಸಂ. ೧೦೩.
[೨] ಅರವಿಂದ ಮಾಲಗತ್ತಿ (ಸಂ) : ದಲಿತ ಮಾರ್ಗ : ಪು.ಸಂ. ೨೭೭.

'ಸಾವಿರಾರು ನದಿಗಳು' ಸಿದ್ದಲಿಂಗಯ್ಯರವರ ಎರಡನೇ ಕವನ ಸಂಕಲನ. ಇದು ೧೯೭೯ರಲ್ಲಿ ಪ್ರಕಟವಾಯಿತು. ಈ ಸಂಕಲನದಲ್ಲಿರುವ ಕವನಗಳು ಹೊಲೆಮಾದಿಗರ ಹಾಡು ಕವನಗಳಿಗಿಂತ ಸ್ವಲ್ಪ ಭಿನ್ನವಾಗಿ ಕಾವ್ಯಮಯವಾಗಿರುವುದು ಕಂಡುಬರುತ್ತದೆ. ಈ ಸಂಕಲನದ ಹೆಸರಿನ ಪದ್ಯವು ಇಡೀ ಕವನ ಸಂಕಲನದ ಅತ್ಯುತ್ತಮವಾದ ಕವನವಾಗಿದೆ. "ಬಹುಶಃ ಸಿದ್ದಲಿಂಗಯ್ಯನವರ ಪ್ರತಿಭೆ ಈ ಬಗೆಯ ಕವನಗಳಲ್ಲಿಯೇ ಹೆಚ್ಚು ಸಾರ್ಥಕತೆಯನ್ನು ಪಡೆಯುತ್ತದೇನೋ? ಸಾಮಾಜಿಕ ಬದಲಾವಣೆಯ ಬಗ್ಗೆ ಸ್ಪಷ್ಟ ತಾತ್ವಿಕ ನಿಲುವಿನಿಂದ ಹೊರಡುವ ಕವನದಲ್ಲಿ ಅಭಿವ್ಯಕ್ತಿ ಮತ್ತು ತಾತ್ವಿಕತೆಯ ನಡುವೆ ಸೃಜನಾತ್ಮಕ ಸಾಮರಸ್ಯವಿದೆ".[೧]

ಶೋಷಣೆ, ದೌರ್ಜನ್ಯ, ಅನ್ಯಾಯಗಳನ್ನು ತಡೆಯಲು ದಲಿತರು ಹೋರಾಟ ಮಾಡಬೇಕು. ಹೇಗೆಂದರೆ ಸಾವಿರಾರು ನದಿಗಳ ಶಕ್ತಿಯನ್ನು ಒಗ್ಗೂಡಿಸಿಕೊಂಡು ಈ ಅನ್ಯಾಯ, ಶೋಷಣೆ, ದೌರ್ಜನ್ಯಗಳನ್ನು ಖಂಡಿಸಬೇಕೆಂಬ ಆಶಯವನ್ನು ಸಾವಿರಾರು ನದಿಗಳು ಕವನ ಧ್ವನಿಸುತ್ತದೆ. ಈ ಸಂಕಲನದ 'ಚೋಮನ ಮಕ್ಕಳು', 'ನಿನ್ನ ಮಗನ ಕೊಂದರು', 'ಕಂಡೆ ನನ್ನವಳ ಒಂದು ದಿವಸ', 'ಬಿದ್ದಾವು ಮನೆಗಳು', 'ಬೆಲ್ಜಿಯ ಹಾಡು', ಕವನಗಳು ಬಂಡಾಯ ಕಾವ್ಯದಲ್ಲಿ ಶೋಷಣೆಯನ್ನು ವ್ಯಕ್ತಪಡಿಸುವ ಹಾಗೆ ರಚಿತವಾಗಿವೆ.

'ದೊಡ್ಡ ಗೌಡರ ಬಾಗಿಲಿಗೆ
ನಮ್ಮ ಮೂಳೆಯ ತ್ವಾರಣ
ನಮ್ಮ ಜನಗಳ ಕಾಲುಕಯ್ಯ
ಕಂಬ ಅವರ ಹಟ್ಟಿಗೆ'
"ಸಾಹುಕಾರರ ಬಲೆಗೆ ಪಾರಿವಾಳಗಳಂತೆ
ಸಿಕ್ಕಿ ಸುಸ್ತಾದಂತೆ ನನ್ನ ಜನರು
ಎಲ್ಲಾರು ತಲೆ ಎತ್ತಿ ಬಲೆಯೊಡನೆ ಹಾರಿದರು

ಎದುರಾದ ಮೋಡಗಳ ಸೀಳಿಕೊಂಡು 'ಈ ಸಾಲುಗಳನ್ನು ನೋಡಿದಾಗ ಸಿದ್ದಲಿಂಗಯ್ಯರವರ ಕಾವ್ಯ 'ಹೊಲೆಮಾದಿಗರ ಹಾಡು' ಕವನಗಳಿಗಿಂತ ಭಿನ್ನ ಎಂಬುದು ಅರ್ಥವಾಗುತ್ತದೆ. ಇಲ್ಲಿ ಬಂಡಾಯದ ನಿಲುವುಗಳು ವ್ಯಕ್ತವಾಗುತ್ತವೆ.

---

[೧] ಅರವಿಂದ ಮಾಲಗತ್ತಿ (ಸಂ) : ದಲಿತ ಮಾರ್ಗ : ಪು.ಸಂ. ೨೭೯.

ಸಿದ್ದಲಿಂಗಯ್ಯನವರು ಎಲ್ಲಾ ಜಾತಿ ಮತಗಳಲ್ಲೂ ಶೋಷಿತರು, ಬಡವರನ್ನು ಗುರುತಿಸಿ ಅವರ ನೋವನ್ನು ದಲಿತ ಸಂವೇದನಾ ಶೀಲವಾಗಿ ನೋಡುವ ಜನಪರ ಕವಿಯಾಗಿದ್ದಾರೆ.

"ದೊಡ್ಡ ಗೌಡರ ಬಾಗಿಲಿಗೆ .... ಕಂಬ ಅವರ ಹಟ್ಟಿಗೆ" ಕವನದ ಸಾಲುಗಳಲ್ಲಿ "ಬಸವಣ್ಣನವರ ಎನ್ನಕಾಲೇ ಕಂಬ ಎಂಬ ಮಾತುಗಳ ಅರ್ಥವನ್ನು ಬಳಸಿಕೊಂಡು ದಲಿತನ ಕರುಣಾಜನಕ ಸ್ಥಿತಿಯನ್ನು ಸಂವೇದಿಸುತ್ತದೆ. 'ಕಂಡೆ ನನ್ನವಳ ಒಂದು ದಿವಸ' ಕವಿತೆಯಲ್ಲಿ ಅತ್ಯಾಚಾರದ ಚಿತ್ರ ಬೆಳೆಯುತ್ತಿದ್ದಂತೆ ಅದರ ಜೊತೆಗೆ ಪ್ರತಿಭಟನೆ ಕೂಡ ತನಗೆ ತಾನೇ ತಲೆ ಎತ್ತುತ್ತಾ ಹೋಗುತ್ತದೆ."[೧]

"ಯಾವ ಪಾಪವ ಮಾಡಲಿಲ್ಲ
ಯಾರ ತಲೆಯನು ಹೊಡೆಯಲಿಲ್ಲ
ಕರಗಿ ನಮ್ಮಯ ಬಾಳ ಕತ್ತಲು
ಕಾಣಲಾರದೆ ಹಗಲನ"

(ಬೆಲ್ಜಿಯ ಹಾಡು ಪು.ಸಂ. ೭)

ಈ ಕವನದ ಸಾಲುಗಳಲ್ಲಿ ನೊಂದ ಕವಿಮನಸ್ಸು ಯಾವ ರೀತಿ ಹಂಬಲಿಸುತ್ತದೆ ಎನ್ನುವುದಕ್ಕೆ ಸಾಕ್ಷಿಯಾಗಿದೆ. ಸಿದ್ದಲಿಂಗಯ್ಯನವರ ಕಾವ್ಯದ ಯಾವ ತುಣುಕಾದರೂ ಒಂದು ಜೀವ ಕಣವಾಗಿ ಹಾಗೆ ಇಡೀ ಪದ್ಯದಿಂದ ಅದನ್ನು ಬೇರ್ಪಡಿಸಿ ಓದಿದಾಗಲೂ ಸ್ವಂತಿಕೆಯಿಂದ ಮಿಡಿಯುತ್ತದೆ. ತಟ್ಟನೆ ಗೋಚರವಾಗುವಂತಹ ತಿಳಿಯದ ಭಾಷೆಯಿಂದ ಕವಿ ತನ್ನ ಉದ್ದೇಶಿತ ಗುರಿಯನ್ನು ಸೂಕ್ಷ್ಮವಾಗಿ ತಲುಪುತ್ತಾರೆ. ಕವಿ ಸಮಸ್ತ ಜನರೊಂದಿಗೆ ಕಲೆತು ಮಾತನಾಡಿಸುವ ಆತ್ಮೀಯತೆಯನ್ನು ಅಂತರಂಗದ ಭಾವನೆಗಳನ್ನು ಪ್ರಚೋದಿಸುವ ವಿಶಿಷ್ಟ ದನಿಯನ್ನು ಅತ್ಯಂತ ಸಮರ್ಪಕವಾಗಿ ನಿರ್ವಹಿಸಿಕೊಡುತ್ತಾರೆ. ಸಿದ್ಧಲಿಂಗಯ್ಯನವರ ಕವಿತೆಗಳ ದೃಷ್ಟಿ ಮತ್ತು ಸೃಷ್ಟಿ ಸ್ವಾತಂತ್ರ್ಯ ಸಾಮಾಜಿಕ ಜವಾಬ್ದಾರಿಯ ವಿವೇಕದಿಂದ ಹೊರತಾದದ್ದಲ್ಲ. ಆದ್ದರಿಂದ ಸಮಾಜವನ್ನು ಕುರಿತಾದ ಸಿದ್ಧಲಿಂಗಯ್ಯನವರ ತಾತ್ವಿಕ ನೆಲೆಗಳು ಸಾಮಾಜಿಕ ಬದಲಾವಣೆಯನ್ನು ಬಯಸುವ ತೀವ್ರವಾದ ತುಡಿತದೊಂದಿಗೆ ಸಮಸ್ಯೆಗಳಿಗೆ ಎದುರುವಾದಿಸುತ್ತವೆ. ಒಂದು

[೧] ಹೆಚ್ ದಂಡಪ್ಪ (ಸಂ) : ಬಡವರ ನಗುವಿನ ಶಕ್ತಿ : ಪು.ಸಂ. ೧೭೦.

ರೀತಿಯಿಂದ ಈ ಕವಿ ತಮ್ಮ ತಾತ್ವಿಕ ನಿಲುವುಗಳನ್ನು ಪ್ರಜ್ಞಾಪೂರ್ವಕವಾಗಿಯೇ ಹೇರುವ ರೀತಿಯೂ ಇದೆಯೆನ್ನಬಹುದು.

ದಲಿತರನ್ನು ಜೀವಂತವಾಗಿ ಸುಡುವ ಅವರ ಆಸ್ತಿಪಾಸ್ತಿಗಳಿಗೆ ಹಾನಿಯನ್ನು ಉಂಟುಮಾಡುವ ಕ್ರೌರ್ಯತಮವಾದ ರಾಕ್ಷಸಿ ಕೃತ್ಯಗಳು ಹಿಂದೆಂತೋ ಅಂತೆಯೇ ಇಂದು ನಡೆಯುತ್ತಿರುವುದಕ್ಕೆ 'ಬೆಳ್ಜಿಯಹಾಡು' ಕವನ ಉತ್ತಮ ಉದಾಹರಣೆಯಾಗಿದೆ. ಅಮಾಯಕರೂ ನಿರಪರಾಧಿಗಳೂ ಆದ ದಲಿತರ ಬಾಳಿಗೆ ಹೊಂಬೆಳಕು ಎಂದಿಗೆ ಬರುತ್ತದೆ ಎಂಬುದು ಅರಿವಾಗುತ್ತದೆ.

'ಬೆಳ್ಜಿಯ ಹಾಡು' ಕವನದ ಮಾತುಗಳು "ದಲಿತರ ಚೆನ್ನಾಗಿ ಕಡೆದು ನಿಲ್ಲಿಸುತ್ತದೆ. ಶ್ರೀಮಂತರು ದಲಿತರನ್ನು ಕೇವಲ ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಅಷ್ಟೆ ಶೋಷಿಸುವುದಿಲ್ಲ. ಲೈಂಗಿಕವಾಗಿಯೂ ಶೋಷಣೆ ಮಾಡುತ್ತಾರೆ. ಇದೇ ಕವನದ 'ಅವರ ಅಮಲಿನ ಗುಂಗಿನಲ್ಲಿ, ಕೂಲಿ ಹೆಣ್ಣಿನ ಕಣ್ಣೀರು' ಎನ್ನುವ ಸಾಲುಗಳು ಈ ಅಂಶವನ್ನು ಸ್ಪಷ್ಟಪಡಿಸುತ್ತವೆ."[೭]

ದಲಿತ ಭಾರತದ ಭಾವುಟದಲ್ಲಿ
ನಿಂತರು ರೈತರು ಕಾರ್ಮಿಕರು
ಬಂದವು ಹೂ ಬನಬನದಲ್ಲಿ
ಹಾರಿದೋ ಹಕ್ಕಿ ನೂರಾರು

(ದಲಿತರು ಬರುವರು ಪು.ಸಂ. ೧೦)

ಈ ಕವನದಲ್ಲಿ ಈ ಸಾಲುಗಳು ದಲಿತರ ಬೆಂಬಲಕ್ಕೆ ರೈತರು ಕಾರ್ಮಿಕರು ಸಿದ್ಧರಾಗುವ ದೃಶ್ಯ ಇಲ್ಲಿದೆ. ಈ ಕವನ ಮಾರ್ಕ್ಸ್‌ವಾದದ ಪ್ರಭಾವದಿಂದ ರಚಿತವಾಗಿರಬಹುದು. ಭಾರತದಂತಹ ಜಾತಿ ವ್ಯವಸ್ಥೆಯನ್ನು ಕಿತ್ತು ಹಾಕಲು ಸಾಧ್ಯವೇ ಇಲ್ಲ. ಈ ಜಾತಿ ವ್ಯವಸ್ಥೆಯನ್ನು ತೊಲಗಿಸಿದಾಗ ಮಾತ್ರ ವರ್ಗವ್ಯವಸ್ಥೆಯನ್ನು ತೊಲಗಿಸಲು ಸಾಧ್ಯ. ರಾಜಕೀಯವಾಗಿ ಅಥವಾ ಸಾಮಾಜಿಕವಾಗಿ ಮೇಲ್ಪರ್ಜೆಯಲ್ಲಿರುವವರು ಹೇಗಾದರು ಸುಖವಾಗಿಯೇ ಬದುಕುತ್ತಾರೆ. ಅವರು ತಮ್ಮ ಬಾಳನ್ನು ತಾವು ಕಂಡುಕೊಳ್ಳಬಲ್ಲರು. ಅದಕ್ಕೆ ಬೇಕಾದ ವ್ಯವಸ್ಥೆಯನ್ನು ಅವರೇ ಸೃಷ್ಟಿಸಿಕೊಂಡಿದ್ದಾರೆ. ಆದರೆ

ಇವೆರಡೂ ಕ್ಷೇತ್ರಗಳಲ್ಲಿಯೂ ಕೀಳೆಂದು ಪರಿಗಣಿತರಾಗಿರುವ ದಲಿತರ ಯಾವ ದೆಸೆಯಿಂದಲೂ ಉನ್ನತಿಗೇರಲು ಸಾಧ್ಯವಾಗುತ್ತಿಲ್ಲ. ದಲಿತರನ್ನು ದಲಿತರನ್ನಾಗಿಯೇ ನೋಡಲಾಗುತ್ತಿದೆ. ಸ್ವಾತಂತ್ರ್ಯ ಬಂದು ಪ್ರಜಾಪ್ರಭುತ್ವ ನೆಲೆಯೂರಿದ್ದರೂ ಶೋಷಣೆ ನಡೆಯುತ್ತಲೇ ಇದೆ. ಆದ್ದರಿಂದ ಕವಿ ದಲಿತ ಸಂವೇದನಾ ಶೀಲರಾಗಿ ದಲಿತರಿಗೆ ರಾಜಕೀಯದ ಅಧಿಕಾರ ಕೊಡಿ ಎಂದು 'ದಲಿತರು ಬರುವರು' ಕವನದಲ್ಲಿ ತಮ್ಮ ಅನಿಸಿಕೆಯನ್ನು 'ದಲಿತರು ಬರುವರು ದಾರಿ ಬಿಡಿ. ದಲಿತರಿಗೆ ಕೈಗೆ ರಾಜ್ಯ ಕೊಡಿ' ಎನ್ನುವ ಮಾತಿನ ಮೂಲಕ ಮೇಲಿನ ಅಂಶವನ್ನು ವ್ಯಕ್ತಪಡಿಸಿದ್ದಾರೆ.

ದೇವರು ಗುರುಗಳ ತಿಪ್ಪೆಗೆ ತಳ್ಳಿ
ಮಂತ್ರಿ ಶಾಸಕರ ಮೋರಿಗೆ ನೂಕಿ
ತಾವೇ ಕಂಡ ಹೊಸ ದಾರಿಯಲ್ಲಿ
ಹೊಂಟರು ದಲಿತರು ಮೆರವಣಿಗೆ
ಉರಿಯುವ ಪಂಜು ಕೈಯಲ್ಲಿ
ಕ್ರಾಂತಿಯ ಕಿಡಿಗಳು ಕಣ್ಣುಗಳಲ್ಲಿ
ಸಿಡಿದರು ಕೆಂಡದ ಉಂಡೆಗಳು
ಕೋಟಿ ಕೋಟಿ ಕನಸುಗಳೊಂದಿಗೆ
ಹತ್ತಿ ಉರಿಯುವ ಮನಸುಗಳೊಂದಿಗೆ
ಗುಡುಗು ಮಿಂಚಿನ ಘೋಷಣೆಯಲ್ಲಿ
ಭೂಕಂಪನ ಭಾಷೆಗಳಲ್ಲಿ
ಬಂತೋ ದಲಿತರ ಮೆರವಣಿಗೆ

(ದಲಿತರು ಬರುವರು ದಾರಿ ಬಿಡಿ, ಪು.ಸಂ. ೧೦)

ಕೋಟಿ ಕೋಟಿ ಕನಸುಗಳನ್ನು ಕಾಣುವ ದಲಿತರು ಶೋಷಣೆಗೆ ದೌರ್ಜನ್ಯಕ್ಕೆ ಒಳಗಾಗಿದ್ದಾರೆ. ಅವರೆಲ್ಲರೂ ಬೆಳಕನ್ನು ನೀಡುವ ಮಿಂಚಿನಂತೆ ಮಾತುಳ್ಳವರಾಗಿದ್ದು ತಮ್ಮ ಭಾಷೆಯ ಮೂಲಕವೇ ತಮ್ಮ ತನವನ್ನು ಗುರುತಿಸಿಕೊಂಡು ಯಾರ ಹಂಗನ್ನು ಆಶ್ರಯಿಸದೆ ಬದುಕಲು ಇಚ್ಛೆ ಪಡುತ್ತಾರೆ.

---

೧ ಹೆಚ್ ದಂಡಪ್ಪ (ಸಂ) : ಬಡವರ ನಗುವಿನ ಶಕ್ತಿ : ಪು.ಸಂ. ೧೬೯.

ಹೀಗೆ ತಾವೇ ಸ್ವತಃ ಬದುಕನ್ನು ಸಾಗಿಸಲು ತೊಡಗಿದಾಗ ಯಾವುದೇ ರೀತಿಯ ಶೋಷಣೆ, ದೌರ್ಜನ್ಯ ಇವರ ಮೇಲೆ ನಡೆಯುವುದಿಲ್ಲ. ಯಾವ ದುಷ್ಟ ಶಕ್ತಿಗಳು ಇವರನ್ನು ಏನು ಮಾಡಲಾಗದು. ಇವರು ವಿದ್ಯಾವಂತರಾದರೆ ಈ ಸಮಾಜದ ಅವ್ಯವಸ್ಥೆಯನ್ನು ದುಷ್ಟಶಕ್ತಿಯನ್ನು ತಮ್ಮ ಕೆಂಡದಂತೆ ಕಣ್ಣಿನ ಮೂಲಕ ಸುಟ್ಟು ಹಾಕುತ್ತಾರೆ ಎಂಬ ಅಂಶ ಈ ಕವನದಲ್ಲಿ ಗೋಚರವಾಗುತ್ತದೆ. ಮೇಲಿನ ಕವನದ ಸಾಲುಗಳು "ದಲಿತರನ್ನು ಶೋಷಿಸುತ್ತಿರುವ ದುಷ್ಟ ಶಕ್ತಿಗಳನ್ನು ತಿಳಿಸುತ್ತಲೇ ದಲಿತರು ತಮ್ಮ ಸಮಸ್ಯೆಗಳ ನಿವಾರಣೆಗೆ ತಾವೇ ಮಾರ್ಗ ಹುಡುಕಿಕೊಳ್ಳಬೇಕಲ್ಲದೆ ಇನ್ನೊಬ್ಬರ ಹಂಗನ್ನು ಆಶ್ರಯಿಸಬಾರದು ಎನ್ನುವ ಹೆಚ್ಚು ಸತ್ಯ ನಿಷ್ಟವಾದ ಧೋರಣೆಯನ್ನು ವ್ಯಕ್ತಪಡಿಸುತ್ತದೆ."[೧] ಈ ಹಿನ್ನೆಲೆಯಲ್ಲಿ ಸಿದ್ಧಲಿಂಗಯ್ಯನವರು ದಲಿತರು ಈ ಸಮಾಜದಲ್ಲಿ ಮೇಲೆ ಬರಲು ಅವಕಾಶ ಕೊಡಿ ಎಂದು ಕೇಳುತ್ತಿದ್ದಾರೆ.

'ಕಂಡೆ ನನ್ನವಳ ಒಂದು ದಿವಸ' ಕವನದ ಸಾಲುಗಳು

ಅವಳ ಬಾಳಿನ ಬಳ್ಳಿ ಉಕ್ಕಿನಪ್ಪುಗೆಯಲ್ಲಿ
ರಕ್ತವನ್ನು ಬಸಿ ಬಸಿದು ನೆಲಕುರುಳಿತು
ಕತ್ತಲೆಯ ರಾಕ್ಷಸರು ಪಣಕಟ್ಟಿ ಹಾಡಿದರು
ಕಣ್ಣಿನುಂಡೆಗಳಲ್ಲಿ ಗೋಲಿಯಾಟ
ಕಂಡೆ ನನ್ನವಳ ಒಂದು ದಿವಸ
ಕಂಡೆ ನನ್ನನ್ನು ನಾನೆ ಕನ್ನಡಿಯಲ್ಲಿ
ಭಾರತ ದೇಶದ ಬೀದಿಯ ತುಂಬಾ
ಬೆಳ್ಳಿ ಬಾಕುಗಳ ಮೆರವಣಿಗೆ
ರಕ್ತದ ಕೊಳದಿಂದೀಚೆಗೆ ತೆಗೆದ
ಚಿಂದಿ ಬಟ್ಟೆಗಳ ಮೆರವಣಿಗೆ'

ಈ ಸಾಲುಗಳು ದಲಿತರ ಬದುಕಿನ ಬಳ್ಳಿ ಹೇಗೆ ಶ್ರೀಮಂತರ, ಮೇಲ್ವರ್ಗದವರ ಉಕ್ಕಿನಪ್ಪುಗೆಯಲ್ಲಿ ಸಿಕ್ಕಿ ತತ್ತರಿಸುತ್ತಿರುವುದನ್ನು ಧ್ವನಿಸುತ್ತದೆ. ಈ ದೇಶದಲ್ಲಿ ಎಲ್ಲಾ ಬಗೆಯ ಅನ್ಯಾಯಗಳಿಗೂ ತುತ್ತಾಗುವವರು ದಲಿತರೆ ಎಂಬುದನ್ನು ಈ ಕವನ ಸಾದರಪಡಿಸುತ್ತದೆ. ದಲಿತರು ತಮಗಾಗುತ್ತಿರುವ ಶೋಷಣೆಯನ್ನು ಪ್ರತಿಭಟಿಸಲು ಜಾಗೃತರಾಗುತ್ತಿರುವ ದಲಿತರನ್ನು

---

[೧] ಹೆಚ್ ದಂಡಪ್ಪ (ಸಂ) : ಬಡವರ ನಗುವಿನ ಶಕ್ತಿ : ಪು.ಸಂ. ೧೮೯.

ಕುರಿತು ಈ ಕವನ ಹೇಳುತ್ತದೆ. 'ಎದ್ದು ನಿಂತಿವೆ ಯಾಕೋ ಮರಮಂಜುಬಂಡೆಗಳು' ಎನ್ನುವ ಮಾತಿನಲ್ಲೂ ಆವರೆವಿಗೂ ಮೂಕ ವ್ಯಕ್ತಿಗಳಾಗಿ ಅನುಭವಿಸಬಾರದ್ದನ್ನೆಲ್ಲಾ ಅನುಭವಿಸಿದ ಅಮಾಯಕರು ಎಚ್ಚರಗೊಂಡಿರುವುದನ್ನು ತಿಳಿಸಲಾಗುತ್ತಿದೆ. ಭಾರತದಲ್ಲಿ ಕೊಳಚಗೇರಿಗಳಲ್ಲಿ ಚಿಂದಿ ಬಟ್ಟೆಗಳನ್ನುಟ್ಟು ಬದುಕುತ್ತಿರುವವರು ಮೇಲ್ವರ್ಗದವರಂತೆ ಬದುಕಲು ಅವಕಾಶ ಮಾಡಿಕೊಡಬೇಕು. ಒಟ್ಟಿನಲ್ಲಿ ಸಮಾನತೆಯನ್ನು ತರಬೇಕೆನ್ನುವುದು ಕವಿಯ ಉದ್ದೇಶವಾಗಿದೆ ಈ ಕವನದ ಮೇಲೆ ಮಾರ್ಕ್ಸ್‌ವಾದದ ಪ್ರಭಾವವು ಸಾಕಷ್ಟಾಗಿದೆ.

'ಚೋಮನ ಮಕ್ಕಳ ಹಾಡು' ಕವನದಲ್ಲಿ ಚೋಮನನ್ನು ದಲಿತ ಜನಾಂಗದ ಪ್ರತೀಕವಾಗಿ ಬಳಸಿಕೊಂಡು ದಲಿತರನ್ನು ಚೋಮನ ಮಕ್ಕಳೆಂದು ಕರೆದು ಅವರ ವಾಸ್ತವ ಚಿತ್ರಣವನ್ನು ವಸ್ತು ನಿಷ್ಟವಾಗಿ ಬಿತ್ತರಿಸುತ್ತಾರೆ.

> 'ಕಣ್ಣಿನ ಒಳಗೆ ನೋವಿರುವವರು
> ಮಣ್ಣಿನ ಒಳಗೆ ಮುಖವಿಟ್ಟವರು
> ತಾಯಿಯನಗಲಿದ ಮಕ್ಕಳು ನಾವು
> ನೋವನಪ್ಪಿದವರು
> ದಣಿಗಳ ಹಬ್ಬದ ಊಟಕ್ಕಾಗಿ
> ಖಂಡವ ಕಿತ್ತು ಕೊಟ್ಟುವರು
> ನೆಲದಾಧಾರ ತಪ್ಪಿದ ಜನರು
> ಮುಗಿಲಿನ ಆ ಸರೆ ಸಿಗದವರು'

ಈ ಸಾಲುಗಳನ್ನು ಚೋಮನ ಮಕ್ಕಳ ಬಾಯಿಂದ ಹಾಡಿಸುವಾಗ ಕವಿ ದಲಿತರ ಸ್ಥಿತಿಗಳನ್ನು ಅವರ ಎಲ್ಲಾ ಬಗೆಯ ನೋವುಗಳೊಡನೆ ಸಮರ್ಥವಾಗಿ ಸ್ವಚ್ಛಗನ್ನಡಿಯಂತೆ ಕನ್ನಡಿಸಿದ್ದಾರೆ. ಮೇಲ್ವರ್ಗದವರ ಮನೆಯಲ್ಲಿ ದಲಿತರು ತಮ್ಮ ರಕ್ತವನ್ನೇ ಬಸಿದು ಅವರ ಮನೆಯ ಹೂದೋಟವನ್ನು ಕೆಂಪಗೆ ಮಾಡಿದ್ದಾರೆ ಎನ್ನುವಲ್ಲಿ ದಲಿತರ ಶ್ರಮದ ಅರಿವನ್ನು ಸಿದ್ಧಲಿಂಗಯ್ಯನವರು ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದ್ದಾರೆ. ತಮ್ಮ ಯಜಮಾನನ ಹಬ್ಬದ ಊಟಕ್ಕಾಗಿ ತಮ್ಮ ಮಾಂಸ ಖಂಡವನ್ನೇ ಕೊಟ್ಟು ನೆಲದಲ್ಲಿ ಆಧಾರ ತಪ್ಪಿ ಅಂದರೆ ಈ ಭೂಮಿಯ ಮೇಲೆ ದಲಿತರು ವಾಸಮಾಡುವುದು ಕಷ್ಟ ಎಂಬುದನ್ನು ವ್ಯಕ್ತಪಡಿಸುತ್ತದೆ. ಭೂಮಿ ತಾಯಿಗೆ ಇವರು ಮಲ ಮಕ್ಕಳು, ಭೂಮಿ ಯಾರದ್ದೋ ಅಲ್ಲಿ ಹೋಗಿ ಇವರು ತಮ್ಮ ರಕ್ತ ಮಾಂಸ ಖಂಡಗಳನ್ನು

ಒತ್ತೆ ಇಟ್ಟು ದುಡಿಯುತ್ತಾರೆ.ಆದರೆ ಇವರಿಗೆ ತಿನ್ನಲು ಏನು ಸಿಗುವುದಿಲ್ಲ. ಇಲ್ಲಿ ಸಿದ್ದಲಿಂಗಯ್ಯನವರು ಶ್ರೀಮಂತ ವರ್ಗದಲ್ಲಿ ದಲಿತರು ಯಾವ ರೀತಿ ತುಳಿತಕ್ಕೆ ಒಳಗಾಗುತ್ತಾರೆ ಎಂಬುದನ್ನು ಈ ಕವನದಲ್ಲಿ ಕಟ್ಟಿಕೊಟ್ಟಿದ್ದಾರೆ.

'ಸಾವಿರಾರು ನದಿಗಳು' ಸಂಕಲನದ ಮುಖ್ಯ ಮತ್ತು ಅತ್ಯಂತ ಪರಿಣಾಮಕಾರಿಯಾದ ಕವನ 'ಸಾವಿರಾರು ನದಿಗಳು' ಈ ಪದ್ಯವನ್ನು ಮುಖ್ಯವಾಗಿಟ್ಟುಕೊಂಡು ಸಾವಿರಾರು ನದಿಗಳು ಸಂಕಲನದಲ್ಲಿ ಹೋರಾಟದ ವ್ಯಾಪ್ತಿ ಹಿಗ್ಗಿದೆ. ಹೋರಾಟವೆನ್ನುವುದು ಸಾಗರೋಪಾದಿಯಾದುದು ಎಂಬ ನೆಲೆಯೊಂದಿಗೆ ಅದಕ್ಕೆ ಸಾವಿರಾರು ನದಿಗಳು ಸೇರಬೇಕೆನ್ನುವ ಆಶಯವು ಇಲ್ಲಿದೆ. ಏಕೆಂದರೆ ಹನಿ ಹನಿ ಗೂಡಿ ಹಳ್ಳ, ಹಳ್ಳ ಗೂಡಿ ನದಿ, ನದಿಗಳು ಸೇರಿ ಸಮುದ್ರ"[೧] ಹೀಗೆ ಎಲ್ಲಾ ನದಿಗಳು ಸೇರಿ ಸಮುದ್ರವಾಗುವಂತೆ ಎಲ್ಲಾ ದಲಿತರು ಸೇರಿ ಈ ಸಮಾಜದ ವಿರುದ್ಧ ಸಾಂಘಿಕವಾದ ಹೋರಾಟ ನಡೆಸಬೇಕೆಂಬುದು ಈ ಕವನದ ಈ ಸಾಲುಗಳಿಂದ ವ್ಯಕ್ತವಾಗುತ್ತದೆ.

ಕಪ್ಪು ಮುಖ ಬೆಳ್ಳಿ ಗಡ್ಡ ಉರಿಯುತ್ತಿರುವ ಕಣ್ಣುಗಳು
ಹಗಲುರಾತ್ರಿಗಳನ್ನು ಸೀಳಿ ನಿದ್ದೆಯನ್ನು ಒದ್ದರು
ಕಂಬಳಿಗಳು ಕೊರಗಿದವು ಎದ್ದೇಳುವ ರೊಚ್ಚಿಗೆ
ಭೂಕಂಪನವಾಯಿತು ಅವರು ಕುಣಿದ ಹುಚ್ಚಿಗೆ
ಇರುವೆಯಂತೆ ಹರಿವ ಸಾಲು ಹುಲಿ ಸಿಂಹದ ದನಿಗಳು
ಧಿಕ್ಕಾರ ಧಿಕ್ಕಾರ ಅಸಮಾನತೆಗೆ
ಎಂದೆಂದಿಗೂ ಧಿಕ್ಕಾರ ಶ್ರೀಮಂತರ ಸೊಕ್ಕಿಗೆ
ಲಕ್ಷಾಂತರ ನಾಗರುಗಳು ಹುತ್ತ ಬಿಟ್ಟು ಬಂದಂತೆ
ಊರ ತುಂಬ ಹರಿದರು
ಪಾತಾಳಕ್ಕೆ ಇಳಿದರು
ಆಕಾಶಕ್ಕೆ ನೆಗೆದರು
ಬೀದಿಯಲ್ಲಿ ಗಲ್ಲಿಯಲ್ಲಿ,

[೧] ಹೆಚ್ ದಂಡಪ್ಪ (ಸಂ) : ಬಡವರ ನಗುವಿನ ಶಕ್ತಿ : ಪು.ಸಂ. ೧೮೨.

ಬೇಲಿ ಮೆಳೆಯ ಮರಗಳಲ್ಲಿ

ಯಜಮಾನರ ಹಟ್ಟಿಯಲ್ಲಿ ಧಣಿ ಕೂರುವ ಪಟ್ಟದಲ್ಲಿ

ಎಲ್ಲೆಲ್ಲೂ ನನ್ನ ಜನ ನೀರಿನಂತೆ ನಿಂತರು'.

ಕನವದಲ್ಲಿಯೇ ಬಹು ಮುಖ್ಯವಾದ ಈ ಸಾಲುಗಳಲ್ಲಿ ಅಸಮಾನತೆ ಮತ್ತು ಶ್ರೀಮಂತರ ವಿರುದ್ಧ ಜನ ನೀರಿನಂತೆ ನಿಂತಿರುವುದು ಕಂಡುಬರುತ್ತದೆ. ಕೇವಲ ಈ ಕವನದಲ್ಲಿ ಮಾತ್ರವಲ್ಲದೆ ಈ ಸಂಕಲನದ ಎಲ್ಲಾ ಕವನಗಳಲ್ಲಿಯು ಈ ಮನೋಭಾವ ಗೋಚರವಾಗುತ್ತದೆ.

"ಪ್ರಜಾಪ್ರಭುತ್ವ ರಾಷ್ಟ್ರದಲ್ಲಿರುವ ನಾವು ನಮ್ಮ ಸುತ್ತಮುತ್ತ ಹಗಲು ರಾತ್ರಿ ಕಾಣುವುದು, ಕಣ್ಣೀರ ಹೊಳೆಯ ನೋವಿಗೇನೂ ಈ ದೇಶದಲ್ಲಿ ಕೊರತೆಯಿಲ್ಲ. ನೊಂದ ಜೀವಕ್ಕೆ ಮೂಕ ಜನತೆಗೆ ದನಿ ಕೊಡುವ ಆಶಯವನ್ನು ಒಳಗೊಂಡ ಕೃತಿ 'ಸಾವಿರಾರು ನದಿಗಳು' ವಿಶಿಷ್ಟ ರೂಪವೊಂದನ್ನು ಪಡೆದು ಪ್ರಾರಂಭವಾಗುವ 'ಸಾವಿರಾರು ನದಿಗಳು' ಪದ್ಯ ಕೊನೆಯವರೆಗೂ ಅದೇ ಬಿಗಿ ಮತ್ತು ಲಯವನ್ನು ಉಳಿಸಿಕೊಂಡು ಸಾರ್ಥಕ ಕವನವೆನಿಸಿದೆ"[೧]

'ಬಿದ್ದಾವು ಮನೆಗು' ಕವನದಲ್ಲಿ ಹೇಗೆ ದಲಿತರು ತುಳಿತಕ್ಕೊಳಗಾಗಿದ್ದಾರೆ, ಶ್ರೀಮಂತರು ಅವರನ್ನು ಯಾವ ಮಟ್ಟದಲ್ಲಿ ಕಾಣುತ್ತಿದ್ದಾರೆ, ದಲಿತರ ನೋವುಗಳೇನು, ಅವರು ಅನುಭವಿಸುವ ಯಾತನಮಯ ಬದುಕು ಹೇಗಿರುತ್ತದೆ ಎಂಬುದನ್ನು ಈ ಕವನ ತಿಳಿಸುತ್ತದೆ.

'ಕರಾಳ ರಾಣಿಯ ಕತೆ'ಯ ಕವನವು ೧೯೭೫ರ ತುರ್ತು ಪರಿಸ್ಥಿತಿಯ ಕತೆಯನ್ನು ಹೇಳುತ್ತದೆ. ಇಲ್ಲಿ ಬಡವರ ಸಾವಿನ ಚಿತ್ರಣವನ್ನು ಸಿದ್ಧಲಿಂಗಯ್ಯನವರು ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದ್ದಾರೆ.

'ಕತ್ತೆ ಮತ್ತೆ ಧರ್ಮ' ಕವನವನ್ನು ಮಾಸ್ತಿಯವರ 'ಸಮಾದಿಸತ್ವ' ಕವಿತೆಯಿಂದ ಪ್ರಭಾವಿತರಾಗಿ ಸಿದ್ದಲಿಂಗಯ್ಯ ರಚಿಸಿದ್ದಾರೆ. ಆದರೆ ಇದು ಮಾಸ್ತಿಯವರ ಕವಿತೆಗಿಂತ ಭಿನ್ನವಾಗಿ ಹಲವು ವೈಶಿಷ್ಟ್ಯಗಳಿಂದ ನಿಲ್ಲುತ್ತದೆ. ಅಗಸಸಿದ್ಧಯ್ಯ ಮತ್ತು ಅವನ ಕತ್ತೆಯ ಸಂಬಂಧವನ್ನು ಹೇಳುವಾಗ ಕವಿ ಶ್ರೀ ಸಾಮಾನ್ಯನ ಬದುಕನ್ನು ರಂಗಿನ ಹಂಗಿಲ್ಲದೆ ಚಿತ್ರಿಸುತ್ತಾನೆ.

---

[೧] ಹೆಚ್ ದಂಡಪ್ಪ (ಸಂ) : ಬಡವರ ನಗುವಿನ ಶಕ್ತಿ : ಪು.ಸಂ. ೧೯೯.

ಕವಿ ಈ ಕವಿತೆಯ ಮೂಲಕ ಜನಗಳ ಮೂರ್ಖತೆಯನ್ನು ಧರ್ಮದ ಹಿನ್ನೆಲೆಯಲ್ಲಿ ಧರ್ಮವನ್ನು ಸೇರಿಸಿದ ಹಾಗೆ ವಿಡಂಭನೆ ಮಾಡಿದ್ದಾರೆ. ಕತೆಯೊಂದನ್ನು ಹೇಳುವುದರ ಮುಖಾಂತರ ವಾಸ್ತವ ಸ್ಥಿತಿಯನ್ನು ಈ ಕವನದಲ್ಲಿ ಪಡಿ ಮೂಡಿಸಿದ್ದಾರೆ.

'ಸಾವಿರಾರು ನದಿಗಳು' ಕವನ ಸಂಕಲನದಲ್ಲಿ ಖಂಡ ಕಾವ್ಯವಾಗಿರುವ 'ಅಲ್ಲೆ ಕುಂತವರೆ' ದೃಶ್ಯ ಚಿತ್ರಗಳನ್ನು ಕಟ್ಟಿಕೊಡುತ್ತದೆ. ಈ ಕವಿತೆಯಲ್ಲಿನ ಅನುಭವ 'ಜಗತ್ತು ಹಿಂಸೆಗೆ ಗುರಿಯಾದವರ ಸ್ಥಿತಿಯನ್ನು ಕಟ್ಟಿಕೊಡುತ್ತದೆ.

"ನಿಮ್ಮನ್ನು ಮುಂದ್ವರ್ಸಕೇನೆ ನಾವ್ ಹುಟ್ಟಿರೋದು
ಅಂತ ಅಗೆರ್ಸಿ ನನ್ನ ಮುಂದಲೆಗೆ ವದ್ರು"

ಎನ್ನುವ ಸಾಲುಗಳು ಒಂದು ಚಳುವಳಿಯು ಮಾಡಿಕೊಳ್ಳುವ ಆತ್ಮವಿಮರ್ಶೆಯ ಆಯಾಮವನ್ನು ಪಡೆದಿದೆ. ಈ ಕವಿತೆ ಶೋಷಣೆ ಮತ್ತು ಪ್ರತಿಭಟನೆಗಳ ಚಿತ್ರಣವನ್ನು ನೀಡುತ್ತದೆ.

ತೂಕ ತುಂಬಿದ ಟಗರು ನಾನು
ಕಾಲು ಯಿಂದಗಡೆ
ತೂಕ ವಿಲ್ಲದ ಟಗರು ನಾನು
ಕಣ್ಣು ನೆತ್ತೀಲಿ
ಕತ್ತಲೆಯಲ್ಲಿ ಬತ್ತಲೆಯಲ್ಲಿ
ನನ್ನ ಸಂಚಾರ
ಗುರುತು ಸಿಕ್ಕುತಿಲ್ಲದಲ್ಲೊ
ನನ್ನ ಸವಕಾರ –

ಈ ಸಾಲುಗಳು ವಿಚಿತ್ರವಾದರೂ ನಿಜವಾದ ದ್ವಂದ್ವವನ್ನು ಒಳಗೊಂಡಿದೆ. ಕಣ್ಣು ನೆತ್ತಿಗಳಲ್ಲಿ ತೂಕವಿಲ್ಲದ ಟಗರು ತನ್ನ ವಾಸ್ತವ ಸ್ಥಿತಿಯನ್ನು ಗ್ರಹಿಸುವ ಸಾಮರ್ಥ್ಯವನ್ನು ಹೊಂದಿರುವುದಿಲ್ಲ. ಆದರೆ ಅಂತಹವರ ನಡುವಿನಿಂದಲೇ ಬಂದ ಕವಿಗೆ ಅದನ್ನು ಗ್ರಹಿಸಬಲ್ಲ ಶಕ್ತಿಯಿದೆ. ಕವಿತೆಯ ಕೊನೆ ಭಾಗಗಳಲ್ಲಿ ಪ್ರಸ್ತುತ ಸನ್ನಿವೇಶದ ಅಸಂಗತ ಸ್ಥಿತಿಯನ್ನು

ಕಾವ್ಯಮಯವಾಗಿ ಭಯ ವಿಷಾದಗಳೊಂದಿಗೆ ರೂಪಿಸಲಾಗಿದೆ. ಇಲ್ಲಿನದು ಕೇವಲ ಶೋಷಣೆಯ ವಿರುದ್ಧವಾದ ಆಕ್ರೋಶವಲ್ಲ. ಮನುಷ್ಯ ಜೀವಿಯ ಅಸಹಾಯಕ ಸ್ಥಿತಿಯ ಬಗೆಗಿನ ವಿಷಾದ"[೧]

ಒಟ್ಟಾರೆಯಾಗಿ ಸಾವಿರಾರು ನದಿಗಳು ಕವನ ಸಂಕಲನವನ್ನು ಕುರಿತ ಹಾಗೆ ಇಲ್ಲಿನ "ಪದ್ಯಗಳ ನಡುವೆ ಕಾಣಿಸಿಕೊಳ್ಳುವ ಮಾತುಗಳು ದಲಿತರ ನೋವಿನ ನೂರು ಗುಳಿಗೆಗಳನ್ನು ಪ್ರಜಾಪ್ರಭುತ್ವದ ಹೆಸರಿನಲ್ಲಿ ಇಲ್ಲಿ ನಡೆಯುತ್ತಿರುವ ಸರ್ವಾಧಿಕಾರದ ದಬ್ಬಾಳಿಕೆಯನ್ನು, ಕ್ರೌರ್ಯಕ್ಕೆ ತುತ್ತಾದವರ ಸಂಕಟಗಳನ್ನು, ಹಿಂಸಾಚಾರದ ವಿಶ್ವ ರೂಪವನ್ನು ಮನಕ್ಕೆ ಮುಟ್ಟಿಸುತ್ತದೆ. ಅನಿಷ್ಟ ಬಂಧನದಿಂದ ಬಿಡುಗಡೆ ಪಡೆದುಕೊಳ್ಳುವ ಹುಮ್ಮಸ್ಸನ್ನು ಪ್ರಚೋದಿಸುತ್ತವೆ. ಹೋರಾಟದ ಕೆಚ್ಚನ್ನು ತುಂಬುತ್ತವೆ. ಅಸಂಗತ ಅಧಿಕಾರದೆದುರು ಎದೆ ಸೆಟಿಸಿ ನಿಲ್ಲುವ ಹೋರಾಟದ ಮುಖವಾಣಿಯಾಗುವ ಇಂಥ ರಚನೆಗಳು ಸ್ವಾಗತರ್ಹವಾಗಿವೆ."[೨]

ಒಟ್ಟಿನಲ್ಲಿ ಸಿದ್ಧಲಿಂಗಯ್ಯನವರ 'ಹೊಲೆಮಾದಿಗರ ಹಾಡು' ಸಂಕಲನದ ಕವನಗಳಿಗಿಂತ ಸ್ವಲ್ಪ ಭಿನ್ನವಾಗಿ ಸಾವಿರಾರು ನದಿಗಳು ಕವನಗಳು ಗೋಚರಿಸುತ್ತವೆ. ಇಲ್ಲಿ ಬಂಡಾಯದ ನಿಲುವು ಕಾಣಿಸಿಕೊಂಡಿರುವುದು ಗಮನಾರ್ಹವಾಗಿವೆ.

ಸಿದ್ಧಲಿಂಗಯ್ಯನವರ **'ಸಾವಿರಾರು ನದಿಗಳು'** ಸಂಕಲನದ ತರುವಾಯ **'ಕಪ್ಪು ಕಾಡಿನ ಹಾಡು'** ೧೯೮೫ರಲ್ಲಿ ಬಿಡುಗಡೆಯಾಗಿದೆ. ಒಂದು ರೀತಿಯಲ್ಲಿ ಇದು ಸಾವಿರಾರು ನದಿಗಳು ಸಂಕಲನದ ಮುಂದುವರಿದ ಕವನಗಳಂತೆ ಕಂಡುಬರುತ್ತದೆ. ಇದರಲ್ಲಿ ಎರಡು ಪ್ರೇಮ ಕವನಗಳು ಸೇರಿಕೊಂಡಿವೆ. "ಹಿಂದೆ ಕ್ರಾಂತಿ ಕನ್ಯೆಯನ್ನೇ ಪ್ರೇಮಿಸುತ್ತೇನೆ ಎಂದು ಆವೇಶದಿಂದ ಹೇಳಿಕೊಂಡಿದ್ದ ಕವಿ ಈಗ ವಾಸ್ತವ ನೆಲೆಗಟ್ಟಿನಲ್ಲಿ ಬದುಕನ್ನು ಆಸ್ವಾದಿಸುತ್ತಿರುವುದು ಕಂಡುಬರುತ್ತದೆ. ಕವಿಯ ಕಾವ್ಯ ಧೋರಣೆಯನ್ನು ಕನ್ನಡಿಸುವ 'ನನ್ನ ಕವನ' ಐತಿಹ್ಯವನ್ನು ಬಳಸಿಕೊಂಡು ಯಥಾಸ್ಥಿತಿಯನ್ನು ಹೇಳುವ 'ಬೆಂಗಳೂರಿನ ಹಾಡು', ಲೈಂಗಿಕ ತೃಷೆಯನ್ನಡಗಿಸಲು ಒಪ್ಪಲು ದಲಿತನನ್ನು ಕೊಗ್ಗೈಸುವ ರಾಣಿಯ ಪ್ರೇಮ, ಬದುಕಿಗೆ ನೇರವಾಗಿ

---

[೧] ಹೆಚ್ ದುಂಡಪ್ಪ (ಸಂ) : ಬಡವರ ನಗುವಿನ ಶಕ್ತಿ : ಪು.ಸಂ. ೨೧೫.
[೨] ಹೆಚ್ ದಂಡಪ್ಪ (ಸಂ) : ಬಡವರ ನಗುವಿನ ಶಕ್ತಿ : ಪು.ಸಂ. ೨೦೧.

ಸಂಬಂಧಪಟ್ಟ 'ಕಪ್ಪು ಕಾಡಿನ ಹಾಡು', 'ಭೂತನ ಕತೆ', 'ನಲವತ್ತೇಳರ ಸ್ವಾತಂತ್ರ್ಯ', 'ಸಂಪಿಗೆಯ ಮರದಲ್ಲಿ', 'ಕೊಳಗೇರಿಯ ಹಾಡು' ಮುಂತಾದ ಕವನಗಳು ಇಲ್ಲಿವೆ".[೧]

ಸಿದ್ಧಲಿಂಗಯ್ಯನವರ ಕಾವ್ಯದ ಅಭಿವ್ಯಕ್ತಿಯ ಬೆಳವಣಿಗೆಯು 'ಕಪ್ಪುಕಾಡಿನ ಹಾಡು' ಎಂಬ ಕವನ ಸಂಕಲನದಲ್ಲಿ ವ್ಯಕ್ತವಾಗಿದೆ. ಮೊದಲ ಎರಡು ಕವನ ಸಂಕಲನಗಳಲ್ಲಿ ನೇರವಾಗಿದ್ದ ಧ್ವನಿ ಸೂಚ್ಯವಾಗಿ ವಾಸ್ತವದ ಸಂಕೀರ್ಣತೆ, ರೋಷದ ಆಳದ ನೋವು, ಹತಾಶೆ, ನಿರಾಶೆ, ಆಸೆಗಳು ಸಾಂಕೇತಿಕವಾಗಿ ದಟ್ಟ ಅನುಭವಗಳಾಗಿ ನಾನಾ ಆಯಾಮಗಳಲ್ಲಿ ಗಾಢತೆ ಹೊಂದುತ್ತಾ ಮನಸ್ಸಿನ ಮೇಲು ಸ್ತರದಿಂದ ಅಂತರಂಗದ ಮೂಲ ಸೆಲೆಯನ್ನು ಕೆದಕುವ ಸಾಮರ್ಥ್ಯವನ್ನು ಇಲ್ಲಿಯ ಕೆಲವು ಕವನಗಳು ದುಡಿಸಿಕೊಂಡಿರುವುದು ಗೋಚರವಾಗುತ್ತದೆ. ಜೊತೆಗೆ ಇವರ ನೋವು ಆಕ್ರೋಶಗಳು ಬೇರೆಯಾದ ಸ್ತರದಲ್ಲಿ ಕೆಲಸ ಮಾಡಿ ಭಾಷೆ, ತಂತ್ರ, ವಸ್ತುಗಳು ಭಿನ್ನ ರೀತಿಯ ಅಭಿವ್ಯಕ್ತಿ ಪಡೆದಿವೆ.

ಈ ಸಂಕಲನದ ನನ್ನ ಕವನವನ್ನು ಹೊಲೆ ಮಾದಿಗರ ಹಾಡುವಿನ ಮಸಣದ ಚೆಲುವೆಗೆ ಹೋಲಿಸಿದಾಗ ಈ ಬದಲಾವಣೆ ಕಂಡುಬರುತ್ತದೆ.

"ತೆಂಗು ತಾರೆಗಳ ಸಂಗಮವು ಮುಗಿದು
ಮನಸಿತ್ತು ಮುಗಿಲಿನಲಿ".
ತುಂಬೆ ತೆಂಗುಗಳ ಅಂತರವು ಹತ್ತಿರವೆ
ಗುಡಿಯ ಗೋಪುರದೊಡನೆ
ಜೋಪಡಿಯ ಗರಿಗಳಿಗೆ
ನಂಟಾಗಲಿಲ್ಲ
ಸುಟ್ಟ ಹೆಣಗಳ ಸಾಲು ಮೆರವಣಿಗೆ
ಬಂದಾಗ ಪುಟ್ಟ-ಕಂದಮ್ಮಗಳ
ಚೀರಾಟಗಳ ನಡುವೆ
ನಿನ್ನ ಕಣ್ಣಿನ ಮಾತಿ ತಿಳಿಯಲಿಲ್ಲ

[೧] ಹೆಚ್ ದಂಡಪ್ಪ (ಸಂ) : ಬಡವರ ನಗುವಿನ ಶಕ್ತಿ : ಪು.ಸಂ. ೧೯೭.

ಈ ಸಾಲುಗಳಲ್ಲಿ ನೋವಿನ ತೀವ್ರತೆ ಸಂಕೇತವಾಗಿ ಬಂದಿದೆ. 'ಸುಟ್ಟಾವು ಬೆಳ್ಳಿಕಿರಣ' ಮತ್ತು 'ನಿನ್ನ ಕಣ್ಣಿನ ಮಾತು'ಗಳಲ್ಲಿ "ಸಾಫಲ್ಯತೆ ಇರುವುದು ನೋವಿನ ತೀವ್ರತೆ ಭಾಷೆಯಲ್ಲಿ ಪಕ್ಕಾಗಿ ಸಂಯಮದಲ್ಲಿ ಸಾಂಕೇತಿಕವಾಗಿ ಧ್ವನಿಸಿ, ಅಂತರಾಳದ ತುಡಿದ ಬಡಿದೆಬ್ಬಿಸುವಲ್ಲಿ ರೋಷದ ಕಾವು, ಅಸಾಧ್ಯ ಶಕ್ತಿ, ಕ್ಷಣದಲ್ಲಿ ಫಲಿಸುವ ಆಸೆಗಳ ಲೋಕ ಈ ಕವನ ಸಂಕಲನದಲ್ಲಿ ಮೊದಲು ಹೇಳಿದಂತೆ ನೋವಿನ ಅನುಭವದ ವಿವರ ತೀವ್ರತೆಗೆ ದಾರಿಮಾಡಿದೆಯಲ್ಲದೆ, ಇಲ್ಲಿ ಆಸೆ ನಿರಾಸೆಗಳ ಸಂಗಮವಿದೆ. ಬರಿಯ ಆಕ್ರೋಶ ಹುರುವಿನ ಲೋಕ ಇಲ್ಲಿ ಇಲ್ಲ."[೧]

'ಕಪ್ಪುಕಾಡಿನ ಹಾಡು' ಸಂಕಲನದ ಕವನಗಳು ವಾಸ್ತವಿಕ ಸಂಕೀರ್ಣತೆಯನ್ನು ಎತ್ತಿ ಹಿಡಿಯುತ್ತವೆ. 'ದೋಣಿಯ ಹಾಡು' ಕವನದಲ್ಲಿ

ಮರ ಮರದ ಮೇಲೆಲ್ಲಾ ನೋವು ಕೂಗುತ್ತಿತ್ತು

ಸತ್ತವರ ನಿಟ್ಟುಸಿರು ಪ್ರೇತವಾಗಿ

ಈ ಸಾಲುಗಳು ಸಾಮಾಜಿಕ ವ್ಯವಸ್ಥೆಯ ಸ್ತರದಲ್ಲಿ ಬೆಂದುಹೋದ ಆಸೆಗಳ ನೋವಿನ ಧ್ವನಿಯನ್ನು ವ್ಯಕ್ತಪಡಿಸುತ್ತವೆ.

ನಲವತ್ತೇಳರ ಸ್ವಾತಂತ್ರ್ಯ ಕವನ ವಾಚ್ಯವಾಗಿದ್ದು ಹಿಂದಿನ ಸಂಕಲನದ ಕವನಗಳ ಜಾಡನ್ನೆ ಎತ್ತಿ ಹಿಡಿದಿದೆ.

'ಈ ನೆಲದ ಹೂಬಳ್ಳಿ ಹಕ್ಕಿ ಮಕ್ಕಳಿಗೆಲ್ಲ

ಬದುಕ ಬೇಕೆಂದವರ ಬಗೆದರಲ್ಲೋ' –

ಎಂಬ ಸಾಲುಗಳಲ್ಲಿ ನೋವು ಸಂಕೇತಗಳ ಮೂಲಕ ಪಕ್ವತೆ ಹೊಂದಿದೆ.

'ಕಪ್ಪು ನಾಯಿ ಕೆಂಪಾಗುವುದಿಲ್ಲ
ಹೀಗೆನ್ನುವ ಮುದುಕಿಗೆ ಸಾವೇ ಇಲ್ಲವೇ
ಚೋಮನಿಗೆಂದು ನೆಲವೇ ಬೇಡವೇ'

---

[೧] ಹೆಚ್ ದಂಡಪ್ಪ (ಸಂ) : ಬಡವರ ನಗುವಿನ ಶಕ್ತಿ : ಪು.ಸಂ. ೨೦೭.

ಈ ಸಾಲುಗಳು ಕಾವ್ಯಮಯವಾಗಿ ಗಮನಾರ್ಹವಾಗಿವೆ. "ಹೆಂಡಕ್ಕೆ ಸಾವಿಲ್ಲವೋ ಜನರ ಎದೆಯಲ್ಲೂ ಹೆಪ್ಪು ಗಟ್ಟಿದ ನೋವು ಕೆರಳಿ ನಿಂತೋ' ಎನ್ನುವ ಸಾಲು ಗಮನ ಸೆಳೆಯುತ್ತದೆ. ಹೀಗೆ ಸಾಮಾನ್ಯನ ಹಾಡು ಸಹ ಕೆಲವು ಉತ್ತಮ ಸಾಲುಗಳನ್ನು ಹೊಂದಿದೆ. ರಾಜ, ಗೌಡ, ಜಮೀನ್ದಾರುಗಳ ಹಾಗೂ ಸ್ವತಂತ್ರ್ಯ ಭಾರತದಲ್ಲಿ ಜೀತಗಾರರಾಗಿ ಉಳಿದ ದಲಿತರ ನೋವನ್ನು ಅಭಿವ್ಯಕ್ತಿಸುತ್ತದೆ".[೧] ಇಡೀ ಕವನ ಸಂಕಲನದಲ್ಲಿ ವಿಷಾದ ವ್ಯಕ್ತವಾಗಿದೆ.

'ತಬರನ ಹಾಡು' ಕವನದಲ್ಲಿರುವ ಸಾಲುಗಳು :

ಅಧಿಕಾರದ ಮದ ಕುಣಿಯುತ್ತಿತ್ತು
ಕುರ್ಚಿ ಕುರ್ಚಿಯಲ್ಲಿ
ಬಡವನ ರಕ್ತ ಹರಿಯುತ್ತಿತ್ತು
ಬೀದಿ ಬೀದಿಯಲ್ಲಿ

ಈ ಸಾಲುಗಳು ರಾಜಕಾರಣಿಗಳ ಮೋಸವನ್ನು ಅವರ ಕುಟಿಲ ತಂತ್ರಗಳನ್ನು ಬಯಲಿಗೆಳೆಯುತ್ತ, ಶೋಷಿತರು ತಮ್ಮ ಮೇಲೆ ಆಗುತ್ತಿರುವ ದೌರ್ಜನ್ಯ, ಅನ್ಯಾಯ, ಶೋಷಣೆಗಳನ್ನು ತಡೆಯಲು ಸಿದ್ಧರಾಗಬೇಕು ಎಂಬ ಆಶಯವನ್ನು ವ್ಯಕ್ತಪಡಿಸುತ್ತದೆ. ಸಿದ್ಧಲಿಂಗಯ್ಯನವರು ಜನಪರ ಬಂಡಾಯ ಕವಿಯಾಗಿ ಈ ಸಮಾಜದ ರಾಜಕೀಯ ವ್ಯವಸ್ಥೆಯ ಚಿತ್ರಣವನ್ನು ಅದರಲ್ಲಿ ಭಾಗವಹಿಸುವ ಜನರನ್ನು ಕುರಿತು ತಮ್ಮ ಟೀಕಾಪ್ರಹರ ನಡೆಸಿದ್ದಾರೆ.

'ಸಂಪಿಗೆಯ ಮರದಲ್ಲಿ', ಕವನದಲ್ಲಿ ಶೋಷಿತರ, ಬಡವರ ಪರವಾದ ಚಿಂತನೆಗಳು, ಬಂಡಾಯದ ನಿಲುವುಗಳು ವ್ಯಕ್ತವಾಗಿದೆ.

ಕೊಳಗೇರಿಯ ಹಾಡು ಕವನದಲ್ಲಿನ
"ಬಡವರ ಜೋಪಡಿ ನೆಲಸಮವಾದ
ನೋವಿನ ಕಥೆ ಕೇಳು
ದುಡಿಯುವ ಜನಗಳ ಪ್ರಾಣವು ಹೋದ

---

[೧] ಹೆಚ್ ದಂಡಪ್ಪ (ಸಂ) : ಬಡವರ ನಗುವಿನ ಶಕ್ತಿ : ಪು.ಸಂ. ೨೦೯.

ಗೋಳಿನ ಕಥೆ ಕೇಳಿ – ಇಲ್ಲಿ ನಗರದ ಕೊಳಚೆಗೇರಿಯ ಪರಿಸ್ಥಿತಿಯನ್ನು ಒಂದು ಕಥೆಯ ರೂಪ ಕಟ್ಟಿ ಆ ಕೊಳಚೆಗೇರಿಗಳ ಜನಗಳ ಸ್ಥಿತಿಯನ್ನು, ಇಲ್ಲಿ ನಡೆಯುವ ಸಾಮಾಜಿಕ ದೌರ್ಜನ್ಯವನ್ನು ಈ ಕವಿತೆ ಸಾದರಪಡಿಸುತ್ತದೆ.

ಕಪ್ಪು ಕಾಡಿನ ಹಾಡು ಕವನದ
"ಈ ಊರ ಗುಡಿ ಗೋಪುರಗಳಿಗೆ ಬೆಂಕಿ ಹಚ್ಚಿ
ನನ್ನ ಸುಟ್ಟಂತೆ ಇವರನ್ನೂ ಸುಡಬೇಕು
ಉಳ್ಳವರ ಅಟ್ಟಹಾಸಕ್ಕೆ ಚಟ್ಟ ಕಟ್ಟಿ
ಸುಡುಗಾಡಿನಲ್ಲಿವರ ನೆಡಬೇಕು."

ಈ ಸಾಲುಗಳಲ್ಲಿ ಶೋಷಣೆಗೊಳಪಟ್ಟವರು ತಮ್ಮ ಮೇಲೆ ದೌರ್ಜನ್ಯವೆಸಗಿದ ಸಮಾಜ ರಾಜಕೀಯ, ಆರ್ಥಿಕ ವ್ಯವಸ್ಥೆ ಮುಂತಾದವುಗಳ ಬಗ್ಗೆ ಬೇಸತ್ತು ತಮ್ಮ ಮನದ ನೋವನ್ನು ಶಾಪವಾಗಿ ಹಾಕಿ ಕಾಡಿನ ಕಡೆಗೆ ಹೋಗುತ್ತಾರೆ ಎಂಬ ವಿಷಯ ಗೋಚರವಾಗುತ್ತದೆ. ದಲಿತ ಜಗತ್ತಿನ ಅಜ್ಞಾನ, ಅಸಹಾಯಕತೆಯನ್ನು ಮತ್ತು ಉಳ್ಳವರ ಅಹಂಕಾರ ಬಿಗುಮಾನವನ್ನು ಈ ಕವನ ಸಂಕಲನದ ಕೆಲವು ಪದ್ಯಗಳು ಸೂಕ್ಷ್ಮವಾಗಿ ವ್ಯಕ್ತಪಡಿಸುತ್ತವೆ. ಹೀಗೆ ಸಿದ್ಧಲಿಂಗಯ್ಯನವರು ದಲಿತರೊಳಗಿನ ಕವಿಯಾಗಿ, ಅನುಭವದ ಕವಿಯಾಗಿ, ಜನಪರ ಕವಿಯಾಗಿ ಬಂಡಾಯ ಕವಿಯಾಗಿ ಮೂರು ಕವನ ಸಂಕಲನಗಳನ್ನು ಕನ್ನಡ ಕಾವ್ಯ ಪ್ರಪಂಚಕ್ಕೆ ನೀಡಿದ್ದಾರೆ.

ಸಿದ್ಧಲಿಂಗಯ್ಯನವರು ಮೂರು ಕವನ ಸಂಕಲನಗಳ ಜೊತೆಗೆ ಇತ್ತೀಚಿನ ಕವಿತೆಗಳನ್ನು ಒಟ್ಟಿಗೆ ಸೇರಿಸಿ ಹಳೇ ಹೊಸ ಕವಿತೆಗಳ 'ಮೆರವಣಿಗೆ'ಯನ್ನು ಹೊರತಂದಿದ್ದಾರೆ. ಇತ್ತೀಚೆಗೆ ಪ್ರಕಟಗೊಂಡಿರುವ ಇಪ್ಪತ್ತೇಳು ಹೊಸ ಕವನಗಳನ್ನು ಗಮನಿಸಿದಾಗ ಕವಿಯ ಪ್ರಭುದ್ಧತೆ ಪರಿಣಾಮಕಾರಿಯಾಗಿ ಬೆಳವಣಿಗೆ ಹೊಂದಿರುವುದನ್ನು ಕಾಣಬಹುದು. ಘೋಷಣೆ, ಆಕ್ರೋಶ, ಶೋಕ, ವ್ಯಂಗ್ಯ ಇತ್ತೀಚಿನ ದಿನಗಳಲ್ಲಿ ಅನಗತ್ಯವೆಂಬಂತೆ ಭಾವಿಸಿ ವಯೋಮಾನಕ್ಕನುಗುಣವಾಗಿ ಶಾಂತ ರೀತಿಯಲ್ಲಿ ಕವನಗಳನ್ನು ರಚಿಸಿದ್ದಾರೆ. ಪ್ರಸ್ತುತ ದೇಶದಲ್ಲಿ ಕಾಡುತ್ತಿರುವ ಜಾಗತೀಕರಣ ವ್ಯವಸ್ಥೆ, ಜಾಹೀರಾತೀಕರಣ, ಪರಿಸರವಿನಾಶ, ರಾಜಕೀಯ ಅಸ್ಥಿರತೆ, ಭ್ರಷ್ಟಾಚಾರ ಹಾಗೂ ಮನೋಗೊಂದಲಗಳು ಕಾವ್ಯ ಹೊಸ ಕವಿತೆಗಳಲ್ಲಿ ಕಾಣಿಸಿಕೊಂಡಿವೆ.

"ಪರಿಸರ ಸಂರಕ್ಷಣೆಯ ಹೋರಾಟವನ್ನು ನಿರ್ಲಕ್ಷಿಸಿದ ಪರಿಣಾಮ ಭೂಕಂಪ, ಪರಿಸರ ವಿಕೋಪದಂತಹ ವಿನಾಶದಿಂದ ತಲ್ಲಣಿಸಿದರೂ ಸಹಿಸಿಕೊಂಡಿರುವ ಪ್ರಕೃತಿಯ ಪ್ರೀತಿ ತಾಳ್ಮೆಯನ್ನು

"ಆಕಾಶಕಾಯದಲ್ಲಿ ಸೂರ್ಯ ಚಂದ್ರರು ಭೂಮಿ
ಇಲ್ಲವಾಗುವಂತೆ ಒಂದು ದಿವಸ
ಹದಿನಾಲ್ಕು ಲೋಕಗಳು ಅಳಿದು ಹೋದರು ತಾಯೆ,
ನನಗೆ ಬೇಕಾಗಿರುವುದು ನಿನ್ನ ಪ್ರೀತಿ

ಎಂದು ಹಾಡಿ ಹೊಗಳಿ ತಮ್ಮ ಹಿರಿದಾಸೆಯನ್ನು ಅಭಿವ್ಯಕ್ತಿಸಿದ್ದಾರೆ."[೧]

ಈ ಹಿಂದೆ 'ಬಂಗಾರದ ಭರವಸೆಗಳ ಕೊಟ್ಟು ಕಾಲನೂಕುವಂತಹ ಅಧಿಕಾರದ ಮಿಂಡರೆ' ಎಂದು ಆರ್ಭಟಿಸಿದ ಕವಿ ಈ ಹೊಸ ಕವಿತೆಗಳಲ್ಲಿ ತುಂಬ ನಯವಾಗಿ ಬರೆದಿದ್ದಾರೆ.

'ಕಪ್ಪು ದೇವತೆಯ ಕಣ್ಣಾವಲು' ಪದ್ಯದಲ್ಲಿ
ಉರಿಯಿದೆ ವಿಷವಿದೆ ಇರಿಯುವ ಅಲಗಿದೆ
ಎನ್ನುವ ಅಂಜಿಕೆ ಈಗೇಕೆ
ಕನಸು ಕವಿತೆಗಳ ಹುಣ್ಣಿಮೆಯಿರಲು

ಮುಂದಿನ ದುಗುಡದ ಮಾತೇಕೆ – ಎಂಬ ಸಾಲುಗಳನ್ನು ಗಮನಿಸಿದಾಗ ರೊಚ್ಚಿನಿಂದ ಬರೆಯುತ್ತಿದ್ದ ಕವಿ ಎಷ್ಟು ಮೃದುವಾಗಿ ಬರೆಯುತ್ತಿದ್ದಾರೆ ಎಂಬುದು ತಿಳಿಯುತ್ತದೆ. ಇದಕ್ಕೆ ಪ್ರಸ್ತುತ ಸಮಾಜದಲ್ಲಿ ಏನೇ ಹೋರಾಟ, ಹಾರಾಟ ಚೀರಾಟ ಮಾಡಿದರೂ ಅವು ಪ್ರಯೋಜನಕ್ಕೆ ಬರುವುದಿಲ್ಲ ಎಂಬ ಭಾವನೆ ಕಾರಣವಾಗಬಹುದು.

'ಕನವರಿಕೆ' ಪದ್ಯದ
ಸನ್ಮಾನದ ಉನ್ಮಾದಕ್ಕೆ
ಸತ್ಯವಂತಿಕೆಯ ಪೊಳ್ಳು ಜಾಹೀರಾತುಗಳಿಗೆ
ಹಣದ ಥೈಲಿಯ ಸದ್ದುಗಳಿಗೆ
ಎಲ್ಲರೂ ದನಿಗೂಡಿಸುವಾಗ

ನನ್ನ ಕಿವಿಗೆ ನಿಶ್ಯಬ್ಧವಾಗುತ್ತದೆ – ಈ ಮಾತುಗಳು ರಾಜಿಯೇ ನಿರಾಶೆಯೇ ಅಥವಾ ಪ್ರತಿಭಟನೆ ಮಾಡುವ ಶಕ್ತಿಕುಂದಿದೆಯೇ ಹೇಳುವುದು ಕಷ್ಟ. ಇಲ್ಲಿ ಕವಿ ತಮ್ಮ ಮನದಾಳದ ತುಮುಲಗಳನ್ನು ಬಿಚ್ಚಿಡುತ್ತಿದ್ದಾರೆ ಎನಿಸುತ್ತದೆ.

ಹೀಗೆ ಸಿದ್ಧಲಿಂಗಯ್ಯನವರು 'ಹೊಲೆ ಮಾದಿಗರ ಹಾಡು', 'ಸಾವಿರಾರು ನದಿಗಳು' ಮತ್ತು 'ಕಪ್ಪು ಕಾಡಿನ ಹಾಡು' ಕವನ ಸಂಕಲನಗಳ ಮೂಲಕ ಆದಷ್ಟು ದಲಿತ ಅನುಭವಗಳನ್ನು ಪ್ರಜ್ಞೆಯನ್ನು ವ್ಯಕ್ತಪಡಿಸಿದ್ದರು ಎಂಬುದು ಗೋಚರವಾಗುವ ಅಂಶ. ಏನೆಲ್ಲಾ ದಲಿತ ಅನುಭವಗಳನ್ನು ಪ್ರಜ್ಞೆಯನ್ನು ಹೇಳಬೇಕೋ ಅದೆಲ್ಲವನ್ನು ಸಿದ್ಧಲಿಂಗಯ್ಯನವರು ತಮ್ಮ ಸೃಜನಶೀಲ ಸಾಹಿತ್ಯದ ಮೂಲಕ ತಿಳಿಸಿದ್ದಾರೆ. ಇತ್ತೀಚೆಗೆ ಸಿದ್ಧಲಿಂಗಯ್ಯನವರ ಪ್ರಜ್ಞೆ ಬೇರೆ ಕಡೆ ತಿರುಗಿದೆ. ಹೊಸ ಬಗೆಯ ರಾಜಕಾರಣದ ಹಿನ್ನೆಲೆಯಲ್ಲಿ ಸರಳ ಆಕ್ರೋಶ ಮತ್ತು ಆಕಾಂಕ್ಷೆಗಳ ಮೂಲಕ ವಿವಿಧ ರೀತಿಯ ದಲಿತ ಸಮಷ್ಟಿಯ ಕಾವ್ಯ ರಚನೆಯನ್ನು ಸಿದ್ಧಲಿಂಗಯ್ಯನವರು ಕೈಗೊಂಡಿದ್ದಾರೆ.

ಸಿದ್ದಲಿಂಗಯ್ಯನವರ ನಾಟಕಗಳು

ಕನ್ನಡದಲ್ಲಿ ದಲಿತ ನಾಟಕ ಪರಂಪರೆ ಅಷ್ಟೇನು ಬೆಳೆದಿಲ್ಲ. ಕನ್ನಡದಲ್ಲಿ ೧೯೧೮, ೧೯ರ ವೇಳೆಗೆ ಮೊದಲ ಬಾರಿಗೆ ದೇವಾರಯ ಇಂಗಳೆಯವರ ಅಪ್ರಕಟಿತ 'ಬಹಿಷ್ಕೃತ ಭಾರತ ಬೋದಿನಿ' ಅರ್ಥಾತ್ 'ಯಲ್ಲಮ್ಮ' ಪ್ರದರ್ಶನಗೊಂಡಿದೆ. ಕನ್ನಡ ನಾಟಕ ಸಾಹಿತ್ಯದಲ್ಲಿ ಕುವೆಂಪುರವರ ಶೂದ್ರ ತಪಸ್ವಿ, ಬೆರಳ್‌ಗೆ ಕೊರಳ್, ಜಲಗಾರ ಕೈಲಾಸಂ ಅವರ ಏಕಲವ್ಯ ಮುಂತಾದ ದಲಿತ ವಸ್ತುವನ್ನು ಆಧರಿಸಿದ ಕೃತಿಗಳನ್ನು ಬಿಟ್ಟರೆ ದಲಿತ ಪ್ರಜ್ಞೆಯ ಕೃತಿಗಳು ರಂಗ ಭೂಮಿಯನ್ನು ಪ್ರವೇಶಿಸಿದ್ದು ಎಪ್ಪತ್ತರ ದಶಕದ ಕೊನೆಯ ಭಾಗದಲ್ಲಿ. ಇದು ಕನ್ನಡ ಸಾಂಸ್ಕೃತಿಕ ಸಂದರ್ಭದಲ್ಲಿ ಮಹತ್ವದ ಘಟ್ಟವೂ ಹೌದು. ಹೊಸ ಬದಲಾವಣೆಗಳನ್ನು ಹೊತ್ತು ಬಂದ ದಲಿತ ಬಂಡಾಯ ಸಾಹಿತ್ಯ ಚಳುವಳಿಗಟ್ಟಿಗೊಂಡ ಕಾಲ ಇದಾಗಿದೆ. ಸಮುದಾಯದಂಥ ಸಾಂಸ್ಕೃತಿಕ ಸಂಘಟನೆ, ದಲಿತ ಸಂಘರ್ಷ ಸಮಿತಿಯ ಕಲಾಮಂಡಲಿ, ದಲಿತ ವಿದ್ಯಾರ್ಥಿ ಒಕ್ಕೂಟ,

---

[೧] ಹೆಚ್ ದಂಡಪ್ಪ (ಸಂ) : ಬಡವರ ನಗುವಿನ ಶಕ್ತಿ : ಪು.ಸಂ. ೧೪೫.

ಕಲಾಮೇಳ ಮುಂತಾದ ಒಕ್ಕೂಟಗಳು ರಚನೆಗಳು ಕನ್ನಡ ದಲಿತ ರಂಗಭೂಮಿಗೆ ಚಾಲನೆ ನೀಡಿದವು.

ಈ ದಿಸೆಯಲ್ಲಿ ಆಧುನಿಕ ದಲಿತ ನಾಟಕಗಳ ಬಗ್ಗೆ ವಿವೇಚಿಸಿದಾಗ ಸಿದ್ಧಲಿಂಗಯ್ಯನವರು ಪ್ರಮುಖ ದಲಿತ ನಾಟಕಕಾರರಾಗಿ ಕಂಡುಬರುತ್ತಾರೆ. ಇವರು 'ಏಕಲವ್ಯ', 'ಪಂಚಮ' ಮತ್ತು 'ನೆಲಸಮ' ಎಂಬ ಮೂರು ನಾಟಕಗಳನ್ನು ರಚಿಸಿದ್ದಾರೆ.

ಸಿದ್ಧಲಿಂಗಯ್ಯನವರ ಪ್ರಥಮ ನಾಟಕ **'ಏಕಲವ್ಯ'**, ಇದು ೧೯೮೪ರಲ್ಲಿ ಪ್ರಕಟವಾಯಿತು. ಇದೊಂದು ಪುರಾಣ ಕಥಾವಸ್ತುವನ್ನು ಆಧರಿಸಿದ ನಾಟಕ. ಮಹಾಭಾರತದಲ್ಲಿ ಇದೆ ಪ್ರಸ್ತಾಪವಿದೆ. "ಈ ಪುರಾಣ ಕಥೆಯನ್ನು ಸಮಕಾಲೀನ ಸಂದರ್ಭಕ್ಕೆ ತಕ್ಕಂತೆ ಉಪಯೋಗಿಸಿ ಹೊಸ ಅರ್ಥವನ್ನು ಧ್ವನಿಸುವ ಕೆಲಸ ಏಕಲವ್ಯ ನಾಟಕದಲ್ಲಿ ನಡೆದಿದೆ. ಈ ಮೊದಲು ಏಕಲವ್ಯನ ಕಥೆಯನ್ನು ಬಳಸಿಕೊಂಡು ಕುವೆಂಪು 'ಬೆರಳ್‌ಗೆ ಕೊರಳ್', ಗೋವಿಂದ ಪೈ 'ಹೆಬ್ಬೆರಳು, ಮೇಘ ಮಿತ್ರರು, 'ಎಚ್ಚೆತ್ತ ಏಕಲವ್ಯ' ಎಂಬ ನಾಟಕಗಳನ್ನು ಬರೆದಿದ್ದಾರೆ. ಏಕಲವ್ಯ ಗುರುದಕ್ಷಿಣೆಯಾಗಿ ಹೆಬ್ಬೆರಳನ್ನು ಕೊಡುವ ಪ್ರಸಂಗವನ್ನು ಬೇರೆ ಬೇರೆ ಲೇಖಕರು ತಮ್ಮ ದೃಷ್ಟಿಕೋನದಂತೆ ಅರ್ಥೈಸಲು ಪ್ರಯತ್ನಸಿದ್ದಾರೆ."[೧] ಸಿದ್ಧಲಿಂಗಯ್ಯನವರು ಮಾತ್ರ ಈ ಕಥೆಯನ್ನು ದಲಿತರ ಎಚ್ಚೆತ್ತ ಪ್ರಜ್ಞೆಯನ್ನು ಮುಖ್ಯವಾಗಿಟ್ಟುಕೊಂಡು ದಲಿತರ ಹೋರಾಟವನ್ನು ಪ್ರಕಟಪಡಿಸುವುದಕ್ಕಾಗಿ, ಘೋಷಿಸುವುದಕ್ಕಾಗಿ ಉಪಯೋಗಿಸಿಕೊಂಡು ದಲಿತ ಪ್ರಜ್ಞೆಯನ್ನು ವ್ಯಕ್ತಪಡಿಸಿದ್ದಾರೆ. ಈ ನಾಟಕದಲ್ಲಿ ೧೧ ದೃಶ್ಯಗಳಿದ್ದು, ಎರಡು ಹಂತಗಳಲ್ಲಿ ಕಥೆ ನಡೆಯುತ್ತದೆ. ಮೊದಲ ಹಂತದಲ್ಲಿ ಏಕಲವ್ಯ ದ್ರೋಣಾಚಾರ್ಯರಿಗೆ ಬಲಗೈ ಹೆಬ್ಬೆರಳನ್ನು ಕೊಡುವ ಸಂದರ್ಭ ಎರಡನೇ ಹಂತದಲ್ಲಿ "ಮುಗ್ಧ ಏಕಲವ್ಯ ಎಚ್ಚೆತ್ತ ಏಕಲವ್ಯನಾಗಿ ಪ್ರಗತಿಪರ ಧೋರಣೆಯ ಕ್ರಾಂತಿಕಾರನಾಗಿ ನಿಲ್ಲುತ್ತಾನೆ. ಇದು ನಾಟಕಕಾರರು ದಲಿತ ಚಳುವಳಿಯ ಧೋರಣೆಗಾಗಿ ಮಾಡಿಕೊಂಡ ಮಾರ್ಪಾಡು".[೨]

ಏಕಲವ್ಯ ನಾಟಕವು ಕುರುಕ್ಷೇತ್ರ ಯುದ್ಧದ ಹಿನ್ನೆಲೆಯಿಂದ ಆರಂಭವಾಗುತ್ತದೆ. ಮೊದಲ ದೃಶ್ಯ ಮೇಳಗೀತೆಯಿಂದಲೇ ಆರಂಭವಾದರೂ ಸಿದ್ಧಲಿಂಗಯ್ಯನವರು ಇಲ್ಲಿ ಮುಖ್ಯವಾಗಿ ದಲಿತ ಧೋರಣೆಯನ್ನು ಎತ್ತಿ ಹಿಡಿದಿದ್ದಾರೆ.

---

[೧] ಹೆಚ್ ದಂಡಪ್ಪ (ಸಂ) : ಬಡವರ ನಗುವಿನ ಶಕ್ತಿ : ಪು.ಸಂ. ೨೨೯.
[೨] ಹೆಚ್ ದಂಡಪ್ಪ (ಸಂ) : ಬಡವರ ನಗುವಿನ ಶಕ್ತಿ : ಪು.ಸಂ. ೨೨೯.

"ಹಾಸ್ಯದ ಹೊನಲಲ್ಲಿ ಶೃಂಗಾರದ ಮಡುವಲ್ಲಿ
ಸಂಘರ್ಷದ ಕಥೆ ಬಂಧುಗಳ
ಅಡವಿಯ ಬಾಲನು ಘನ ಏಕಲವ್ಯನು
ಹೋರಾಟ ಮಾಡಿದ ಕಥೆ ಕೇಳಿ."

(ಏಕಲವ್ಯ ನಾಟಕ ಪು.ಸಂ. ೧)

ಎಂದು ಆರಂಭವಾಗುತ್ತದೆ. ಇಲ್ಲಿ ಮೊದಲೇ ನಾಟಕಕಾರ ಪ್ರಸ್ತುತ ಸಮಾಜದ ವ್ಯವಸ್ಥೆಯನ್ನು ಇಲ್ಲಿ ನಡೆಯುವ ಕಾದಾಟ ಬಡಿದಾಟಗಳನ್ನು ಸೂಕ್ಷ್ಮವಾಗಿ ಹೇಳಲು ಪ್ರಯತ್ನಿಸಿದ್ದಾರೆ. ಈ ನಾಟಕದ ಎಚ್ಚೆತ್ತ ಏಕಲವ್ಯನ ಹೋರಾಟದ ಪ್ರಜ್ಞೆಯ ಜೊತೆಗೆ ಕೌರವ ಪಾಂಡವರ ಮಧ್ಯ ಇರುವ ಟೊಳ್ಳುತನವನ್ನು ನಾಟಕಕಾರರು ಬಿಚ್ಚಿ ತೋರಿಸುವುದು ನಾಟಕದ ವೈಶಿಷ್ಟ್ಯವಾಗಿದೆ. ಅಂದರೆ ಈ ಸಮಾಜದಲ್ಲಿ ನಡೆಯುವ ಅಪರಾಧಗಳು, ಶೋಷಣೆಗಳು, ದೌರ್ಜನ್ಯಗಳನ್ನು ಕೆಳವರ್ಗ ಮತ್ತು ಮೇಲ್ವರ್ಗಗಳ ಮಧ್ಯೆ ಇರುವ ವರ್ಗ ವ್ಯವಸ್ಥೆಯ ಸಮಸ್ಯೆಗಳನ್ನು ಮುಖ್ಯವಾಗಿ ಹೇಳಿದ್ದಾರೆ.

"ಗುರುವಿನಿಂದ ವಿದ್ಯೆ ಕಲಿತ ಕೌರವ ಪಾಂಡವರು ಅದನ್ನು ವಿನಾಶಕ್ಕಾಗಿ ಬಳಸಿಕೊಂಡರು. ಶಸ್ತ್ರಾಸ್ತ್ರ ನೈಪುಣ್ಯತೆ ದಾಯಾದಿಗಳ ಕಗ್ಗೊಲೆಗೆ, ಬಂಧು ಹತ್ಯೆಗೆ, ಅಸಂಖ್ಯಾತರ ಅಂಗವಿಕಲತೆಗೆ, ಅಗಣಿತ ವೈದವ್ಯಕ್ಕೆ ಹೇಗೆ ಕಾರಣವಾಗುತ್ತದೆ ಎಂಬುದು ನಾಟಕದಲ್ಲಿ ಮತ್ತೆ ಮತ್ತೆ ಪ್ರಸ್ತಾಪಗೊಳ್ಳುತ್ತದೆ. ಆದರೆ ಏಕಲವ್ಯನು ಸಾಧಿಸಹೊರಟ ಬಿಲ್ವಿದ್ಯೆ ಲೋಕ ಕಲ್ಯಾಣಕ್ಕಾಗಿ, ತನ್ನ ಕಾಡಿನ ರಕ್ಷಣೆಗಾಗಿ ಮೀಸಲಾದ ವಿದ್ಯೆ, ಪಾತ್ರ ಪಾತ್ರರನ್ನು ನೋಡಿ ವಿದ್ಯೆಯನ್ನು ಕಲಿಸಬೇಕೆನ್ನುವ ನಂಬಿಕೆಯಿರುವ ಹಿಂದೂ ಪರಂಪರೆಯಲ್ಲಿ ಕ್ಷತ್ರಿಯರಿಗೂ ಬೇಡರಿಗೂ ಇರುವ ಈ ವ್ಯತ್ಯಾಸ ವ್ಯಂಗ್ಯ ಪೂರ್ಣವಾಗಿದೆ."[೧] ಇದನ್ನು ಸಿದ್ಧಲಿಂಗಯ್ಯನವರು ಉಚಿತ ರೀತಿಯಲ್ಲಿ ಬಳಸಿಕೊಂಡಿದ್ದಾರೆ.

ವೇದಗಳ ಕಾಲದಿಂದ ಹಿಡಿದು ಸ್ವಾತಂತ್ರ್ಯ ಪೂರ್ವದವರೆಗೂ ದಲಿತರಿಗೆ ವಿದ್ಯೆಯನ್ನು ಕಲಿಸುತ್ತಿರಲಿಲ್ಲ. ಏಕಲವ್ಯನು ದ್ರೋಣಾಚಾರ್ಯರಲ್ಲಿಗೆ ಹೋಗಿ ವಿದ್ಯೆ ಕಲಿಯಬೇಕೆನ್ನುವ ಅವನ ಆಸಕ್ತಿ ಹೀನ ಕುಲದವರಿಗೆ ಸಾಧ್ಯವಿಲ್ಲವೆಂಬುದನ್ನು ತಿಳಿಯಪಡಿಸುವುದರ ಮೂಲಕ ದಲಿತ

---

[೧] ಹೆಚ್ ದಂಡಪ್ಪ (ಸಂ) : ಬಡವರ ನಗುವಿನ ಶಕ್ತಿ : ಪು.ಸಂ. ೨೩೦.

ಜನಾಂಗ ಹಿಂದಿನಿಂದಲೂ ಈ ವ್ಯವಸ್ಥೆಯಿಂದ ಯಾವ ರೀತಿ ತುಳಿತಕ್ಕೊಳಪಟ್ಟಿತ್ತು ಎಂಬುದನ್ನು ಸಿದ್ದಲಿಂಗಯ್ಯನವರು ಹೇಳ ಹೊರಟಂತಿದೆ.

ನಾಟಕದಲ್ಲಿ ಏಕಲವ್ಯ ತಾಯಿಯ ಸಲಹೆಯ ಮೇರೆಗೆ ದ್ರೋಣಾಚಾರ್ಯರಲ್ಲಿ ಬಿಲ್ವಿದ್ಯೆಯನ್ನು ಕಲಿಯಲು ಹಸ್ತಿನಾವತಿಗೆ ಹೋಗುತ್ತಾನೆ. ಆದರೆ ದ್ರೋಣಾಚಾರ್ಯರು ಆತ ಕೀಳು ಕುಲದವನೆಂದು ಸಮ್ಮತಿಸದೆ ಹಿಂದಕ್ಕೆ ಕಳುಹಿಸುತ್ತಾರೆ. ಆಗ ಏಕಲವ್ಯನು ದ್ರೋಣರ ಮಣ್ಣಿನ ಮೂರ್ತಿಯನ್ನು ಪ್ರತಿಷ್ಠಾಪಿಸಿಕೊಂಡು ಅದರ ಸ್ಫೂರ್ತಿಯಿಂದ ಧನುರ್ವಿದ್ಯೆಯಲ್ಲಿ ಪ್ರವೀಣನಾಗುತ್ತಾನೆ. ಮುಂದೆ ಅರ್ಜುನನೆ ಮೊದಲಾದ ಕ್ಷತ್ರಿಯ ಕುಮಾರರು ಬೇಟೆಗೆ ಬಂದಾಗ ಅವರ ಬೇಟೆನಾಯಿಯ ಬಾಯಿಗೆ ಏಕಲವ್ಯ ಬಾಣ ಬಿಡುತ್ತಾನೆ. ಇಂತಹ ಕೌಶಲ್ಯ ಶಬ್ದವೇದಿ ವಿದ್ಯೆ ಗೊತ್ತಿದ್ದವರಿಗೆ ಮಾತ್ರ ಕೈವಶವಾಗುವಂತದ್ದು. ಆದರೆ ಇದು ರಾಜಕುಮಾರರಿಗೆ ತಿಳಿದಾಗ ಅವರು ದ್ರೋಣನಿಗೆ ದೂರುತ್ತಾರೆ. ದ್ರೋಣ ಈಗಾಗಲೇ ಅರ್ಜುನನ್ನು ಶ್ರೇಷ್ಠ ಬಿಲ್ಲುಗಾರನನ್ನಾಗಿ ಮಾಡುತ್ತೇನೆಂದು ಅವನಿಗೆ ಮಾತು ಕೊಟ್ಟಿದ್ದ. ಆದರೆ ಏಕಲವ್ಯನಿಗೆ ಈ ಕೌಶಲ್ಯ ದಕ್ಕಿರುವುದಕ್ಕೆ ಕರುಬಿದ ಅರ್ಜುನ ಇದನ್ನು ಆಕ್ಷೇಪಿಸುತ್ತಾನೆ. ಇದರಿಂದಾಗಿ ದ್ರೋಣಾಚಾರ್ಯ ಏಕಲವ್ಯನ ಹೆಬ್ಬೆರಳನ್ನು ದಕ್ಷಿಣೆಯಾಗಿ ಪಡೆಯುತ್ತಾನೆ. ಹೀಗಿರಲು ಕುರುಕ್ಷೇತ್ರದ ಯುದ್ಧದ ಸಿದ್ಧತೆಯಾಗುತ್ತದೆ. ನಾಟಕದ ಕೊನೆಯ ದೃಶ್ಯ ನಾಟಕಕಾರರ ನಿಲುವನ್ನು ಸ್ಪಷ್ಟಪಡಿಸುತ್ತದೆ. ಕುರುಕ್ಷೇತ್ರದ ಯುದ್ಧದಲ್ಲಿ ಬೆಂಬಲ ಬಯಸಿ ಬರುವ ಕೌರವ ಪಾಂಡವರೀರ್ವರು ಏಕಲವ್ಯನನ್ನು ತಮಗೆ ನೆರವಾಗುವಂತೆ. ಅದಕ್ಕೆ ಏಕಲವ್ಯನು ಕೊಡುವ ಉತ್ತರ "ಕುರು ಪಾಂಡವರಲ್ಲಿ ಒಂದು ಪಕ್ಷವಹಿಸಿ ಯಾರೊಬ್ಬರ ದಾಳ ನಾನಾಗಲಾರೆ. ಎಲ್ಲೆಲ್ಲೂ ಇರುವ ಅನ್ಯಾಯದ ವಿರುದ್ಧ ಜ್ಞಾನದ ಗುತ್ತಿಗೆಯನ್ನು ಎತ್ತಿ ಹಿಡಿಯುವ ಶಾಸ್ತ್ರಗಳ ವಿರುದ್ಧ ನನ್ನ ಯುದ್ಧ ಮೇಲು ಕೀಳೆಂಬ ವಂಚನೆಯನ್ನು ಅಳಿಸಲು ನನ್ನ ಸಮರ. ಕುರುಕ್ಷೇತ್ರ ಕೇವಲ ಉಳ್ಳವರ ನಡುವಿನ ಕಚ್ಚಾಟ. ನನ್ನದು ಇಲ್ಲದವರ ಪರವಾದ ಹೋರಾಟ. ಈ ಸಂಘರ್ಷ ಕುರುಪಾಂಡವರಿಬ್ಬರ ವಿರುದ್ಧವೂ ಸಾಗಬೇಕು."[೧] ಇಲ್ಲಿ ತುಳಿತಕ್ಕೆ ಸಿಕ್ಕಿದವರ ಬಾಳಿನ ಬೆಳಕು ಮೂಡುತ್ತದೆ. ಕಡೆಗಣಿಸಲ್ಪಟ್ಟವರ ಬದುಕಿನ ತೋಟದಲ್ಲಿ ಸಮಾನತೆಯ ಹೂ ಅರಳುತ್ತದೆ ಎಂಬುದು ವ್ಯಕ್ತವಾಗುತ್ತದೆ.

---

[೧] ಸಿದ್ಧಲಿಂಗಯ್ಯ : ಏಕಲವ್ಯ ನಾಟಕ : ಪು.ಸಂ. ೬೯.

ವರ್ಣ ವ್ಯವಸ್ಥೆ, ವರ್ಗ ವ್ಯವಸ್ಥೆ, ಮೇಲು-ಕೀಳು, ಉಳ್ಳವ ಇಲ್ಲದವರ ಈ ಎಲ್ಲಾ ಭೇದಗಳನ್ನು ಅಳಿಸಿ ಹಾಕುವ ಏಕಲವ್ಯನ ಸಂಕಲ್ಪ ದಲಿತ ಸಾಹಿತ್ಯ ಚಳುವಳಿಯ ಸಂಕಲ್ಪದಂತೆ ಮೂಡಿ ಬಂದಿದೆ. ಈ ಮೂಲಕ ಸಿದ್ಧಲಿಂಗಯ್ಯನವರು ಪುರಾಣ ಕಥೆಯನ್ನು ಆಧರಿಸಿ ಸಮಾಜಕ್ಕೆ ಸಂದೇಶವನ್ನು ನೀಡುತ್ತಿದ್ದಾರೆ ಎಂಬುದು ತಿಳಿಯುತ್ತದೆ.

ಕಾಡಿನ ಮತ್ತು ನಾಡಿನ ಮಧ್ಯೆ ನಡೆದ ಸಂಘರ್ಷದ ಕಥೆಯಾಗಿ ಏಕಲವ್ಯನ ಬದುಕು ಸಿದ್ಧಲಿಂಗಯ್ಯನವರಿಗೆ ಗೋಚರವಾಗಿದೆ. ಕಾಡು ಪ್ರತಿನಿಧಿಸುವ ನಿಸರ್ಗ ಸಹಜ ಮುಗ್ಧತೆ ಮತ್ತು ಸರ್ವ ಜೀವ ಚೈತನ್ಯವನ್ನು ಕಾಪಾಡುವ ಭರವಸೆಯನ್ನು ಏಕಲವ್ಯ ಮತ್ತವನ ಸಹಚರರು ಪ್ರತಿನಿಧಿಸಿದ್ದಾರೆ. ನಗರ ನಾಗರೀಕತೆಯ ಸ್ವಾರ್ಥ ಅಹಂಕಾರ ಮತ್ತು ಕ್ರೌರ್ಯದ ಸಾಕಾರವಾಗಿ ರಾಜ ಮತ್ತವನ ಅನುಚರ ವರ್ಗ ಕಾಣಿಸಿಕೊಳ್ಳುತ್ತದೆ. ನಾಗರಿಕ ಅನಾಗರೀಕ ಜಗತ್ತಿನ ಮೌಲ್ಯಗಳ ಹೋಲಿಕೆಯು ನಾಟಕದ ಮುಖ್ಯ ಗುರಿಯಾಗಿದ್ದು ಅದು ಪ್ರಥಮ ದೃಶ್ಯದಲ್ಲಿಯೇ ಪ್ರತಿಪಾದನೆಗೊಂಡಿದೆ.

"ಬಲಗೈ ಹೆಬ್ಬೆರಳನ್ನು ಕತ್ತರಿಸಿ ಕೊಟ್ಟು ಏಕಲವ್ಯನು ಮುಂದೆ ಎಡಗೈಯಲ್ಲಿ ಬಿಲ್ಲು ಹಿಡಿದು ಕ್ರಾಂತಿಯ ದುಂದುಬಿ ಮೊಳಗಿಸಿದನೆಂಬ ನಾಟಕಕಾರರ ಕಲ್ಪನೆ ಧ್ವನಿ ಪೂರ್ಣವಾಗಿದೆ. ಕುರುಕ್ಷೇತ್ರ ಯುದ್ಧ ನಡೆದಾಗ ಏಕಲವ್ಯ ಕೌರವ ಪಕ್ಷದಲ್ಲಿದ್ದನೆಂಬುದನ್ನು ಸಿದ್ಧಲಿಂಗಯ್ಯನವರು ಬದಲಾಯಿಸಿಕೊಂಡಿದ್ದಾರೆ. ಮಹಾಭಾರತ ಯುದ್ಧಕ್ಕೆ ಸಂಬಂಧಿಸಿದಂತೆ ಕಾದಾಡಲು ಅಥವಾ ತಟಸ್ಥವಾಗಿರಲು ಅವನು ಮಾಡಿಕೊಳ್ಳುವ ಆಯ್ಕೆ ಸಾಮಾಜಿಕ ನೆಲೆಯಿಂದಲೂ ತರ್ಕಬದ್ಧವಾಗಿರುವಂತೆ ನೋಡಿಕೊಳ್ಳುವ ಮೂಲಕ ಸಿದ್ಧಲಿಂಗಯ್ಯನವರು ತಮ್ಮ ಸ್ವಂತಿಕೆಯನ್ನು ತೋರ್ಪಡಿಸಿದ್ದಾರೆ."[೧]

ಕೌರವ ಪಾಂಡವರಿಬ್ಬರೂ ಯುದ್ಧಕ್ಕೆ ಮುನ್ನ ಏಕಲವ್ಯನ ಬೆಂಬಲ ಬಯಸಿ ಆತನೆಡೆಗೆ ಹೋದಾಗ ಅವನು ಹೇಳುವ ಮಾತುಗಳು ಸಂಪೂರ್ಣವಾಗಿ ಸಮಕಾಲೀನ ನೆಲೆಯಿಂದ ನಾಟಕಕಾರರು ಹೇಳುವ ಮಾತುಗಳಾಗಿವೆ. 'ಕುರುಕ್ಷೇತ್ರ ಕೇವಲ ಉಳ್ಳವರ ನಡುವಿನ ಕಚ್ಚಾಟ, ನನ್ನದು ಇಲ್ಲದವರ ಪರವಾದ ಹೋರಾಟ ಈ ಸಂಘರ್ಷ ಕುರುಪಾಂಡವರಿಬ್ಬರ ವಿರುದ್ಧವೂ ಸಾಗಬೇಕು' ಎಂಬ ಏಕಲವ್ಯನ ಸಂದೇಶದ ಮಾತುಗಳೊಂದಿಗೆ ನಾಟಕ ಮುಕ್ತಾಯವಾಗುತ್ತದೆ.

ಈ ಹಿನ್ನೆಲೆಯಲ್ಲಿ ಏಕಲವ್ಯ ಹೇಳುವ ಮಾತುಗಳು ಲೇಖಕರೆ ಹೇಳುವ ಮಾತುಗಳಾಗಿ ತನ್ನ ತನವನ್ನು ತಾವು ಉಳಿಸಿಕೊಳ್ಳಬೇಕು. ಬೇರೆಯವರ ಕಚ್ಚಾಟದಲ್ಲಿ ನಾವು ಭಾಗಿಯಾಗಿ ನಾವು ಏಕೆ ಸಾಯಬೇಕು ಎಂಬ ಮನೋಧೋರಣೆ ಇಲ್ಲಿ ವ್ಯಕ್ತವಾಗಿದೆ.

ಸಿದ್ಧಲಿಂಗಯ್ಯನವರ 'ಪಂಚಮ' ಮತ್ತು 'ನೆಲಸಮ' ಎರಡು ಪ್ರತ್ಯೇಕ ನಾಟಕಗಳು ಆದರೆ ಇವೆರಡೂ ಒಂದೇ ಸಂಕಲನವಾಗಿ ಪ್ರಕಟಗೊಂಡಿವೆ.

"ಆಳುವ ವರ್ಗದ ಸಂಸ್ಕೃತಿಯಲ್ಲಿ ಕರಗಿಹೋಗಿ ಸುಳ್ಳು ಮನುಷ್ಯರಾಗಿ ಮಾರ್ಪಟ್ಟಿರುವ ವಿದ್ಯಾವಂತ ದಲಿತರ ಅಸ್ತಿತ್ವದ ಹುಟುಕಾಟದ ಪ್ರಶ್ನೆ ಪಂಚಮ ನಾಟಕದ ವಸ್ತು. ಇಲ್ಲಿ ಬರುವ ಐದು ಜನ ಅಭ್ಯರ್ಥಿಗಳು ಐದು ಧೋರಣೆಗಳ ಪ್ರತಿನಿಧಿಗಳು ದಲಿತರ ಬದುಕನ್ನು ಶತಮಾನಗಳಿಂದ ಕವಿದುಕೊಂಡಿರುವ ಗುಲಾಮಗಿರಿಯನ್ನು ಕಿತ್ತೊಗೆಯಬೇಕೆಂಬುದು ಈ ನಾಟಕದ ಮುಖ್ಯ ಆಶಯ."[೨]

ಪಂಚಮ ನಾಟಕವು ಒಂದು ಸಂದರ್ಶನದ ಮೂಲಕ ಆರಂಭವಾಗುತ್ತದೆ. ಸಂದರ್ಶಕ ಹಯವದನ ರಾವ್, ಅವರಲ್ಲಿಗೆ ಅನೇಕ ಮಂದಿ ದಲಿತರು ಸಂದರ್ಶನಕ್ಕಾಗಿ ಬರುತ್ತಾರೆ ಮುಂದೆ ಉದ್ಯೋಗಕ್ಕೆ ಸೇರಬಯಸುವ ದಲಿತ ಅಭ್ಯರ್ಥಿಗಳಿಗೆ ಪೂರ್ವ ಭಾವಿಯಾಗಿ ತರಬೇತಿ ಕೊಡಿಸುವ ಉದ್ದೇಶದಿಂದ ಈ ಸಂದರ್ಶನವನ್ನು ಸಿದ್ಧಪಡಿಸಲಾಗಿದೆ. ಈ ಸಂದರ್ಶನ ನಡೆಯುತ್ತಿರುವುದು ಬೆಳಿಗ್ಗೆ ೧೧ ಗಂಟೆ ವೇಳೆಯಲ್ಲಿ, ಸ್ಥಳ ಸಮಾಜ ಕಲ್ಯಾಣ ಇಲಾಖೆಯ ಕಛೇರಿಯಲ್ಲಿ. ಸಂದರ್ಶನಕ್ಕೆ ಬಂದ ಐದು ಮಂದಿಯಲ್ಲಿ ಪುಟ್ಟಲಕ್ಕಮ್ಮ ಎಂಬ ಮಹಿಳಾ ಅಭ್ಯರ್ಥಿಯು ಸೇರಿದ್ದಾಳೆ. ಈಕೆಗೆ ಮಕ್ಕಳ ಪೋಷಣೆಯ ಬಗೆಗೆ ಟ್ರೈನಿಂಗ್ ನೀಡಲು ಆಯ್ಕೆ ಮಾಟಲಾಗುತ್ತದೆ. ಈಕೆ ಡಿಗ್ರಿ ಪಾಸ್ ಮಾಡಿದ್ದು ಈಗಾಗಲೇ ಮಕ್ಕಳ ಪೋಷಣೆಯ ಬಗ್ಗೆ ತಿಳುವಳಿಕೆ ಪಡೆದುಕೊಂಡಿದ್ದರು. ಟ್ರೈನಿಂಗ್ ಆಗಲೇಬೇಕೆಂದು ಅಧಿಕಾರಿಯಿಂದ ಆದೇಶವಾಗುತ್ತದೆ. ಈ ಸಂದರ್ಭದಲ್ಲಿ ಹಯವದನ್ ರಾವ್ ಹೇಳುವ ಮಾತುಗಳು ದಲಿತರು ವಾಸವಿರುವ ಕಡೆ ಸಮಸ್ಯೆಗಳು ಹೇಗಿರುತ್ತವೆ ಎಂಬುದು ವ್ಯಕ್ತವಾಗಿದೆ. ಉದಾಹರಣೆಗೆ "ನೋಡ್ರಿ ನಿಮ್ಮೂರಿಗೆ ಲೈಟ್ ಬಂದಿಲ್ಲ, ಸ್ವಾತಂತ್ರ್ಯ ಬಂದು ಮೂವತ್ತೊಂದು ವರ್ಷ ಆದ್ರು ಲೈಟ್ ಬಂದಿಲ್ಲ.

---

೧ ಹೆಚ್ ದಂಡಪ್ಪ (ಸಂ) : ಬಡವರ ನಗುವಿನ ಶಕ್ತಿ : ಪು.ಸಂ. ೨೨೬

೨ ಸಿದ್ಧಲಿಂಗಯ್ಯ : ಪಂಚಮ ಮತ್ತು ನೆಲಸಮ : ನಾಟಕದ ಹಿನ್ನುಡಿ

ಇದೇ ತೋರ್ರುತ್ತೆ ಹರಿಜನ ಗಿರಿಜನರು ಭಾರತ ದೇಶದಲ್ಲಿ ಕತ್ತಲೆಯಲ್ಲಿ ಭೂತ ಪ್ರೇತಗಳಂತೆ ವಾಸ ಮಾಡ್ತಾ ಇದ್ದಾರೆ ಅನ್ನೋದನ್ನ."[೧] ಈ ಮಾತುಗಳು ಒಂದು ಮಾತ್ರ ಸೀಮಿತವಾಗದೆ ಇಡೀ ದೇಶದಲ್ಲಿ ದಲಿತರಿರುವ ಹಳ್ಳಿಗಳಲ್ಲಿ ಈ ಪರಿಸ್ಥಿತಿ ಇದೇ ಎಂಬುದು ವ್ಯಕ್ತವಾಗಿದೆ. ದಲಿತರು ಅಜ್ಞಾನವೆಂಬ ಕತ್ತಲಯಿಂದ ಇನ್ನೂ ಹೊರಬಂದಿಲ್ಲ ಎಂಬ ಭಾವನೆಯನ್ನು ತಿಳಿಸುತ್ತದೆ. ಅನಂತರ ಸಂದರ್ಶನಕ್ಕೆ ಬರುವ ಅಭ್ಯರ್ಥಿಯೊಬ್ಬ ಅಧಿಕಾರಿಗೆ ತರಕಾರಿಯನ್ನು ಲಂಚವಾಗಿ ಕೊಟ್ಟು ಕೆಲಸದ ಬಗೆಗೆ ಏನು ಭರವಸೆ ಪಡೆಯಲಾರದೆ ಹಿಂದಿರುಗುತ್ತಾನೆ. ಮತ್ತೊಬ್ಬನಿಗೆ ಈ ಹಯವದನ್ ರಾವ್ ರಾಜಕೀಯ ಸೇರುವಂತೆಯು ಇನ್ನೊಬ್ಬನಿಗೆ ತನ್ನ ಸ್ನೇಹಿತನ ಮನೆಗೆ ಮುಸುರೆ ತಿಕ್ಕುವುದಕ್ಕಾಗಿಯು ಹೇಳಿ ಕಳುಹಿಸುತ್ತಾನೆ. ಇಲ್ಲೆಲ್ಲಾ ನಮ್ಮ ದೇಶದಲ್ಲಿ ನಡೆಯುವ ಭ್ರಷ್ಟಾಚಾರ, ಲಂಚಗುಳಿತನ, ಶೋಷಣೆಗೆ ಒಳಪಡಿಸುವ ಚಿತ್ರ ಕಂಡುಬರುತ್ತದೆ. ವಿದ್ಯಾವಂತರಾದರೂ ವಿದ್ಯೆಗೆ ತಕ್ಕ ಕೆಲಸ ದೊರೆಯುವುದಿಲ್ಲ ಎಂಬುದು ಅರಿವಾಗುತ್ತದೆ. ಇಲ್ಲಿ ಸಿದ್ಧಲಿಂಗಯ್ಯನವರು ಒಟ್ಟು ಸಮುದಾಯವನ್ನು ಮುಖ್ಯವಾಗಿಟ್ಟುಕೊಂಡು ಭಾರತದ ಅವ್ಯವಸ್ಥೆಯನ್ನು ಬಯಲಿಗೆಳೆಯುತ್ತಿದ್ದಾರೆ.

ಕೊನೆಯಲ್ಲಿ ಸಂದರ್ಶನಕ್ಕೆ ಬರುವ 'ಹೊಲೆಮಾದಿಗ' ಅಂದರೆ 'ಪಂಚಮ' ಅಧಿಕಾರಿಯ ಮೇಲೆ ರೇಗುವಾಗ ಬರುವ ಮಾತುಗಳು "ನೀವು ನಮ್ಗೆ ಉಪಕಾರ ಖಂಡಿತವಾಗ್ಲೂ ಮಾಡ್ತಾ ಇಲ್ಲ. ನಮ್ಮನ್ನ ನೀವು ದರೋಡೆ ಮಾಡ್ತಾ ಇದ್ದೀರಾ ನೀವು ಕುಳಿತ್ತಿದ್ದೀರಲ್ಲ ಬಿಲ್ಡಿಂಗು ಅದನ್ನ ನಿಮ್ ತಾತಾ ಕಟ್ಟುಸಿದ್ನಾ ? ಕಟ್ಟಿದವರು ನಮ್ಮ ಜನ ನೀವ್ ತಿನ್ನೋ ಅನ್ನಾ, ಕೊಡೋ ಬಟ್ಟೆ, ನಿಮ್ ಕಾರ್ ಒಡಾಡೋ ರಸ್ತೇನಾ ಮಾಡಿರೋರ್ ಯಾರ್ ಸ್ವಾಮಿ?" ಎನ್ನುವ ಮಾತಿನಿಂದ ದಲಿತರು ಎಂತಹ ಕೆಲಸಗಳನ್ನು ಮಾಡುತ್ತಾರೆ. ದೇಶಕ್ಕೆ ದುಡಿದರೂ ಅವರಿಗೆ ಸಿಕ್ಕುವ ಪ್ರತಿಫಲ ಶೂನ್ಯ ಎಂಬ ಅಂಶ ಗೋಚರವಾಗುತ್ತದೆ. ಶೋಷಣೆಗೆ ದೌರ್ಜನ್ಯಕ್ಕೆ ಒಳಪಟ್ಟಿರುವ ಅಂಶಗಳು ಇಲ್ಲಿ ಕಂಡುಬರುತ್ತವೆ. 'ಹೊಲೆ ಮಾದಿಗರು' ಮಾತ್ರ ಈ ದೇಶದಲ್ಲಿ ಮರ್ಯಾದೆಯಿಂದ ಬದುಕಬೇಕು ಅನ್ನೋ ಆಸೆ ಇದ್ರೆ ಎಲ್ಲಾ ಹೊಲೆ ಮಾದಿಗರು ಕೂಡ ಇದನ್ನೇ ಮಾಡಬೇಕು ಎಂದು ಅಧಿಕಾರಿಯನ್ನು ಚೆನ್ನಾಗಿ ಥಳಿಸುತ್ತಾನೆ.

---

[೧] ಸಿದ್ಧಲಿಂಗಯ್ಯ : ಪಂಚಮ ಮತ್ತು ನೆಲಸಮ : ಪು.ಸಂ. ೩.

"ಬೆನ್ ಕಾಲ್ಡ್‌ವೆಲ್‌ನ 'ಜಾಬ್' ನಾಟಕದ ತಂತ್ರವನ್ನು ಅನುಸರಿಸಿ ರಚಿಸಲಾಗಿರುವ ಪಂಚಮದಲ್ಲಿ ಹರಿಜನೋದ್ಧಾರ ಮಂಡಲಿಯವರು ಉದ್ಯೋಗಕ್ಕಾಗಿ ನಡೆಸುವ ಸಂದರ್ಶನವೊಂದನ್ನು ಕಲ್ಪಿಸಲಾಗಿದ್ದು ಅಲ್ಲಿ ಬರುವ ಅಭ್ಯರ್ಥಿಗಳ ಮೂಲಕ ವಿದ್ಯಾವಂತ ಹರಿಜನರ ವಿವಿಧ ಧೋರಣೆಗಳನ್ನು ಮಾರ್ಮಿಕವಾಗಿ ವಿಶ್ಲೇಷಿಸಿದ್ದಾರೆ". ಎಂದು ಜಿ.ಎಸ್. ಶಿವರುದ್ರಪ್ಪನವರು ಅಭಿಪ್ರಾಯಪಟ್ಟಿದ್ದಾರೆ.

ನಾಟಕದ ಆರಂಭದಿಂದಲೂ ಹಾಸ್ಯ ಮತ್ತು ವ್ಯಂಗ್ಯಗಳು ಪ್ರಕಟವಾಗಿವೆ. ಮುಕ್ತಾಯದಲ್ಲಿ ಪಂಚಮನ ರೋಷ, ಸಿಟ್ಟುಗಳ ಮೂಲಕ ನಾಟಕ ಕೊನೆಯಾಗುತ್ತದೆ. ಈ ರೋಷ, ಸಿಟ್ಟುಗಳಿಂದ ಪಂಚಮ ಸಂದರ್ಶಕನನ್ನು ಆಫೀಸಿನ ಒಳಗೆ ಅಟ್ಟಾಡಿಸಿಕೊಂಡು ಹೊಡೆದು ತಂಬೂರಿಯಿಂದ ಚುಚ್ಚುವ ಪಂಚಮ ಪ್ರತಿಭಟನೆಯ ಪ್ರತಿನಿಧಿಯಾಗಿ ಕಂಡುಬರುತ್ತಾನೆ. ಇಲ್ಲಿ ಪಂಚಮನ ಪ್ರಕ್ರಿಯೆ ಕಂಡು ಪ್ರೇಕ್ಷಕರಲ್ಲಿ ನಗೆಯನ್ನು ತರಿಸುತ್ತದೆ. ಈ ನಗೆಗೆ ಆತನ ಮಾತುಗಳು ಕಾರಣವಾಗುತ್ತವೆ. ಕೆಳವರ್ಗದವರು ರೊಚ್ಚಿಗೆದ್ದರೆ ಆಗುವ ಪರಿಣಾಮವನ್ನು ಇದು ಬಿಂಬಿಸುತ್ತದೆ. ತಿಳುವಳಿಕೆ ಇದ್ದರೆ ದಲಿತರು ಕೂಡ ಏನನ್ನು ಬೇಕಾದರೂ ಅರ್ಥ ಮಾಡಿಕೊಳ್ಳಬಲ್ಲರು ಎಂಬುದನ್ನು ಸಿದ್ಧಲಿಂಗಯ್ಯನವರು ಪ್ರಜ್ಞೆಯ ರೂಪದಲ್ಲಿ ತೋರ್ಪಡಿಸಿದ್ದಾರೆ.

ಸಿದ್ಧಲಿಂಗಯ್ಯನವರು 'ನೆಲಸಮ' ನಾಟಕವನ್ನು ದಲಿತರಿಗೆ ಸಂಬಂಧಪಟ್ಟಂತೆ ರಚಿಸಿದ್ದಾರೆ. ಕೊಳಚೆ ನಿರ್ಮೂಲನ ಕಾರ್ಯಕ್ಕೆ ಸಂಬಂಧಿಸಿದಂತೆ ಈ ನಾಟಕ ಕಾಣಿಸಿಕೊಂಡಿದೆ. ಈ ಹಿನ್ನೆಲೆಯಲ್ಲಿ ನಾಟಕದ ಇತರ ವಿಷಯಗಳು ಬಿಚ್ಚಿಕೊಳ್ಳುತ್ತವೆ. ಸಿದ್ಧಲಿಂಗಯ್ಯನವರು ನಾಟಕದ ಹಿನ್ನುಡಿಯಲ್ಲಿ ಈ ನಾಟಕವನ್ನು ಕುರಿತಂತೆ ಬಡವರ ಉದ್ಧಾರದ ಹೆಸರಿನಲ್ಲಿ ಬಡವರನ್ನು ನಿತ್ಯವೂ ಬಲಿ ತೆಗೆದುಕೊಳ್ಳುತ್ತಿರುವ ಆಳುವ ವರ್ಗದ ವಂಚನೆ 'ನೆಲಸಮ' ನಾಟಕದ ವಸ್ತು, ತಮ್ಮ ಗುಡಿಸಲು ನೆಲಸಮವಾದಾಗ ಈ ದಲಿತರಲ್ಲಿ ಸತ್ಯದ ಅರಿವು ಶುರುವಾಗುತ್ತದೆ. ಸುಳ್ಳು ಭರವಸೆ, ಹೆಂಡ ಹಣವನ್ನು ಚುನಾವಣೆಯ ಕಾಲದಲ್ಲಿ ಚೆಲ್ಲಿ ಸುಲಿಗೆಯ ರಾಜಕಾರಣದಲ್ಲಿ ತೊಡಗಿರುವವರ ಬಣ್ಣವನ್ನು ಬಯಲು ಮಾಡುವ ನಾಟಕ ಈ ನೆಲಸಮ ಎಂದಿದ್ದಾರೆ.

ಈ ನಾಟಕದಲ್ಲಿ ರಾಣಿಚಂದ್ರಮ್ಮನ ಮಗ ಅರಮನೆಯಿಂದ ಹೊರಗೆ ಬರುವಾಗ ಆತನ ಮೂಗಿಗೆ ಏನೋ ವಾಸನೆ ಬಡಿಯುತ್ತದೆ. ಈ ವಾಸನೆಯು ಎಲ್ಲಿಂದ ಬರುತ್ತಿದೆ ಎಂಬುದನ್ನು ತಿಳಿದುಕೊಂಡು ಬರಲು ಆಳುಗಳನ್ನು ಕಳುಹಿಸುತ್ತಾನೆ. ಈ ವಾಸನೆ ಪಕ್ಕದ ಕೊಳಗೇರಿಯಿಂದ

ಬರುತ್ತಿರುವುದಾಗಿ ತಿಳಿದು ಬರುತ್ತದೆ. ವಿಜಯ ಈ ವಿಷಯವನ್ನು ತನ್ನ ತಾಯಿ ಚಂದ್ರಮ್ಮನಿಗೆ ತಿಳಿಸುತ್ತಾನೆ. ಭಾರತದ ಸೌಂದರ್ಯವನ್ನು ಕಾಪಾಡಲು, ಶ್ರೀಮಂತರು ಆರೋಗ್ಯದಿಂದ ಇರಲು, ವಿಜಯನ ಮೂಗಿಗೆ ಈ ವಾಸನೆ ಬರದಿರುವಂತೆ ಕೊಳಗೇರಿಯಲ್ಲಿದ್ದ ಗುಡಿಸಲುಗಳನ್ನು ನಾಶಪಡಿಸಲಾಗುತ್ತದೆ. ಈ ನಾಟಕದಲ್ಲಿ 'ಈ ದೇಶದ ಸೌಂದರ್ಯವನ್ನು ಗುಡಿಸಲುಗಳು ಹಾಳುಮಾಡುತ್ತಿವೆ. ಬಡವರಿಂದ ಇಡೀ ದೇಶಕ್ಕೆ ಕಳಂಕ ಬಂದಿದೆ. ಬಡವರು ಎಂಬ ಪದ ಕಿವಿಗೆ ಬೀಳುವುದೇ ತಡ ನನ್ನ ಮೂಗಿಗೆ ದುರ್ವಾಸನೆ ಬಡಿಯುತ್ತದೆ' ಎಂಬ ವಿಜಯನ ಮಾತುಗಳು ಶ್ರೀಮಂತ ವರ್ಗದವರಿಗೆ ಬಡವರ, ದಲಿತರ ಮೇಲೆ ಇರುವ ಮನೋಭಾವವನ್ನು ವ್ಯಕ್ತಪಡಿಸುತ್ತದೆ. ಜೊತೆಗೆ ಬಡವರು ಎಂತಹ ಅಸಹಾಯಕ ಸ್ಥಿತಿಯಲ್ಲಿ ಈ ಸಮಾಜದಲ್ಲಿ ಬದುಕುತ್ತಿದ್ದಾರೆ ಎಂಬುದು ಅರಿವಾಗುತ್ತದೆ.

'ಹಸಿದ ಮುಖದ ಹರುಕು ಬಟ್ಟೆಯ ಜನರೇ ಇಲ್ಲದಂತೆ ಮಾಡುವ ಕಾರ್ಯ ನಗರದಲ್ಲಿ ಆರಂಭವಾಗಲಿ' ಎಂಬ ಚನ್ನನ ಮಾತಿನಲ್ಲಿ ನಮ್ಮ ದೇಶದ ನಗರಗಳಲ್ಲಿಯೂ ದಲಿತರ ಬದುಕು ಯಾವ ರೀತಿ ಇರುತ್ತದೆಂಬುದು ಗೋಚರವಾಗುತ್ತದೆ. ಹಸಿವು, ನೋವು, ಶೋಷಣೆಗಳನ್ನು ನಗರ ದಲಿತ ಜನರು ಅನುಭವಿಸುತ್ತಾರೆ ಎಂಬುದು ತಿಳಿಯುತ್ತದೆ.

'ನಗರದ ನಡುವೆ ಇರುವ ಹರಿಜನ ಮುಸ್ಲಿಂರ ಗುಡಿಸಲುಗಳನ್ನು . . . . . ಕೆಡುವಿರಿ ತಡೆಯಲು ಬಂದವರಿಗೆ ತಲೆ ಒಡೆಯಿರಿ' ಎಂಬ ಮಹಾರಾಣಿಯ ಮಾತು ಶ್ರೀಮಂತರು ಬಡವರ ಮೇಲೆ ದೌರ್ಜನ್ಯ ಮಾಡುವ ಪರಿಯನ್ನು ತಿಳಿಸುತ್ತದೆ. ಇಲ್ಲೆಲ್ಲಾ ಸಿದ್ಧಲಿಂಗಯ್ಯನವರು ದಲಿತ ಅನುಭವಗಳ ಮೂಲಕ ತಮ್ಮ ಪ್ರಜ್ಞೆಯನ್ನು ವ್ಯಕ್ತಪಡಿಸಿದ್ದಾರೆ.

ಕೆಳವರ್ಗದ ಶೋಷಣೆಯ ಸ್ವರೂಪವನ್ನು ವಿಶ್ಲೇಷಿಸುವುದೇ ಈ ನಾಟಕಗಳ ಗುರಿಯಾಗಿದೆ. ಇಲ್ಲಿಯ ಪಾತ್ರರಚನೆ, ದೃಶ್ಯ ನಿರ್ಮಾಣದಲ್ಲಿ ಸಿದ್ಧಲಿಂಗಯ್ಯನವರು ಕೌಶಲ ಪೂರ್ಣವಾಗಿ ಚಿತ್ರಿಸಿದ್ದಾರೆ. ಈ ನಾಟಕಗಳಲ್ಲಿನ ಮಾತಿನ ಶೈಲಿಯು ನಾಟಕಗಳಿಗೆ ಮೆರುಗನ್ನಿತ್ತಿದೆ.

"ಪಂಚಮಕ್ಕಿಂತ ನೆಲಸಮ ಈ ದಿಸೆಯಲ್ಲಿ ಪಡೆದಿರುವ ಯಶಸ್ಸು ಗಮನಾರ್ಹವಾದುದು. 'ಪಂಚಮ'ದ ಕ್ರಾಂತಿಕಾರಿಯ ಗೆಲುವಿಗಿಂತ ನೆಲಸಮದ ದಲಿತರ ದುರಂತ ಆಳವಾಗಿ ಮನಸ್ಸಿನಲ್ಲಿ ಬೇರೂರುತ್ತದೆ. ಸಮಕಾಲೀನ ಘಟನೆಯೊಂದನ್ನು ಆಧರಿಸಿ ರಚಿಸಲಾಗಿರುವ ಈ ನಾಟಕದ ಪಾತ್ರ

ಪರಿಪೋಷಣೆ ಮತ್ತು ಸಂಭಾಷಣೆಗಳಲ್ಲಿ ಯಕ್ಷಗಾನ ಸಂಪ್ರದಾಯದ ಧಾಟಿಯನ್ನು ಯಶಸ್ವಿಯಾಗಿ ಅಳವಡಿಸಿಕೊಂಡಿದ್ದಾರೆ. ಇಲ್ಲಿನ ಹಾಡುಗಳು ಭಾವ ತೀವ್ರತೆಯಿಂದ ಕೂಡಿದ್ದು ದುರಂತದ ನೋವನ್ನು ಪರಿಣಾಮಕಾರಿಯಾಗಿ ಮೂಡಿಸುತ್ತದೆ. ಜಾತಿ ಹೋರಾಟ, ವರ್ಗ ಹೋರಾಟದಂತಹ, ಸಮಕಾಲೀನವಾದ ಜ್ವಲಂತ ಸಮಸ್ಯೆಗಳನ್ನು ವಸ್ತುವಾಗಿಸಿಕೊಳ್ಳುವ ಲೇಖಕರು ಎದುರಿಸಬೇಕಾಗುವ ವಿಶಿಷ್ಟ ಸಾಲುಗಳನ್ನು ಅರಿತಿದ್ದಾರೆ. ಮೇಲ್ಜಾತಿ ಮತ್ತು ಮೇಲುವರ್ಗದ ಅನ್ಯಾಯ ಅತ್ಯಾಚಾರಗಳನ್ನು ಬಯಲಿಗೆಳೆಯುವ ಅವರ ನಾಟಕಗಳು ತಮ್ಮವರ ಕೀಳರಿಮೆ, ದುರಾಸೆ, ಹೊಣೆಗೆಡಿ ತನಗಳನ್ನು ಮರೆತಿಲ್ಲ. ಈ ಬಗೆಯ ನಿರ್ಲಿಪ್ತ ಆರೋಗ್ಯಕರ ಧೋರಣೆಗಳನ್ನು ಕಾಪಾಡಿಕೊಂಡು ಬರಲು ಸಾಧ್ಯವಾದರೆ ಸಿದ್ಧಲಿಂಗಯ್ಯನವರಿಂದ ಕನ್ನಡ ರಂಗಭೂಮಿಗೆ ಇಂಥ ಇನ್ನೂ ದಲಿತ ಸಂವೇದನಾ ಕೃತಿಗಳನ್ನು ನಿರೀಕ್ಷಿಸಬಹುದಾಗಿದೆ.[೧]

ಈ ಎರಡು ನಾಟಕಗಳಲ್ಲಿ ದಲಿತ ಧೋರಣೆಯ ಜೊತೆಗೆ ಬಂಡಾಯದ ನಿಲುವುಗಳು ಮೂಡಿಬಂದಿವೆ. ಕೆಳವರ್ಗದವರು ಮೇಲಕ್ಕೆ ಬರುವಲ್ಲಿ ಆಗುವ ಅಡಚಣೆಗಳು, ತೊಂದರೆಗಳು ಸಮಸ್ಯೆಗಳನ್ನು ನಾಟಕದ ಮೂಲಕ ಅಭಿವ್ಯಕ್ತಿಸಿದ್ದಾರೆ. ಸಮಾಜದಲ್ಲಿ ದಲಿತ ಸಮಾಜ ಎಷ್ಟು ಕೆಳವರ್ಗದ್ದು ಎಂಬುದನ್ನು ನೆಲಸಮದಲ್ಲಿ ಬಿತ್ತರಿಸಿದ್ದಾರೆ. ಪಂಚಮ ನಾಟಕದಲ್ಲಿ ದಲಿತರಿಂದಲೂ ಅಧಿಕಾರಿಗಳು ಯಾವ ರೀತಿ ಲಂಚಗುಳಿತನ ಮಾಡುತ್ತಾರೆ, ದಲಿತರು ಹೇಗೆ ಅವರ ಮೋಸದಾಟಕ್ಕೆ ಬಲಿಯಾಗುತ್ತಾರೆ ಎಂಬುದನ್ನು ಮಾರ್ಮಿಕವಾಗಿ ಚಿತ್ರಿಸಿದ್ದಾರೆ. ಒಟ್ಟಾರೆಯಾಗಿ ದಲಿತ ಸಮಾಜದ ಪ್ರಸ್ತುತ ಸ್ಥಿತಿಯನ್ನೇ ಈ ನಾಟಕಗಳಲ್ಲಿ ತಂದಿದ್ದಾರೆಂದು ಹೇಳಬಹುದಾಗಿದೆ.

- ಈ ಭಾಗದ ಬರವಣಿಗೆಯ ಹೆಚ್ಚಿನ ವಿವರಗಳಿಗೆ ಸರಜೂ ಕಾಟ್ಕರ್, ಎಲ್, ಹನುಮಂತಯ್ಯ, ಸಿದ್ಧಲಿಂಗಯ್ಯ, ಚನ್ನಣ್ಣವಾಲಿಕಾರ, ಮುನಿವೆಂಕಟಪ್ಪ, ಅರವಿಂದ ಮಾಲಗತ್ತಿ, ಮ.ನ. ಜವರಯ್ಯ, ಜಿ.ಆರ್. ತಿಪ್ಪೇಸ್ವಾಮಿ ಮುಂತಾದವರ ಮೌಲಿಕ ಬರಹಗಳನ್ನು ಆಧರಿಸಿ ರಚಿಸಲಾಗಿದೆ.

---

[೧] ಹೆಚ್ ದಂಡಪ್ಪ (ಸಂ) : ಬಡವರ ನಗುವಿನ ಶಕ್ತಿ : ಪು.ಸಂ. ೨೩೬.

ಅಧ್ಯಾಯ - ೫

ದೇವನೂರು ಮಹಾದೇವ ಮತ್ತು ಸಿದ್ಧಲಿಂಗಯ್ಯನವರ ಸಾಹಿತ್ಯವನ್ನು ಕುರಿತ ತೌಲನಿಕ ಚಿಂತನೆ.

ದೇವನೂರು ಮಹಾದೇವ ಮತ್ತು ಸಿದ್ದಲಿಂಗಯ್ಯ ಇಬ್ಬರು ಸೃಜನಶೀಲ ಲೇಖಕರು. ಈ ಲೇಖಕರು ತಮ್ಮತನದೊಂದಿಗೆ ದಲಿತತತ್ವವನ್ನು ವ್ಯಕ್ತಪಡಿಸಿದ್ದಾರೆ. ಮಾರ್ಕ್ಸವಾದ, ಅಂಬೇಡ್ಕಾರ್‌ವಾದ, ಲೋಹಿಯಾವಾದಗಳಿಂದ ಪ್ರಭಾವಿತರಾಗಿ ಸಾಹಿತ್ಯ ಕೃಷಿ ಮಾಡಿದ್ದಾರೆ. ದಲಿತ ಚಳುವಳಿಗಳ ಮೂಲಕ ಬೆಳೆದಂತಹ ಕವಿಗಳೂ ಆಗಿದ್ದಾರೆ. ದೇವನೂರು ಮಹಾದೇವ ಅವರು ಕಥೆ, ಕಾದಂಬರಿ ಮೂಲಕ ದಲಿತ ಪ್ರಜ್ಞೆಯನ್ನು ವ್ಯಕ್ತಪಡಿಸಿದ್ದಾರೆ. ದಲಿತ ಪ್ರಜ್ಞೆಯಿಂದ ಮೂಡಿಬಂದ ಇವರ ಕಥೆಗಳು ವಾಸ್ತವತಾವಾದಿ ನೆಲೆಯಿಂದ ಬಂದಂತಹವಾಗಿದೆ. ಈ ವ್ಯವಸ್ಥೆಯನ್ನು ಒಪ್ಪಿಕೊಂಡು ಸಾಗುವ ಪಾತ್ರಗಳು ಇವರ ಕಥೆ ಕಾದಂಬರಿಗಳಲ್ಲಿ ಬಂದಿವೆ. ಸಾಂದರ್ಭಿಕವಾಗಿ ಧ್ವನಿಯೆತ್ತಲು ಪ್ರಯತ್ನಿಸಿ ಕೆಲವು ಪಾತ್ರಗಳು ವಿಫಲವಾಗಿವೆ. ಉದಾ: ಮಾರಿಕೊಂಡವರು ಕಥೆಯಲ್ಲಿನ ಬೀರ, ಒಡಲಾಳದ ಸಾಕವ್ವ, ಅಮಾಸಕಥೆಯ ಅಮಾಸ, ಮೂಡಲ ಸೀಮೇಲಿ ಕೊಲೆಗಿಲೆ ಮುಂತಾದ ಕಥೆಯ ರಂಗಪ್ಪ ಇತ್ಯಾದಿ. ಈ ಪಾತ್ರಗಳು ದಿನ ನಿತ್ಯದ ವ್ಯವಹಾರಿಕ ಬದುಕಿನಲ್ಲಿ ತಮ್ಮನ್ನೇ ತಾವು ಮಾರಿಕೊಂಡು ಬಿಡುವ ಅನಿವಾರ್ಯದ ಪ್ರಸಂಗಗಳು ಹೇಗೆ ಬರುತ್ತವೆ ಎಂಬುದನ್ನು ಸಮರ್ಥವಾಗಿ ಬಿಂಬಿಸಿದ್ದಾರೆ. ಇವರು ದಲಿತ ಭಾಷೆಯನ್ನು ಸಾಹಿತ್ಯವಾಗಿ ಸಮರ್ಥರೀತಿಯಲ್ಲಿ ಬಳಸಿಕೊಂಡಿದ್ದಾರೆ. ಮಾರಿಕೊಂಡವರು, ಮೂಡಲ ಸೀಮೇಲಿ ಕೊಲೆಗಿಲೆ ಮುಂತಾಗಿ, ಅಮಾಸ, ಗ್ರಸ್ತರು ಕಥೆಗಳಲ್ಲಿ ಮತ್ತು ಒಡಲಾಳ ಕಾದಂಬರಿಯಲ್ಲಿ ಇದು ವ್ಯಕ್ತವಾಗಿದೆ. ಕುಸುಮಬಾಲೆಯಲ್ಲಿ ಭಾಷೆಯೇ ಮುಖ್ಯವಾಗಿ ದಲಿತ ಪ್ರಜ್ಞೆ ಅಷ್ಟಾಗಿ ಉಜ್ವಲಗೊಂಡಿಲ್ಲ.

ಸಿದ್ಧಲಿಂಗಯ್ಯನವರು ಕಾವ್ಯ ಮತ್ತು ನಾಟಕ ಕ್ಷೇತ್ರಗಳಲ್ಲಿ ಸಾಹಿತ್ಯ ಕೃಷಿ ಮಾಡಿದ್ದಾರೆ. ಇವರು ಹೆಚ್ಚಾಗಿ ಕವಿ ಎಂದೇ ಗುರುತಿಸಲ್ಪಟ್ಟಿದ್ದಾರೆ. ಇವರ ಹೊಲೆ ಮಾದಿಗರ ಹಾಡು ಕವನಸಂಕಲನದ ಮೂಲಕ ದಲಿತ ಪ್ರಜ್ಞೆಯನ್ನು ನೇರವಾಗಿ ವ್ಯಕ್ತಪಡಿಸಿದ್ದಾರೆ. ಆದರೆ ದೇವನೂರರು ವಾಸ್ತವತಾವಾದಿ ಸ್ವಾಭಿಮಾನಿಯಾಗಿ ದಲಿತ ಪ್ರಜ್ಞೆಯನ್ನು ವ್ಯಕ್ತಪಡಿಸಿದ್ದಾರೆ. ಆದರೆ

ಇಬ್ಬರ ನಿಲುವು ಒಂದೇ. ದಲಿತರ ನೋವು, ಬಡತನ, ಹಸಿವು, ಅವರು ಶೋಷಣೆಗೊಳಪಟ್ಟಿರುವುದು ಪ್ರಸ್ತುತ ವ್ಯವಸ್ಥೆಯಲ್ಲಿ ಅವರು ಬದುಕುತ್ತಿರುವ ಪರಿಸ್ಥಿತಿಯನ್ನು ದೇವನೂರರು ಕಥೆ ಕಾದಂಬರಿಗಳ ಮೂಲಕ ತಿಳಿಸಿದರೆ ಸಿದ್ಧಲಿಂಗಯ್ಯನವರು ಕಾವ್ಯ ಮತ್ತು ನಾಟಕಗಳ ಮುಖಾಂತರ ವ್ಯಕ್ತಪಡಿಸಿದ್ದಾರೆ. ಸಿದ್ಧಲಿಂಯ್ಯನವರು ಕೂಡ ದಲಿತ ಭಾಷೆಯನ್ನು ಸಾಹಿತ್ಯಿಕ ಭಾಷೆಯಾಗಿ ಕಾವ್ಯ ಮತ್ತು ನಾಟಕಗಳಲ್ಲಿ ಬಳಸಿಕೊಂಡಿದ್ದಾರೆ. ಸಿದ್ಧಲಿಂಗಯ್ಯನವರು ಮತ್ತು ದೇವನೂರರು ಭಾಷೆಯ ಮೂಲಕವೇ ಪ್ರತಿಭಟನೆ ಮಾಡುತ್ತಾರೆ. ಆದರೆ ದೇವನೂರರು ತಣ್ಣನೆಯ ಕವಿ ಎಂದು ಕರೆಸಿಕೊಂಡರೆ ಸಿದ್ಧಲಿಂಗಯ್ಯನವರು ಆಕ್ರೋಷದ ಕವಿ ಎಂದು ಕರೆಸಿಕೊಂಡಿದ್ದಾರೆ.

ದೇವನೂರರು ಒಡಲಾಳ, ಕುಸುಮಬಾಲೆ ಮತ್ತು ಕಥೆಗಳಲ್ಲಿ ಕೆಳವರ್ಗ, ಶ್ರೀಮಂತ ವರ್ಗ ಮತ್ತು ಅಧಿಕಾರಿಶಾಹಿವರ್ಗ ಎಂಬ ಮೂರು ವರ್ಗಗಳ ಸಂಘರ್ಷ ಕಾಣಿಸಿಕೊಂಡಿದೆ. ಸಿದ್ಧಲಿಂಗಯ್ಯನವರ 'ಏಕಲವ್ಯ' ನಾಟಕದಲ್ಲೂ ಕೂಡ ಮೇಲ್ವರ್ಗ, ಶ್ರೀಮಂತ ವರ್ಗ ಮತ್ತು ಕೆಳವರ್ಗಗಳ ನಡುವೆ ಸಂಘರ್ಷಗಳು ಕಾಣಿಸಿಕೊಂಡಿವೆ. ಇವರ ಪಂಚಮ ನಾಟಕದಲ್ಲಿ ಅಧಿಕಾರಿಶಾಹಿವರ್ಗ ಮತ್ತು ಕೆಳವರ್ಗ ಕಾನಿಸಿಕೊಂಡರೆ, ನೆಲಸಮದಲ್ಲಿ ಮೇಲ್ವರ್ಗ ಮತ್ತು ಕೆಳವರ್ಗಗಳು ಕಾಣಿಸಿಕೊಂಡಿವೆ. ದೇವನೂರು ಮಹಾದೇವ ಅವರ ಸಾಹಿತ್ಯದ ಕೆಳವರ್ಗದ ಪಾತ್ರಗಳಾಗಿ ಸಾಕವ್ವ, ಬೀರ, ರಂಗಪ್ಪ, ಚೆನ್ನ ಮುಂತಾದವರು ಕಾಣಿಸಿಕೊಂಡಿದ್ದಾರೆ. ಸಿದ್ಧಲಿಂಗಯ್ಯವರ ಸಾಹಿತ್ಯದ ಕೆಳವರ್ಗದ ಪಾತ್ರಗಳಾಗಿ ಏಕಲವ್ಯ, ಪಂಚಮ, ಪುಟ್ಟಲಕ್ಕಮ್ಮ ಮುಂತಾದವರು ಕಾಣಿಸಿಕೊಂಡಿದ್ದಾರೆ. ಇಬ್ಬರ ಸಾಹಿತ್ಯದಲ್ಲೂ ವರ್ಗಸಂಘರ್ಷವಿರುವುದು ಕಂಡು ಬರುತ್ತದೆ. ಸಾಮಾಜಿಕ, ರಾಜಕೀಯ, ಆರ್ಥಿಕ ಪರಿಸ್ಥಿತಿಗಳನ್ನು ಅಲ್ಲಿರುವ ಸಮಸ್ಯೆಗಳನ್ನು ಇಬ್ಬರು ವ್ಯಕ್ತಪಡಿಸಿದ್ದಾರೆ.

ಅಧ್ಯಾಯ – ೬

ಸಮಾರೋಪ

ಜೈನ, ವೀರಶೈವ, ವೈದಿಕ ಧರ್ಮಗಳ ಹಿನ್ನಲೆಯಲ್ಲಿ ಹಳಗನ್ನಡ ಮತ್ತು ನಡುಗನ್ನಡ ಸಾಹಿತ್ಯ ರಚನೆಯಾಗಿದೆ. ಮುಖ್ಯವಾಗಿ ನಡುಗನ್ನಡ ಸಾಹಿತ್ಯದಲ್ಲಿ ಕೆಳವರ್ಗ ಪರವಾದ ಧ್ವನಿ ಬಹಿರಂಗವಾಗಿ ಕಾಣಿಸಿಕೊಂಡಿದೆ. ಕನ್ನಡ ದಲಿತ ಸಾಹಿತ್ಯವನ್ನು ೧೨ನೇ ಶತಮಾನದ ವಚನ ಸಾಹಿತ್ಯದಿಂದ ಗುರುತಿಸಲಾಗುತ್ತದೆ. ವಚನಸಾಹಿತ್ಯದಲ್ಲಿ ಮಾದಾರ ಚೆನ್ನಯ್ಯ, ಚೆನ್ನಬಸವಣ್ಣ, ಡೋಹರ ಕಕ್ಕಯ್ಯ ಮೊದಲಾದವರೆಲ್ಲ ದಲಿತರೇ ಆಗಿದ್ದಾರೆ. ಪ್ರತಿಭಟನೆ ಎಂಬುದು ಈ ವಚನ ಸಾಹಿತ್ಯದಲ್ಲಿಯೇ ಮೊದಲು ಕಾಣಿಸಿಕೊಂಡದ್ದು.

ಆಧುನಿಕ ಕನ್ನಡ ಸಾಹಿತ್ಯದಲ್ಲಿ ನವೋದಯ, ಪ್ರಗತಿಶೀಲ, ನವ್ಯಪಂಥಗಳು ಮೊದಲು ಕಾಣಿಸಿಕೊಂಡವು. ಈ ಸಾಹಿತ್ಯಘಟ್ಟಗಳಲ್ಲಿ ದಲಿತ ಪ್ರಜ್ಞೆಯ ಬಗ್ಗೆ ಕೆಲವು ಮಾತುಗಳು ಬಂದರೂ, ಪರಿಪೂರ್ಣವಾಗಿ ವ್ಯಕ್ತಗೊಂಡಿರಲಿಲ್ಲ. ಕುವೆಂಪು, ಕಾರಂತ, ಅನಂತಮೂರ್ತಿ, ಲಂಕೇಶ್ ಮುಂತಾದವರು ಕೆಳವರ್ಗದ ಪರವಾದ ಮನೋಧರ್ಮವನ್ನು ವ್ಯಕ್ತಪಡಿಸಿದ್ದಾರೆ.

೧೯೭೦ರ ದಶಕದಲ್ಲಿ ದಲಿತ ಬಂಡಾಯ ಸಾಹಿತ್ಯ ಪ್ರಮುಖವಾಗಿ ಕಾಣಿಸಿಕೊಂಡಿತು. ಈ ದಲಿತ ಸಾಹಿತ್ಯದಲ್ಲಿ ಸಿದ್ಧಲಿಂಗಯ್ಯ, ದೇವನೂರು ಮಹಾದೇವ, ಅರವಿಂದ ಮಾಲಗತ್ತಿ, ಮುನಿವೆಂಕಟಪ್ಪ, ಮೂಳ್ಳೂರು ನಾಗರಾಜ್, ಮೊಗಳ್ಳಿ ಗಣೇಶ್ ಮುಂತಾದವರು ದಲಿತ ಸಾಹಿತ್ಯವನ್ನು ಹೆಚ್ಚು ಪ್ರಚುರ ಪಡಿಸಿದರು.

ಈ ನಿಬಂಧದಲ್ಲಿ ದೇವನೂರು ಮಹಾದೇವ ಮತ್ತು ಸಿದ್ಧಲಿಂಗಯ್ಯನವರ ಸಾಹಿತ್ಯದಲ್ಲಿ ದಲಿತ ಪ್ರಜ್ಞೆಯನ್ನು ಕುರಿತು ವಿವೇಚಿಸಲಾಗಿದೆ. ಈ ಇಬ್ಬರು ಲೇಖಕರು ದಲಿತ ಸಾಹಿತ್ಯಕ್ಕೆ ತಮ್ಮದೆಯಾದ ಕೊಡುಗೆಯನ್ನಿತ್ತಿದ್ದಾರೆ. ದಲಿತ ಪ್ರಜ್ಞೆಯನ್ನು ಮುಖ್ಯವಾಗಿಟ್ಟು ಕೊಂಡು ದಲಿತ ಅನುಭವದ ಮೂಲಕ ದಲಿತ ಪರಿಸ್ಥಿತಿಗಳನ್ನು ತುಂಬಾ ಮಾರ್ಮಿಕವಾಗಿ ಚಿತ್ರಿಸಿದ್ದರೆ, ದೇವನೂರರ ದ್ಯಾವನೂರು ಕಥಾ ಸಂಕಲನ, ಒಡಲಾಳ ಮತ್ತು ಕುಸುಮ ಬಾಲೆಯಂತಹ ಕಾದಂಬರಿಗಳಲ್ಲಿ ದಲಿತತ್ವ, ಬಡತನ, ಶೋಷಣೆ, ದೌರ್ಜನ್ಯಗಳು ಭಾಷೆಯ ಮೂಲಕವೇ

ಪ್ರತಿಭಟನೆಗೊಂಡಿವೆ. ಸಮಾಜ ವ್ಯವಸ್ಥೆಯಲ್ಲಿರುವ ಸಮಸ್ಯೆಗಳನ್ನು ಸೂಕ್ಷ್ಮವಾಗಿ ಚಿತ್ತರಿಸಿದ್ದಾರೆ. ಸಿದ್ಧಲಿಂಗಯ್ಯನವರು ದಲಿತ ಸಾಹಿತ್ಯಕ್ಕೆ ಅಪಾರ ಕೊಡುಗೆ ನೀಡಿದ್ದಾರೆ. ಇವರು ನಾಟಕ ಮತ್ತು ಕಾವ್ಯಗಳನ್ನು ಬರೆದಿದ್ದಾರೆ ಆದರೆ ಇವರು ಕವಿಯೆಂದೇ ಗುರುತಿಸಲ್ಪಟ್ಟಿದ್ದಾರೆ. ಇವರು ತಮ್ಮ ಸಾಹಿತ್ಯದ ಮೂಲಕ ದಲಿತ ಪ್ರಜ್ಞೆಯನ್ನು ನೇರವಾಗಿ ವ್ಯಕ್ತಪಡಿಸಿದ್ದಾರೆ. ವಾಸ್ತವ ಬದುಕಿನ ಚಿತ್ರಣ ಇವರ ಕಾವ್ಯ ನಾಟಕಗಳಲ್ಲಿ ಅಭಿವ್ಯಕ್ತಗೊಂಡಿದೆ. ಒಟ್ಟಾರೆಯಾಗಿ ಈ ಇಬ್ಬರು ಲೇಖಕರು ತಮ್ಮ ಸಾಹಿತ್ಯದ ಮೂಲಕವೇ ಪ್ರತಿಭಟನೆಯನ್ನು ವ್ಯಕ್ತಪಡಿಸಿದ್ದಾರೆ. ಕನ್ನಡ ಸಾಹಿತ್ಯಕ್ಕೆ ಚಿರಸ್ಮರಣೀಯ ಕೊಡುಗೆ ನೀಡಿ ತಮ್ಮ ಜೀವನವನ್ನು ಸಾರ್ಥಕಪಡಿಸಿಕೊಂಡಿದ್ದಾರೆ.

ಗ್ರಂಥ ಋಣ

೧. ದಲಿತ ಮಾರ್ಗ : ಅರವಿಂದ ಮಾಲಗತ್ತಿ [ಸಂ] ಪ್ರ. ಕನ್ನಡ ಪುಸ್ತಕ ಪ್ರಾಧಿಕಾರ : ಬೆಂಗಳೂರು : ೨೦೦೨

೨. ದಲಿತ ಸಾಹಿತ್ಯ ಪ್ರವೇಶಿಕೆ : ಅರವಿಂದ ಮಾಲಗತ್ತಿ : ಪ್ರ. ಶೈಲ ಪ್ರಕಾಶನ : ಮುದ್ದೆ ಬಿಹಾಳ್ : ೧೯೯೭.

೩. ಕನ್ನಡ ಕಥಾ ಸಾಹಿತ್ಯದಲ್ಲಿ ಸಾಂಸ್ಕೃತಿಕ ಸಂಘರ್ಷ : ಎನ್.ಕೆ. ಕೋದಂಡರಾಮ : ಪ್ರ. ರಾಜೇಂದ್ರ ಪ್ರಿಂಟರ್ಸ್ ಮತ್ತು ಪಬ್ಲಿಷರ್ : ಮೈಸೂರು – ೧೯೯೬

೪. ಯಾರ ಜಪ್ತಿಗೂ ಸಿಗದ ನವಿಲುಗಳು : ಪಿ. ಚಂದ್ರಿಕ [ಸಂ] : ಪ್ರ. ಅಭಿನವ ಪ್ರಕಾಶನ : ಬೆಂಗಳೂರು – ೧೯೯೯

೫. ದಲಿತ ಸಾಹಿತ್ಯದ ನೆಲೆ ಬೆಲೆ : ಜಿ. ಆರ್. ತಿಪ್ಪೇಸ್ವಾಮಿ : ಪ್ರ. ವಿಚಾರವಾಧಿ ಪ್ರಕಾಶನ : ಮೈಸೂರು – ೨೦೦೨.

೬. ಬವವರ ನಗುವಿನ ಶಕ್ತಿ : ಹೆಚ್. ದಂಡಪ್ಪ [ಸಂ] : ಪ್ರ. ಅಂಕಿತ ಪುಸ್ತಕ ಪ್ರಕಾಶನ ಬೆಂಗಳೂರು – ೨೦೦೧.

೭. ಮೂರು ದಲಿತ ಕಮ್ಮಟಗಳು : ಜಿ. ಆರ್. ದುರ್ಗಾದಾಸ್ ಮತ್ತು ಜಿ.ವಿ.ಆನಂದ ಮೂರ್ತಿ : ಪ್ರ. ಕನ್ನಡ ಸಂಸ್ಕೃತಿ ಇಲಾಖೆ ಮತ್ತು ಕರ್ನಾಟಕ ಸಾಹಿತ್ಯ ಅಕಾಡೆಮಿ – ೧೯೯೯.

೮. ಸಮಗ್ರ ಕೃತಿಗಳು : ದೇವನೂರ ಮಹಾದೇವ : ಪ್ರ. ಅಭಿರುಚಿ ಪ್ರಕಾಶನ : ಮೈಸೂರು – ೧೯೯೨.

೯. ಸದನದಲ್ಲಿ ಸಿದ್ದಲಿಂಗಯ್ಯ : ದೊಡ್ಡ ಹುಲ್ಲೂರು ರುಕ್ಕೋಜಿ[ಸಂ] : ಪ್ರ. ಮೂಲಭಾರತಿ– ೧೯೯೭.

೧೦. ದೇವನೂರು ಮಹಾದೇವ : ಬಿ.ಎಂ. ಪುಟ್ಟಯ್ಯ ಪ್ರ. ಪ್ರಸಾರಂಗ ಕನ್ನಡ ವಿಶ್ವವಿದ್ಯಾಲಯ – ಹಂಪಿ – ೧೯೯೫.

೧೧. ಕನ್ನಡ ಸಾಹಿತ್ಯದಲ್ಲಿ ಯುದ್ಧ ಮತ್ತು ಶಾಂತಿ : ಬರಗೂರು ರಾಮಚಂದ್ರಪ್ಪ : ಪ್ರ. ಕರ್ನಾಟಕ ಸಾಹಿತ್ಯ ಅಕಾಡೆಮಿ – ೧೯೯೩.

೧೨. ಸ್ಕಂದಗಿರಿ ನೆನಪಿನ ಸಂಪುಟ : ಜಿ.ಜಿ. ಮಂಜುನಾಥನ್ [ಸಂ] : ಗುಂಡ್ಲುಪೇಟೆ – ೧೯೯೭.

೧೩. ಡಾ॥ ಸಿದ್ದಲಿಂಗಯ್ಯ : ಮಾಧವ ಪೆರಾಜೆ : ಪ್ರ. ಪ್ರಸಾರಂಗ ಕನ್ನಡ ವಿಶ್ವವಿದ್ಯಾಲಯ – ಹಂಪಿ–೧೯೯೫.

೧೪. ಕನ್ನಡ ಮರಾಠಿ ದಲಿತ ಸಾಹಿತ್ಯ : ಸರೂಜ್ ಕಾಟ್ಕರ್ :

೧೫. ಹಕ್ಕಿನೋಟ : ಸಿದ್ಧಲಿಂಗಯ್ಯ : ಪ್ರ. ಕಲ್ಯಾಣಿ ಪ್ರಕಾಶನ : ಬೆಂಗಳೂರು – ೧೯೯೦.

೧೬. ಹೊಲೆಮಾದಿಗರ ಹಾಡು : ಸಿದ್ಧಲಿಂಗಯ್ಯ : ಪ್ರ. ಜನಸ್ನೇಹ ಪ್ರಕಾಶನ : ಬೆಂಗಳೂರು – ೧೯೯೧.

೧೭. ಸಾವಿರಾರು ನದಿಗಳು : ಸಿದ್ಧಲಿಂಗಯ್ಯ : ಪ್ರ. ಗೀಚು ಪ್ರಕಾಶನ : ಬೆಂಗಳೂರು – ೧೯೯೦.

೧೮. ಕಪ್ಪು ಕಾಡಿನ ಹಾಡು : ಸಿದ್ಧಲಿಂಗಯ್ಯ : ಪ್ರ. ರೂಪಧ್ವನಿ ಪ್ರಕಾಶನ. ಬೆಂಗಳೂರು – ೧೯೮೨.

೧೯. ಏಕಲವ್ಯ : ಸಿದ್ಧಲಿಂಗಯ್ಯ : ಪ್ರ. ಅಜಂತ ಪುಸ್ತಕ ಪ್ರಕಾಶನ – ಬೆಂಗಳೂರು : ೧೯೮೬.

೨೦. ಪಂಚಮ ಮತ್ತು ನೆಲಸಮ : ಸಿದ್ಧಲಿಂಗಯ್ಯ : ಪ್ರ. ಪಂಚಮ ಪ್ರಕಾಶನ – ಬೆಂಗಳೂರು : ೧೯೮೦.

೨೧. ಮೆರವಣಿಗೆ : ಸಿದ್ದಲಿಂಗಯ್ಯ : ಪ್ರ. ಅಂಕಿತ ಪುಸ್ತಕ ಪ್ರಕಾಶನ – ಬೆಂಗಳೂರು – ೨೦೦೦.